ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 25 ಬುಧವಾರ 2025

ಸಂಪುಟ: 46 | ಸಂಚಿಕೆ: 69 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅಂತರಿಕ್ಷಯಾನ



ಬೆಂಗಳೂರು, ಜೂ.24– ಭಾರತದ ಬಾಹ್ಯಾಕಾಶ ಯಾನದಲ್ಲಿ ಒಂದು ದೊಡ್ಡ ಮತ್ತು ಐತಿಹಾಸಿಕ ದಿನ ಕೊನೆಗೂ ಹತ್ತಿರ ಬಂದಿದ್ದು, ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರು ಬುಧವಾರ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಲಿದ್ದಾರೆ.

ಜೂನ್ 25ರಂದು ಆಕ್ಸಿಯಮ್–4 ಮಿಷನ್ ಉಡಾವಣೆ ಮಾಡಲಾಗುವುದು ಎಂದು ಅಮೆರಿಕದ ಬಾಹ್ಯಾಕಾಶ ಸಂಸ್ಥೆ ನಾಸಾ ತಿಳಿಸಿದೆ.

ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ನೇತೃತ್ವದ ಆಕ್ಸಿಯಮ್–4 ಬಾಹ್ಯಾಕಾಶ ಯೋಜನೆ ಜೂನ್ 25 ರಂದು ಉಡಾವಣೆಗೊಳ್ಳಲಿದೆ ಎಂದು ನಾಸಾ ಮತ್ತು ಸ್ಪೇಸ್‌ಎಕ್ಸ್ ಜಂಟಿಯಾಗಿ ಭರವಸೆ ನೀಡಿದೆ. ತಾಂತ್ರಿಕ ತೊಂದರೆಗಳ ಕಾರಣಕ್ಕೆ ಈಗಾಗಲೇ ಹಲವು ಬಾರಿ ಮುಂದೂಡಲ್ಪಟ್ಟಿದ್ದ ಆಕ್ಸಿಯಮ್–4 ಬಾಹ್ಯಾಕಾಶ ಕಾರ್ಯಾಚರಣೆಯನ್ನು ಎಲ್ಲಾ ತಾಂತ್ರಿಕ ದೋಷಗಳನ್ನು ನಿವಾರಣೆ ಮಾಡಿದ ಬಳಿಕ ಕಾರ್ಯಾಚರಣೆಗೆ ಸಿದ್ಧಪಡಿಸಲಾಗಿದ್ದು, ಬುಧವಾರ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವುದು ಎಂದು ತಿಳಿಸಿದೆ. ಆಕ್ಸಿಯಂ–4 ಮಿಷನ್ ಜೂ.25ರಂದು ಬೆಳಗಿನ ಜಾವ 2:31ಕ್ಕೆ ಫ್ಲೋರಿಡಾದಲ್ಲಿರುವ ■ 6ನೇ ಪುಟಕ್ಕೆ

ಶಾಸಕರ ಸಿಟ್ಟು ಶಮನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮದ್ದು!

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಕೋಟಿ!

- ದೆಹಲಿಯಿಂದ ಮರಳುತ್ತಲೇ ಪ್ರತಿನಿತ್ಯ ಒನ್ ಟು ಒನ್ ಮಾತುಕತೆ; ಅಭಿವೃದ್ಧಿ ಬೇಡಿಕೆಗೆ ಅಸ್ತು
- ಅಧಿಕಾರಿಗಳ ವಿರುದ್ಧ ಶಾಸಕರ ಆಕ್ರೋಶ; ತಕ್ಷಣ ಸ್ಪಂದಿಸಲು ಅಧಿಕಾರಿಗಳಿಗೆ ಮುಖ್ಯ ಕಾರ್ಯದರ್ಶಿ ಕೂಡ ತಾಕೀತು

ಬೆಂಗಳೂರು, ಜೂ. 24(ಕೆಎಂಶಿ)– ಆಡಳಿತಶಾಹಿ ವಿರುದ್ಧ ಪಕ್ಷದ ಶಾಸಕರೇ ತಿರುಗಿಬೀಳುತ್ತಿರುವುದರಿಂದ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಭಿವೃದ್ಧಿ ಕಾರ್ಯಗಳಿಗಾಗಿ ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ತಲಾ 50 ಕೋಟಿ ರೂ. ಬಿಡುಗಡೆ ಮಾಡಲು ನಿರ್ಧರಿಸಿದ್ದಾರೆ.

ಬರುವ ಜುಲೈ ತಿಂಗಳಲ್ಲೇ ಅನುದಾನ ಬಿಡುಗಡೆಯಾಗಲಿದ್ದು, ಕ್ಷೇತ್ರದ ಶಾಸಕರು ಮಾಡುವ ಶಿಫಾರಸಿನ ಮೇಲೆ ಅಧಿಕಾರಿಗಳು ಮೂಲಸೌಕರ್ಯಗಳನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಳ್ಳಬೇಕು.

ಹಿರಿಯ ಶಾಸಕರಾದ ಬಿ.ಆರ್.ಪಾಟೀಲ್, ಎನ್.ವೈ.ಗೋಪಾಲಕೃಷ್ಣ, ಬೇಳೂರು ಗೋಪಾಲಕೃಷ್ಣ, ರಾಜುಕಾಗೆ ಸೇರಿದಂತೆ ಹಲವರು ಅಪಸ್ವರ ಎತ್ತಿದ ಬೆನ್ನಲ್ಲೇ ಮುಖ್ಯಮಂತ್ರಿ ಅವರು, ಅವರುಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಮುಂದಾಗಿದ್ದಾರೆ.

ದೆಹಲಿಯಿಂದ ಹಿಂತಿರುಗುತ್ತಿದಂತೆ ಮುಖ್ಯಮಂತ್ರಿ ಅವರು, ಪ್ರತಿನಿತ್ಯ ಬೆಳಗ್ಗೆ ಪಕ್ಷದ ಶಾಸಕರನ್ನು ತಂಡ ತಂಡವಾಗಿ ಉಪಾಹಾರಕ್ಕೆ ಕರೆದು ಅವರ ಕಷ್ಟಸುಖ ಆಲಿಸಿ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ತೀರ್ಮಾನಕ್ಕೆ ಬಂದಿದ್ದಾರೆ.

ಅಷ್ಟೇ ಅಲ್ಲ, ಕಾನೂನುಬದ್ಧವಾಗಿ ವಿಧಾನಮಂಡಲದ, ಅದರಲ್ಲೂ ವಿಧಾನಸಭೆ ಸದಸ್ಯರು ಮಾಡಿದ ಮನವಿಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸುವಂತೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದ್ದಾರೆ.

ಪಕ್ಷದ ಶಾಸಕರುಗಳು ಪ್ರತಿನಿತ್ಯ ಒಬ್ಬರಲ್ಲ ಒಬ್ಬರು ಆಡಳಿತಶಾಹಿ ವಿರುದ್ಧ ತಿರುಗಿಬಿದ್ದಿರುವುದು ಪಕ್ಷ ಮತ್ತು ಸರ್ಕಾರಕ್ಕೆ ಮುಜುಗರ ಉಂಟುಮಾಡಿದೆ.

ನವೆಂಬರ್ ವೇಳೆಗೆ ಮುಖ್ಯಮಂತ್ರಿಗಾದಿ ದೊರೆಯುತ್ತದೆ ಎಂಬ ವಿಶ್ವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಈಗಾಗಲೇ ಪಕ್ಷದ ಶಾಸಕರಿಗೆ ರಾಜಾತಿಥ್ಯ ನೀಡುತ್ತಿದ್ದಾರೆ.

ಕಳೆದ ಕೆಲವು ದಿನಗಳಿಂದ ಸದಾಶಿವನಗರದ ತಮ್ಮ ನಿವಾಸಕ್ಕೆ ಬರುವ ಶಾಸಕರಿಗೆ ಪ್ರತ್ಯೇಕ ಕೊಠಡಿಯಲ್ಲಿ ಕೂರಿಸಿ ಅವರ ಅಹವಾಲುಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಕೊಡುವಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.

ಶಾಸಕರ ಅಹವಾಲುಗಳಿಗೆ ಸ್ಪಂದಿಸಲು ವಿಶೇಷ ಅಧಿಕಾರಿಗಳನ್ನು ನೇಮಿಸಿದ್ದಾರೆ. ಈ ಮೊದಲು ತೀರಾ ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಈ ಮಧ್ಯೆ ದೆಹಲಿಯ ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಹಾಗೂ ಪಕ್ಷದ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ಕಳೆದ ಎರಡು ವರ್ಷಗಳಲ್ಲಿ ■ 6ನೇ ಪುಟಕ್ಕೆ



ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನವದೆಹಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿಯಾಗಿ ನೆನೆಗುದಿಗೆ ಬಿದ್ದಿರುವ ಮಸೂದೆಗಳಿಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು. ಈ ವೇಳೆ ಸಚಿವರಾದ ಕೆ.ಜೆ.ಜಾರ್ಜ್, ಹೆಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ, ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಉಪಸ್ಥಿತರಿದ್ದರು.

ಪ್ರವಾಹ ಅನಾಹುತಕ್ಕೆ ವಿಶೇಷ ಅನುದಾನ ಕಲ್ಪಿಸಿ

ಕೇಂದ್ರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಡಿಕೆ

ನವದೆಹಲಿ, ಜೂ.24– ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಪ್ರವಾಹದಿಂದ ಸಂಭವಿಸುವ ಅನಾಹುತಗಳನ್ನು ನಿಭಾಯಿಸಲು ಕೇಂದ್ರದಿಂದ ವಿಶೇಷ ಅನುದಾನ ಕೋರಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭೇಟಿ ನಂತರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಾಗತಿಕ ಬೆಂಗಳೂರು ನಗರದ ಬಂಡವಾಳ ಕಾರ್ಯಗಳಿಗೆ 1.15 ಲಕ್ಷ ಕೋಟಿ ಸೇರಿದಂತೆ ಮಲೆನಾಡು ಮತ್ತು ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಪ್ರವಾಹದಿಂದಾಗುವ ಅನಾಹುತಗಳನ್ನು ನಿಭಾಯಿಸಲು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ವಿತ್ತ ಸಚಿವರನ್ನು ಕೋರಲಾಗಿದೆ ಎಂದರು.

ವಾರದ ಹಿಂದೆ 16ನೇ ಹಣಕಾಸು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರನ್ನು ಭೇಟಿ ಮಾಡಿ, ಎರಡನೇ ಹೆಚ್ಚುವರಿ ಮನವಿಯನ್ನು ನೀಡಲಾಗಿದೆ. 14ನೇ ಹಣಕಾಸು ಆಯೋಗದಲ್ಲಿ ಶೇ.4.7 ಮತ್ತು 15ನೇ ಹಣಕಾಸು ಆಯೋಗದಲ್ಲಿ ಶೇ.3.6 ಅಡ್ಡವಾಗಿ ತೆರಿಗೆ ಹಂಚಿಕೆಯಾಗಿದ್ದು, ಶೇ.1.1ರಷ್ಟು ಕಡಿಮೆಯಾಗಿದೆ. ಇದು ಒಟ್ಟಾರೆ ಅನುದಾನ ಹಂಚಿಕೆಯಲ್ಲಿ ಶೇ.23ಕ್ಕಿಂತಲೂ ಕಡಿಮೆಯಾಗಿದೆ. ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ 63 ಸಾವಿರ ಕೋಟಿ, ಅನ್ಯಾಯವಾಗಿದೆ. ರಾಜ್ಯಕ್ಕೆ ಮೀಸಲಿಡಲಾಗಿದ್ದ ವಿಶೇಷ ಅನುದಾನ 5495 ಕೋಟಿ, ಪೆರಿಫೆರಲ್ ರಿಂಗ್ ರೋಡ್‌ಗೆ 3000 ಕೋಟಿ, ಬೆಂಗಳೂರಿನ ಕೆರೆಗಳ ಅಭಿವೃದ್ಧಿಗಾಗಿ 3000 ಕೋಟಿ ಸೇರಿದಂತೆ ಒಟ್ಟು 11,495 ಕೋಟಿ ಅನುದಾನ ಘೋಷಣೆ ಮಾಡಲಾಗಿತ್ತು. ■ 6ನೇ ಪುಟಕ್ಕೆ

> ರಾಷ್ಟ್ರಪತಿಗಳನ್ನು ಇಂದು ಭೇಟಿ ಮಾಡಿ ಅನುಮೋದನೆಯಾಗದಿರುವ ಏಳು ಬಿಲ್‌ಗಳ ಬಗ್ಗೆ ಚರ್ಚಿಸಲಾಗಿದೆ. ಬಿಲ್ಲುಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಲಾಗಿದೆ ಎಂದು ಅವರು ತಿಳಿಸಿದರು. ಅವುಗಳನ್ನು ತರಿಸಿ ಅನುಮೋದನೆ ನೀಡಬೇಕೆಂದು ಮನವಿ ಮಾಡಲಾಗಿದೆ.
> – ಸಿದ್ದರಾಮಯ್ಯ, ಮುಖ್ಯಮಂತ್ರಿ

ಮತ್ತೋರ್ವ ರೈತ ಮಹಿಳೆಯ ಮಾಂಗಲ್ಯ ಸರ ಕಸಿದುಕೊಂಡು ಪರಾರಿಯಾದ ಖದೀಮರು

- ಸರಗಳ್ಳರ ಹಾವಳಿ ದಿನೇ ದಿನೇ ವ್ಯಾಪಕ: ಗ್ರಾಮೀಣ ಜನರಲ್ಲಿ ಆತಂಕ
- ಹಳ್ಳಿಯ ಮುಗ್ಧ ಜನರ ಜನಬಳಕೆಯನ್ನು ಬಂಡವಾಳ ಮಾಡಿಕೊಂಡಿರುವ ಕಳ್ಳರು



ಸಂಪರ್ಕ ರಸ್ತೆಗಳಿಗೆ ಸಿಸಿ ಕ್ಯಾಮರಾ ಅಳವಡಿಸಲಿ...



ಈಗ ಸಿಸಿ ಕ್ಯಾಮರಾಗಳು ನಗರಕ್ಕಷ್ಟೇ ಸೀಮಿತವಾಗಿಲ್ಲ. ಹಳ್ಳಿಗಳಲ್ಲೂ ಶ್ರೀಮಂತರು ಮನೆ, ತೋಟ, ಜಮೀನಿನಲ್ಲಿ ಅಳವಡಿಸಿರುವುದನ್ನು ಕಾಣುತ್ತೇವೆ. ಸದ್ಯ ಗ್ರಾಮೀಣ ಮಹಿಳೆಯರಲ್ಲಿ ಆತಂಕ ಹುಟ್ಟಿಸಿರುವ ಸರಗಳ್ಳರ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳುವ ಅನಿವಾರ್ಯತೆ ಇದೆ. ಪ್ರತೀ ಹಳ್ಳಿಗೂ ಪೊಲೀಸರನ್ನು ನಿಯೋಜಿಸುವುದು ಅಸಾಧ್ಯ. ಆದರೆ ಗ್ರಾಮಗಳ ರಸ್ತೆಗಳು ಹೆದ್ದಾರಿ ಅಥವಾ ಮುಖ್ಯರಸ್ತೆಯನ್ನು ಸಂಪರ್ಕಿಸುವ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಸುವ ನಿಟ್ಟಿನಲ್ಲಿ ಪೊಲೀಸರು ಚಿಂತನೆ ನಡೆಸಬಹುದು. ಮುಖ್ಯವಾಗಿ ಅಪರಿಚಿತರ ಬಗ್ಗೆ ಮಹಿಳೆಯರು ಎಚ್ಚರಿಕೆಯಿಂದಿರಬೇಕಿದೆ.

ಮೈಸೂರು, ಜೂ.24(ಎಸ್‌ಬಿಡಿ)– ಖದೀಮರಿಬ್ಬರು ಜಮೀನಿಗೆ ಊಟ ತೆಗೆದುಕೊಂಡು ಹೋಗುತ್ತಿದ್ದ ಮಹಿಳೆಯ ಮಾಂಗಲ್ಯ ಸರ ಕಿತ್ತುಕೊಂಡು, ಬಳಿಕ ಚಾಕು ತೋರಿಸಿ, ಬೆದರಿಸಿ ಪರಾರಿಯಾಗಿರುವ ಘಟನೆ ಮೈಸೂರು ತಾಲೂಕು ಆಯರಹಳ್ಳಿ ಗ್ರಾಮದಲ್ಲಿ ನಡೆದಿದೆ.

ಆಯರಹಳ್ಳಿ–ಹದಿನಾರು ಮುಖ್ಯರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಆಯರಹಳ್ಳಿಯ ರಂಗನಾಯ್ಕ ಅವರ ಪತ್ನಿ, ಪುಟ್ಟತಾಯಮ್ಮ (53) ಅವರ 26 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರದಲ್ಲಿ ಅರ್ಧ ಭಾಗ ಖದೀಮರ ಪಾಲಾಗಿದೆ. ಸರ ಕೀಳುವಾಗ ಪುಟ್ಟತಾಯಮ್ಮ ಗಟ್ಟಿಯಾಗಿ ಹಿಡಿದುಕೊಂಡು ಇನ್ನರ್ಧ ಭಾಗವನ್ನು ಉಳಿಸಿಕೊಂಡಿದ್ದಾರೆ.

ಹೊಂಚು ಹಾಕಿ ದುಷ್ಕೃತ್ಯ: ಸೋಮವಾರ ಮಧ್ಯಾಹ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಪತಿಗೆ ಪುಟ್ಟತಾಯಮ್ಮ ಊಟ ತೆಗೆದುಕೊಂಡು ಹೋಗುತ್ತಿದ್ದಾಗ ಹಿಂದಿನಿಂದ ಇಬ್ಬರು ಬೈಕ್‌ನಲ್ಲಿ ಬಂದಿದ್ದಾರೆ. ಪುಟ್ಟತಾಯಮ್ಮ ಅವರ ಪಕ್ಕದಲ್ಲಿ ಬೈಕ್ ನಿಲ್ಲಿಸಿ, ಹೆಲ್ಮೆಟ್ ತೆಗೆದಿದ್ದಾರೆ. ಆಗ ಯಾರೋ ಸಂಬಂಧಿಕರಿರಬೇಕು ಎಂದು ಅವರನ್ನು ಪುಟ್ಟತಾಯಮ್ಮ ಮಾತನಾಡಿಸಲು ಮುಂದಾಗಿದ್ದಾರೆ. ಆದರೆ ಏನೂ ಮಾತನಾಡದ ಖದೀಮರು, ಸ್ವಲ್ಪ ಮುಂದಕ್ಕೆ ಹೋಗಿ ವಾಪಸ್ ಆಯರಹಳ್ಳಿ ಕಡೆಗೆ ತೆರಳಿದ್ದಾರೆ.

ಯಾರೋ ಬೇರೆಯವರಿರಬೇಕು ಎಂದುಕೊಂಡು ಪುಟ್ಟತಾಯಮ್ಮ ತಮ್ಮ ಪಾಡಿಗೆ ಜಮೀನಿನ ಕಡೆಗೆ ಹೆಜ್ಜೆ ಹಾಕಿದ್ದಾರೆ. ಅಷ್ಟರಲ್ಲೇ ವಾಪಸ್ ಬಂದ ಖದೀಮರು ರಸ್ತೆಗೆ ಅಡ್ಡಲಾಗಿ ಬೈಕ್ ನಿಲ್ಲಿಸಿದ್ದಾರೆ. ಹಿಂಬದಿಯಲ್ಲಿ ಕುಳಿತಿದ್ದವನು ಬೈಕ್‌ನಿಂದ ಇಳಿದು ಸ್ವಲ್ಪ ದೂರ ಪುಟ್ಟತಾಯಮ್ಮ ಅವರನ್ನು ಹಿಂಬಾಲಿಸಿ, ಏಕಾಏಕಿ ಅವರ ಮಾಂಗಲ್ಯ ಸರ ಕಿತ್ತುಕೊಳ್ಳಲು ಮುಂದಾಗಿದ್ದಾನೆ. ಆಗ ಪುಟ್ಟತಾಯಮ್ಮ ಸರವನ್ನು ಗಟ್ಟಿಯಾಗಿ ಹಿಡಿದುಕೊಂಡು, ಕೂಗಿಕೊಂಡಿದ್ದಾರೆ. ಆದರೂ ಖದೀಮ ಸರ ಹಿಡಿದು ಎಳೆದಾಗ ಅದು ತುಂಡಾಗಿ ಅರ್ಧ ಭಾಗ ಖದೀಮನ ಕೈಗೆ ಸಿಕ್ಕಿದೆ. ಆಗ ಭಯದಿಂದ ಪುಟ್ಟತಾಯಮ್ಮ ಕಿರುಚಿಕೊಂಡಿದ್ದಾರೆ. ಯಾರಾದರೂ ■ 6ನೇ ಪುಟಕ್ಕೆ

ಇರಾನ್–ಇಸ್ರೇಲ್ ಕದನ ವಿರಾಮ ಘೋಷಿಸಿದ ಟ್ರಂಪ್!



ನೆತನ್ಯಾಹು ಡೊನಾಲ್ಡ್ ಟ್ರಂಪ್ ಖಮೇನಿ

ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧದ ಸಂದರ್ಭದಲ್ಲಿ ಕದನ ವಿರಾಮವನ್ನು ಘೋಷಿಸಿದಂತೆ, ಇರಾನ್ ಹಾಗೂ ಇಸ್ರೇಲ್ ಕದನದ ನಡುವೆಯೂ ಇಬ್ಬರಿಗೂ ಮಾಹಿತಿ ಇಲ್ಲದೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ 'ಕದನ ವಿರಾಮ' ಘೋಷಿಸಿದ್ದಾರೆ. ಇದು ಇಡೀ ಜಗತ್ತನ್ನೇ ಬೆರಗುಗೊಳಿಸಿದೆ.

ಟ್ರಂಪ್ ಘೋಷಣೆಯನ್ನು ಇಸ್ರೇಲ್ ಮಾನ್ಯ ಮಾಡಿದ್ದರೆ, ಇರಾನ್ ಇದುವರೆಗೆ ತನ್ನ ನಿಲುವನ್ನು ಪ್ರಕಟಿಸಿಲ್ಲ. ಅದು ತನ್ನ ಶತ್ರು ಇಸ್ರೇಲ್ ಮೇಲೆ ದಾಳಿಯ ಗುಂಗಿನಲ್ಲೇ ಇದೆ.

ಇರಾನ್ ಹಾಗೂ ಇಸ್ರೇಲ್ ಸೋಮವಾರ ಮಧ್ಯರಾತ್ರಿಯವರೆಗೂ ಪರಸ್ಪರ ಕ್ಷಿಪಣಿ ದಾಳಿ ನಡೆಸುತ್ತಲೇ ಇದ್ದವು. ಇದರ ನಡುವೆಯೇ ಅಧ್ಯಕ್ಷ ಟ್ರಂಪ್ ಸಾಮಾಜಿಕ ಮಾಧ್ಯಮದಲ್ಲಿ ಕದನ ವಿರಾಮ ಘೋಷಿಸಿದರು. 'ಇಸ್ರೇಲ್ ಮತ್ತು ಇರಾನ್ ನನ್ನ ಬಳಿ ಬಂದು ಶಾಂತಿ ಕೋರಿದವು. ಹೀಗಾಗಿ ಕದನ ವಿರಾಮಕ್ಕೆ ಇದುವೇ ಸುಸಮಯ ಎಂದು ಭಾವಿಸಿದೆ. ಜಗತ್ತು ಮತ್ತು ಪಶ್ಚಿಮ ಏಷ್ಯಾ ಇಲ್ಲಿ ನಿಜವಾದ ಜಯಶಾಲಿಗಳು ಎಂದಿದ್ದಾರೆ.

ಉಭಯ ರಾಷ್ಟ್ರಗಳು ಭವಿಷ್ಯದಲ್ಲಿ ಸಾಕಷ್ಟು ಪ್ರೀತಿ, ಶಾಂತಿಯೊಂದಿಗೆ ಸುಭೀಕ್ಷವಾಗಿರಲಿವೆ. ಸಾಕಷ್ಟು ಗಳಿಸುವ ಅವಕಾಶ ಹೊಂದಿವೆ. ಆದರೆ ಧರ್ಮ ಮತ್ತು ಸತ್ಯದ ದಾರಿಯನ್ನು ಬಿಟ್ಟರೆ ಕಳೆದುಕೊಳ್ಳಲೂ ಇವರಿಗೆ ಬಹಳಷ್ಟಿವೆ. ಇಸ್ರೇಲ್ ಮತ್ತು ಇರಾನ್‌ನ ಭವಿಷ್ಯ ಅಪರಿಮಿತವಾಗಿರಲಿದೆ. ಹಲವಾರು ಭರವಸೆಗಳಿಂದ ಕೂಡಿರಲಿದೆ ಎಂದು ಟ್ರಂಪ್ ಬರೆದುಕೊಂಡಿದ್ದಾರೆ. ■ 6ನೇ ಪುಟಕ್ಕೆ

> ಕದನ ವಿರಾಮ ಜಾರಿಯಲ್ಲಿದೆ, ದಯಮಾಡಿ ಉಲ್ಲಂಘಿಸಬೇಡಿ. ಮಂಗಳವಾರ GMT 04 ಗಂಟೆಗೆ ಆರಂಭವಾದ 24 ಗಂಟೆಗಳ ಹಂತ ಹಂತದ ಕದನ ವಿರಾಮ ಪ್ರಕ್ರಿಯೆ ನಡೆಯಲಿದೆ. ಇರಾನ್ ಎಲ್ಲಾ ಕಾರ್ಯಾಚರಣೆಗಳನ್ನು ಮೊದಲು ಸ್ಥಗಿತಗೊಳಿಸಲಿದೆ. 12 ಗಂಟೆಗಳ ನಂತರ ಇಸ್ರೇಲ್ ಕೂಡ ಇದೇ ಕ್ರಮ ಕೈಗೊಳ್ಳಲಿದೆ.
> -ಡೊನಾಲ್ಡ್ ಟ್ರಂಪ್

ಸುಪ್ರೀಂಕೋರ್ಟ್ ನಿರ್ದೇಶನದನ್ವಯ ಇಂಟ್ಯಾಕ್ ತಜ್ಞರಿಂದ ಮೈಸೂರಿನ ಲ್ಯಾನ್ಸ್‌ಡೌನ್, ದೇವರಾಜ ಮಾರುಕಟ್ಟೆ ಕಟ್ಟಡದ ಮಣ್ಣು, ಇಟ್ಟಿಗೆ ಸಂಗ್ರಹ

ಮೈಸೂರು, ಜೂ.24(ಆರ್‌ಕೆ)–ತೀವ್ರ ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಲ್ಯಾನ್ಸ್‌ಡೌನ್ ಮತ್ತು ದೇವರಾಜ ಮಾರುಕಟ್ಟೆಯ ಕಟ್ಟಡದ ಸ್ಥಿತಿಗತಿ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ದಿ ಇಂಡಿಯನ್ ನ್ಯಾಷನಲ್ ಟ್ರಸ್ಟ್ ಫಾರ್ ಆರ್ಟ್ ಅಂಡ್ ಕಲ್ಚರಲ್ ಹೆರಿಟೇಜ್ (ಇಂಟ್ಯಾಕ್) ಸಂಸ್ಥೆ ಪರಿಣತರು ಇಂದು ಈ ಎರಡೂ ಕಟ್ಟಡಗಳಡಿಯ ಮಣ್ಣು ಮತ್ತು ಇಟ್ಟಿಗೆಯ ಸ್ಯಾಂಪಲ್ ಸಂಗ್ರಹಿಸಿದರು.

ಪ್ರೊ ರಘುನಾಥ್ ನೇತೃತ್ವದಲ್ಲಿ ಸಿದ್ಧಾರ್ಥ ಮತ್ತು ಇತರ ತಜ್ಞರು, ಮೋಟಾರ್ ಪಂಪ್ ಹಾಗೂ ಮೆಟಲ್ ರಾಡ್‌ಗಳನ್ನು ಬಳಸಿ ಕಟ್ಟಡದ ಅಡಿಪಾಯದ ಮಣ್ಣು, ಗೋಡೆಗೆ ಬಳಸಿರುವ ಇಟ್ಟಿಗೆ, ಸುಣ್ಣದ ಗಾರೆ ಸ್ಯಾಂಪಲ್ ಕಲೆ ಹಾಕಿದರು.

133 ವರ್ಷಗಳ ಹಿಂದೆ ನಿರ್ಮಾಣಗೊಂಡಿರುವ ಲ್ಯಾನ್ಸ್‌ಡೌನ್ ಪಾರಂಪರಿಕ ಕಟ್ಟಡದ ಅಡಿಪಾಯ ಮಣ್ಣು, ಗೋಡೆ, ಬೀಮ್‌ಗಳು, ಸ್ಟೇರ್‌ಕೇಸ್, ತಾರಸಿಯ ಇಟ್ಟಿಗೆ, ಸುಣ್ಣದ ಗಾರೆಯನ್ನು ಸಂಗ್ರಹಿಸಿದರು.

ಪ್ರಯೋಗಾಲಯದಲ್ಲಿ ಪರೀಕ್ಷಿಸಿದ ಬಳಿಕ ಕಟ್ಟಡದ ಪ್ರಸಕ್ತ ಸ್ಥಿತಿ–ಗತಿ, ದುರಸ್ತಿ ಸಾಧ್ಯತೆ ಇಲ್ಲವೇ ನೆಲಸಮಗೊಳಿಸಿ, ಇದೇ ಪಾರಂಪರಿಕ ಶೈಲಿಯಲ್ಲಿ ಹೊಸ ಕಟ್ಟಡ ನಿರ್ಮಿಸಬಹುದಾದ ಸಾಧ್ಯತೆ ಅಧ್ಯಯನ ಮಾಡಿ ಸುಪ್ರೀಂ ಕೋರ್ಟ್‌ಗೆ ವಸ್ತುಸ್ಥಿತಿ ವರದಿ ನೀಡಬೇಕಾಗಿದೆ.

ಕಟ್ಟಡಕ್ಕೆ ಬಳಸಿರುವ ಕಿಟಕಿ, ಬಾಗಿಲು, ಜಂತಿ, ತೊಲೆ, ರೀಪರ್, ಹಲಗೆ ಯಾವ ಸ್ಥಿತಿಯಲ್ಲಿವೆ. ಕಂಬಗಳ ಸದೃಢತೆಯನ್ನೂ ತಜ್ಞರು ಪರಿಶೀಲಿಸಿದರು.

ಮೈಸೂರು ಮಹಾನಗರಪಾಲಿಕೆ ವಲಯ ಕಚೇರಿ ಅಭಿವೃದ್ಧಿ ಅಧಿಕಾರಿ ವೆಂಕಟೇಶ್, ಜೂನಿಯರ್ ಇಂಜಿನಿಯರ್‌ಗಳಾದ ಕೆ.ಆರ್.ಚಂದ್ರಶೇಖರ್, ಮೋಹನ್, ಅಭಯ ತಂಡದ ನಾಲ್ವರು ಸಿಬ್ಬಂದಿ ಇಂಟ್ಯಾಕ್ ಸಂಸ್ಥೆ ತಜ್ಞರಿಗೆ ಸ್ಯಾಂಪಲ್ ಸಂಗ್ರಹಿಸಲು ನೆರವಾದರು.

ದೇವರಾಜ ಮಾರುಕಟ್ಟೆ: ಅದೇ ರೀತಿ ಮೈಸೂರಿನ ಸಯ್ಯಾಜಿರಾವ್ ರಸ್ತೆಯ ದೇವರಾಜ ಮಾರುಕಟ್ಟೆ ಕಟ್ಟಡದಡಿಯ ಮಣ್ಣು, ನಿರ್ಮಾಣಕ್ಕೆ ಬಳಸಿರುವ ಇಟ್ಟಿಗೆ ಸ್ಯಾಂಪಲ್ ಸಂಗ್ರಹಿಸಿದ ಇಂಟ್ಯಾಕ್ ಪರಿಣತರು ಅದನ್ನು ಪರೀಕ್ಷಿಸಿ ನ್ಯಾಯಾಲಯಕ್ಕೆ ವಸ್ತುಸ್ಥಿತಿ ವರದಿ ಸಲ್ಲಿಸಬೇಕಿದೆ.

ಈ ಎರಡೂ ಕಟ್ಟಡಗಳ ನೆಲಸಮಗೊಳಿಸುವ ಪ್ರಸ್ತಾಪಕ್ಕೆ ವಕೀಲ ಹಾಗೂ ಲೇಖಕ ಜಿ.ಸತ್ಯನಾರಾಯಣ (ಗೌರಿ ಸತ್ಯ) ಮತ್ತು ಮಹಾರಾಜ ಜಯಚಾಮರಾಜ ಒಡೆಯರ್ ಅವರ ಸಂಬಂಧಿ ರಾಜಾಚಂದ್ರ ವಿಶೇಷ ಮೇಲ್ಮನವಿ (Special Leave Petition) ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ 2024ರ ಡಿಸೆಂಬರ್ ತಿಂಗಳಲ್ಲಿ ಮಧ್ಯಂತರ ಆದೇಶ ನೀಡಿದ್ದು, ತಜ್ಞರಿಂದ ಪರಿಶೀಲನಾ ವರದಿ ಸಲ್ಲಿಸುವಂತೆಯೂ ನಿರ್ದೇಶನ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ರಿಟ್ ಪಿಟಿಷನ್ (ಸಂಖ್ಯೆ 15215/2020 (ಪಿಐಎಲ್)ನಲ್ಲಿ 2023ರ ಆಗಸ್ಟ್ 8ರಂದು ರಾಜ್ಯ ಹೈಕೋರ್ಟ್ ನೀಡಿದ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಎಸ್‌ಎಲ್‌ಪಿ ದಾಖಲು ಮಾಡಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಮತ್ತು ದೇವರಾಜ ಮಾರುಕಟ್ಟೆ ಕಟ್ಟಡಗಳ ದುರಸ್ತಿಯೊಂದಿಗೆ ಸಂರಕ್ಷಿಸುವಂತೆ ಅರ್ಜಿದಾರರು ಮನವಿ ಮಾಡಿದ್ದರು. ಕರ್ನಾಟಕ ಟೌನ್ ಅಂಡ್ ಕಂಟ್ರಿ ಪ್ಲಾನಿಂಗ್ ಕಾಯ್ದೆ 1961ರ ಸೆಕ್ಷನ್ 2(1ಇಎ) ಪ್ರಕಾರ ಈ ಎರಡು ಕಟ್ಟಡಗಳೂ ಪಾರಂಪರಿಕ ನಿರ್ಮಾಣಗಳು ಎಂದು ನಮೂದಾಗಿರುವುದಲ್ಲದೇ, ಮೈಸೂರು–ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶ–2031ರಲ್ಲೂ ■ 6ನೇ ಪುಟಕ್ಕೆ



ಇಂಟ್ಯಾಕ್ ತಜ್ಞರು ಮಂಗಳವಾರ ಮೈಸೂರಿನ ಲ್ಯಾನ್ಸ್‌ಡೌನ್ ಕಟ್ಟಡದ ಅಡಿಪಾಯದ ಮಣ್ಣು, ಇಟ್ಟಿಗೆ ಸ್ಯಾಂಪಲ್ ಸಂಗ್ರಹಿಸಿದರು.

ಶ್ಯಾಮ್ ಪ್ರಸಾದ್ ಮುಖರ್ಜಿ ಬಲಿದಾನ ದಿವಸ ಆಚರಣೆ



ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಬಸವನಪುರ ಗ್ರಾಮದ ಕಲ್ಯಾಣಿ ನಗರದ ಮುತ್ತುರಾಯನ ಗುಡ್ಡದಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಬಲಿದಾನ ದಿವಸ ಅಂಗವಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನೆಟ್ಟರು.

ಮೈಸೂರು, ಜೂ. 24– ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಬಸವನಪುರ ಗ್ರಾಮದ ಕಲ್ಯಾಣಿ ನಗರದ ಮುತ್ತುರಾಯನ ಗುಡ್ಡದಲ್ಲಿ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಬಲಿದಾನ ದಿವಸ ಅಂಗವಾಗಿ ಶ್ಯಾಮ್ ಪ್ರಸಾದ್ ಮುಖರ್ಜಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಹಾಗೂ ಗಿಡ ನೆಡುವ ಕಾರ್ಯಕ್ರಮವನ್ನು ಭಾರತೀಯ ಜನತಾ ಪಾರ್ಟಿಯ ಚಾಮುಂಡೇಶ್ವರಿ ಕ್ಷೇತ್ರದ ಗ್ರಾಮಾಂತರದಿಂದ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಯಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕ್ಷೇತ್ರದ ಅಧ್ಯಕ್ಷ ವೈ.ಟಿ.ರವಿ, ಸಹ ಸಂಚಾಲಕ ಕೂರ್ಗಳ್ಳಿ ರೇವಣ್ಣ, ಬಿಜೆಪಿಯ ಹಿರಿಯ ಮುಖಂಡರಾದ ಗೋಪಾಲರಾವ್, ಶ್ರೀನಿವಾಸ್ ಅಂಕಲ್, ಎಸ್ ಡಿ ಮಹೇಂದ್ರ ಗೆಜ್ಜಗಳ್ಳಿ ಮಹೇಶ್, ಜಗದೀಶ್ ಗೌಡ, ದೇವರಾಜ್, ಈರಪ್ಪ ಮಾಜಿ ಕಮಾಂಡೋ ಸ್ಯಾಮ್ ಮುಖ್ಯಸ್ಥ ಶ್ರೀಧರ್, ಜಿಲ್ಲಾ ಕಾರ್ಯದರ್ಶಿ ಮೋನಿಕಾ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಚಿಕ್ಕಾನ್ಯ, ಯುವ ಮೋರ್ಚಾ ಮಾಜಿ ಅಧ್ಯಕ್ಷ ದಾರಿಪುರ ಚಂದ್ರಶೇಖರ್, ದೇವಸ್ಥಾನ ಟ್ರಸ್ಟಿಗಳಾದ ಶ್ರೀನಿವಾಸ್, ಮೊಗಣ್ಣ, ನಾಗರಾಜ್ ಇತರ ಟ್ರಸ್ಟಿಗಳು ಹಾಗೂ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಪುಟ್ಟೇಗೌಡ, ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಕುಮಾರ್, ಮಹದೇವ ಸ್ವಾಮಿ, ಶಾಲಿನಿಕುಮಾರ್, ಮಲ್ಲೇಶ್, ಸುರೇಶ್, ಚೇತನ್, ಪ್ರಧಾನ ಕಾರ್ಯದರ್ಶಿ ಶರತ್, ನಾರಾಯಣ್, ವೆಂಕಟೇಶ್ ಕಾರಂತ್, ಬೆಳವಾಡಿ ಮಂಜು, ವೆಂಕಟೇಶ್‌ರಾವ್, ರಾಧಾ ಪಾಲಂದಿರಾ, ಶಾಲಿನಿ, ಗೀತಾ, ಇಂದಿರಾ, ಕಿರಣ್, ರವಿ ಯೋಗೇಶ್ ನವೀನ್ ಗವಿ ಸಿದ್ದಪ್ಪ ವಿಲ್ಸಂಟ್ ಮತ್ತಿತರರು ಭಾಗವಹಿಸಿದ್ದರು.

ಒಕ್ಕಲಿಗರ ಸಂಘದ ಕ್ಷೇಮಾಭಿವೃದ್ಧಿ ಟ್ರಸ್ಟ್ ಕಚೇರಿ ಉದ್ಘಾಟನೆ



ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿರುವ ಕುವೆಂಪು ಒಕ್ಕಲಿಗರ ಸಂಘದ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಕಚೇರಿಯನ್ನು ಮೈಸೂರಿನ ಆದಿಚುಂಚನಗಿರಿ ಮಠದ ಶಾಖಾ ಮಠಾಧೀಶರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಹೆಚ್.ಕೆ.ರಾಮು, ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ, ಸಂಚಾಲಕ ಬೂಕನಕೆರೆ ವಿಜೇಂದ್ರ, ಖಜಾಂಚಿ ಅನಿಲ್ ಸೇರಿದಂತೆ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಜು.28ರಂದು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಸಾಮೂಹಿಕ ವಿವಾಹ

ಸುತ್ತೂರು, ಜೂ.24–ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸುತ್ತೂರು ಶ್ರೀಕ್ಷೇತ್ರದಲ್ಲಿ ಏರ್ಪಡಿಸಲಿರುವ ಸಾಮೂಹಿಕ ವಿವಾಹದಲ್ಲಿ ಹರಗುರು ಚರಮೂರ್ತಿಗಳು, ವಧುವರರ ಬಂಧು ಮಿತ್ರರು ಹಾಗೂ ಸಾರ್ವಜನಿಕರು ಭಾಗವಹಿಸಿ ನೂತನ ದಂಪತಿಗಳಿಗೆ ಶುಭ ಹಾರೈಸಲಿದ್ದಾರೆ. ಈ ವಿವಾಹದಲ್ಲಿ ಭಾಗವಹಿಸುವ ವರನಿಗೆ 21 ವರ್ಷ, ವಧುವಿಗೆ 18 ವರ್ಷ ಪೂರ್ಣಗೊಂಡಿರಬೇಕು. ಅರ್ಜಿ ನಮೂನೆಯಲ್ಲಿ ವರ ಮತ್ತು ವಧುವಿನ ಭಾವಚಿತ್ರಗಳನ್ನು ಲಗತ್ತಿಸಿರಬೇಕು. ಜಾತಿ ದೃಢೀಕರಣ ಪತ್ರ ವಧುವರರ ವಯಸ್ಸಿನ ಬಗ್ಗೆ ಶಾಲೆಯಿಂದ ಪಡೆದ ದಾಖಲಾತಿ ಪತ್ರ ಪಡೆದ ದೃಢೀಕರಣ ಪತ್ರ ಲಗತ್ತಿಸಿರಬೇಕು. ಬಾಲ್ಯವಿವಾಹಕ್ಕೆ ಅವಕಾಶವಿರುವುದಿಲ್ಲ. ವಧುವಿಗೆ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಸೀರೆ, ಕುಪ್ಪಸಗಳನ್ನು ಹಾಗೂ ವರನಿಗೆ ಪಂಚೆ, ವಲ್ಲಿ, ಷರ್ಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆಸಕ್ತರು 8 ದಿನಗಳ ಮುಂಚಿತವಾಗಿ ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸುತ್ತೂರು ಇವರನ್ನು ನೇರವಾಗಿ ಸಂಪರ್ಕಿಸಿ ಅಥವಾ ದೂರವಾಣಿ: 08221–232217, 232033, 97413 42222, ಸಂಪರ್ಕಿಸಿ ಮಾಹಿತಿ ಪಡೆದು ನೋಂದಣಿ ಮಾಡಿಸಿಕೊಳ್ಳಬಹುದು.

ಯೋಗ ದಿನಾಚರಣೆ



ಮೈಸೂರಿನ ರೂಪಾನಗರದ ದೀಪಾ ಪ್ರೌಢಶಾಲಾ ಆವರಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ದೀಪಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶಿಲ್ಪ ಜಗದೀಶ್ ಯೋಗ ಶಿಕ್ಷಕಿ ವಿಜಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

ನಿಧನ

ಮಹಾದೇವಮ್ಮ



ಮೈಸೂರು: ಗೌರಿಶಂಕರನಗರದ ನಿವೃತ್ತ ಕಂಡಕ್ಟರ್ ಎಸ್.ರಾಜು ಅವರ ಪತ್ನಿ ಮಹಾದೇವಮ್ಮ (70) ಮಂಗಳವಾರ ನಿಧನರಾದರು. ಮೃತರು ಪತಿ ಎಸ್.ರಾಜು, ಪುತ್ರ ಗಿರೀಶ್, ಪುತ್ರಿಯರು, ಸೊಸೆ, ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಬುಧವಾರ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಶಾಲಾ–ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ

ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಮಬ್ಬಾದ ಪುಸ್ತಕಗಳು: ಹಿರಿಯ ಸಾಹಿತಿ ಸಿಪಿಕೆ

ಮೈಸೂರು, ಜೂ.24(ಜಿಎ)–ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಪುಸ್ತಕ ಸಂಸ್ಕೃತಿ ಕುಸಿದಿದ್ದು, ಪುಸ್ತಕದ ಬೆಳಕು ಮಬ್ಬಾಗುತ್ತಿದೆ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಆತಂಕ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಶಾಲಾ ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ ಹಾಗೂ ಗ್ರಂಥಾಲಯ ಜಾಗೃತ ಸಮಿತಿ ಸದಸ್ಯರಿಗೆ ಅರ್ಹತಾ ಪತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಾಲಾ–ಕಾಲೇಜುಗಳಿಗೆ ಉಚಿತ ಪುಸ್ತಕ ವಿತರಣೆ, ಮನೆಗೊಂದು ಗ್ರಂಥಾಲಯ ಹಾಗೂ ಅಂಗಳದಲ್ಲಿ ತಿಂಗಳ ಪುಸ್ತಕ ಕಾರ್ಯಕ್ರಮ ಅತ್ಯಂತ ಹೆಚ್ಚು ಪ್ರಯೋಜನಕಾರಿಯಾದ ಕಾರ್ಯಕ್ರಮವಾಗಿದೆ. ಉಚಿತವಾಗಿ ಪುಸ್ತಕಗಳನ್ನು ನೀಡುವಾಗ ಒಳ್ಳೆಯ ಪುಸ್ತಕಗಳನ್ನೇ ನೀಡಬೇಕು ಎಂದು ಸಲಹೆ ನೀಡಿದರು.

ನಂತರ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಮಾತನಾಡಿ, ಪುಸ್ತಕಗಳು ನಮ್ಮ ಬದುಕಿಗೆ ಆದ್ಯತೆ ಅಲ್ಲ. ಬದಲಿಗೆ ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಕು. ಕೈಯ್ಯಲ್ಲಿ ಜ್ಞಾನದ ಪ್ರತೀಕವಾದ ಒಂದು ಪುಸ್ತಕವಿರಬೇಕು. ಇಲ್ಲದಿದ್ದರೆ, ಸಮಾಜ ನಮ್ಮನ್ನು ನೋಡುವ ದೃಷ್ಟಿಕೋನವೇ ಬೇರೆಯದ್ದೇ ಆಗಿರುತ್ತದೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಪತ್ರಕರ್ತರ ಸಂಘದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಪುಸ್ತಕ ವಿತರಿಸಲಾಯಿತು.

ತಂತ್ರಜ್ಞಾನ ಮುಂದುವರಿದಂತೆ ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಹಿಂದೆ ಮಹಿಳೆಯರು,ಪುರುಷರು ತಮ್ಮ ಕೆಲಸ ಮಾಡುವಾಗಲೂ ಪುಸ್ತಕ ಓದುತ್ತಿದ್ದರು.ಮಹಿಳೆಯರು ಅಡುಗೆ ಮನೆಯಲ್ಲಿಯೂ ಪುಸ್ತಕ ಓದುತ್ತಿದ್ದರು. ಈಗ ಮೊಬೈಲ್ ಆವರಿಸಿಕೊಂಡು ಬಿಟ್ಟಿವೆ. ಇದರಿಂದ ಕೈಯಲ್ಲಿ ಪುಸ್ತಕದ ಬದಲಿಗೆ ಫೋನ್‌ಗಳ ಸಂಖ್ಯೆ ಹೆಚ್ಚಾಗುತ್ತಿವೆ ಎಂದು ತಿಳಿಸಿದರು.

ಮನೆಗೆ ಅರಿಶಿನ, ಕುಂಕುಮ, ಅಗರಬತ್ತಿ ತೆಗೆದುಕೊಂಡು ಹೋಗುವಂತೆ ಪ್ರತಿಯೊಂದು ಮನೆಯಲ್ಲೂ ಗ್ರಂಥಾಲಯ ತೆರೆದರೆ ಹಂತ, ಹಂತವಾಗಿ ಓದುವ ಅಭ್ಯಾಸ ಬರುತ್ತದೆ. ಪ್ರಾಧಿಕಾರದಿಂದ 1 ಲಕ್ಷ ಮನೆಯಲ್ಲಿ ಒಂದು ಗ್ರಂಥಾಲಯ ಮಾಡಿಸುವ ಆಲೋಚನೆ ಇದೆ ಎಂದರು.

ಮನೆಗೆ 500 ಪುಸ್ತಕಗಳು ಬಂದರೆ 5 ಕೋಟಿ ಪುಸ್ತಕಗಳು ಪ್ರಿಂಟ್ ಆಗುತ್ತದೆ. ಇದರಿಂದ ಪ್ರಕಾಶಕರಿಗೆ, ಲೇಖಕರಿಗೆ, ಡಿಟಿಪಿ, ಪ್ರಿಂಟಿಂಗ್ ಪ್ರೆಸ್ ಇವರೆಲ್ಲರಿಗೂ ಜೀವನ ನಡೆಯುತ್ತದೆ. ಈಗಾಗಲೇ ಮುಖ್ಯಮಂತ್ರಿಗಳು ತಮ್ಮ ಮನೆಯಲ್ಲಿ ಗ್ರಂಥಾಲಯ ತೆರೆದು ಮಾದರಿಯಾಗಿದ್ದಾರೆ. ಆಗೇ ಮುಂದಿನ ದಿನಗಳಲ್ಲಿ ನಾವೆಲ್ಲರೂ ನಮ್ಮ ಮನೆಯಲ್ಲಿ ಗ್ರಂಥಾಲಯ ಆರಂಭಿಸೋಣ. ಉತ್ತಮ ಗ್ರಂಥಾಲಯ ಪ್ರಶಸ್ತಿ ನೀಡಲಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ಶಾಲೆಗಳಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಪುಸ್ತಕ ವಿತರಿಸಿ, ಜಾಗೃತಿ ಸಮಿತಿ ಪದಾಧಿಕಾರಿಗಳನ್ನು ಗೌರವಿಸಿ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು. ನಗರದಿಂದ ಆಗಮಿಸಿದ್ದ ಪತ್ರಕರ್ತರ ಸಂಘಕ್ಕೂ ಕೂಡ ಪುಸ್ತಕ ವಿತರಣೆ ಮಾಡಲಾಯಿತು. ಇದೇ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಎನ್.ಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

> ಮನೆಗೊಂದು ಗ್ರಂಥಾಲಯ ಮಾಡಿದಾಗ ಈ ಸಂದರ್ಭದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸಬೇಕು. ಅವರೊಬ್ಬ ಪುಸ್ತಕ ದೈತ್ಯ. ಅವರನ್ನು ನಾವೆಲ್ಲರೂ ಆದರ್ಶವಾಗಿ ಇಟ್ಟುಕೊಳ್ಳಬೇಕು. ಅವರು ಪುಸ್ತಕಗಳನ್ನು ಓದುವಾಗ ತಲೆ ತಗ್ಗಿಸಿ ಓದಬೇಕು. ಏಕೆಂದರೆ ಅದು ತಲೆ ಎತ್ತಿ ನಡೆಯಲು ಅವಕಾಶ ಕಲ್ಪಿಸುತ್ತದೆ ಎಂದಿದ್ದಾರೆ. ಅದು ಅಕ್ಷರಶಃ ಸತ್ಯ. ಪುಸ್ತಕಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಬೇಡ. ಪುಸ್ತಕ ಯೋಗ ಎಲ್ಲಕ್ಕಿಂತ ದೊಡ್ಡ ಯೋಗ. ಈಗ ಪುಸ್ತಕ ಯಜ್ಞ ನಡೆಯಬೇಕಿದೆ. ಅದರಂತೆ ಓದುವ ಕ್ರಾಂತಿಯಾಗಬೇಕೆಂದು ತಿಳಿಸಿ ಪುಸ್ತಕ ಪ್ರಾಧಿಕಾರದ ಈ ಯೋಜನೆ ಅತ್ಯಂತ ಯಶಸ್ವಿಯಾಗಲಿ. –ಸಿಪಿಕೆ, ಹಿರಿಯ ಸಾಹಿತಿ.

ಶ್ರೀಮತಿ ದೇವಿಯವರ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ

ಮೈಸೂರು, ಜೂ. 24– ಕುವೆಂಪು ನಗರದ ಗಾನಭಾರತೀ ವೀಣೆ ಶೇಷಣ್ಣ ಭ'ವ'ನ'ದ'ಲ್ಲಿ ವಿದುಷಿ ಶ್ರೀಮತಿ ದೇವಿಯವರ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ನಡೆಯಿತು.

ರಾಗ ಕೇದಾರ್‌ನಿಂದ ಖ್ಯಾಲ್ ವಿಲಂಬಿತ್‌ನಲ್ಲಿ ಪಾರಂಪಾರಿಕ ರಚನೆಯಾದ ಬನತನ ಕಾ ಚಲಿಯನ್ನು ಆರಂಭಿಸಿ ಮುಂದೆ ಧ್ರುತ್ ತೀನ್‌ತಾಲದಲ್ಲಿ ಪಂ.ಗಜಾನನ್ ಬುವಾ ಜೋಶಿ ರಚಿಸಿದ 'ಸಯ್ಯಾ ಮೋರಾರೆ' ಪ್ರಸ್ತುತಪಡಿಸಿದರು.



ವಿದುಷಿ ಶ್ರೀಮತಿ ದೇವಿ ಅವರ ಹಿಂದೂಸ್ತಾನಿ ಶಾಸ್ತ್ರೀಯ ಗಾಯನ ನಡೆಯಿತು.

ಪಂ.ದಿನಕರ ಕಾಯ್ಕಿಣಿಯವರು ರಚಿಸಿದ ತರಾನಗಳನ್ನು ಹಾಡಿ ರಾಗಕ್ಕೆ ಮತ್ತಷ್ಟು ಜೀವ ತುಂಬಿದರು. ಮುಂದೆ ಹೆಚ್ಚು ಪ್ರಚಲಿತವಲ್ಲದ ಜಯಂತ್ ಮಲ್ಹಾರ್ ಕೈಗೆತ್ತಿಕೊಂಡು ಋತ ಬರಖಾ ಮತ್ತು ಧ್ರುತ್ ತೀನ್‌ತಾಲದಲ್ಲಿ ಋತ ಆಯಿ ಸಾವನಕಿ ರಚನೆಗಳನ್ನು ಹಾಡಿದರು.

ಬಳಿಕ ಜಗನ್ನಾಥ ದಾಸರ ವಿಠಲಯ್ಯಾ ವಿಠಲಯ್ಯಾ ಜಗನ್ನಾಥ ಎಂಬ ದಾಸರ ಪದವನ್ನು ಪ್ರಸ್ತುತಪಡಿಸಿದರು. ಕೊನೆಯಲ್ಲಿ ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎಂಬ ಬಸವಣ್ಣನವರ ವಚನದೊಂದಿಗೆ ಕಾರ್ಯಕ್ರಮಕ್ಕೆ ಮಂಗಳ ಹಾಡಿದರು. ತಬಲಾದಲ್ಲಿ ಸುಮಿತ್ ನಾಯಕ್ ಮತ್ತು ಹಾರ್ಮೋನಿಯಂನಲ್ಲಿ ತೇಜಸ್ ಕಾಟೋಟಿ ಸಹಕರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸುಮಿತ್ ನಯಕ್ ಅವರಿಂದ ತಬಲಾ ಸೋಲೋ ವಾದನ ನಡೆಯಿತು.

ಓಟದ ಸ್ಪರ್ಧೆಯಲ್ಲಿ ಪ್ರಥಮ



ಮೈಸೂರು, ಜೂ. 24– ರಾಷ್ಟ್ರೀಯ ಕಿಡ್ಸ್ ಅಥ್ಲೆಟಿಕ್ಸ್ ಅಂಗವಾಗಿ ಕರ್ನಾಟಕ ಅಥ್ಲೆಟಿಕ್ಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಲಾಗಿದ್ದ ಓಟದ ಸ್ಪರ್ಧೆಯಲ್ಲಿ ಮೈಸೂರಿನ ವಿದ್ಯಾರ್ಥಿ ಅಜಯ್ ಪೃಥ್ವಿರಾಜ್ ಎಂ.ಎಲ್ ಪ್ರಥಮ ಸ್ಥಾನ ಗಳಿಸಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಜೂ.23ರಂದು ಆಯೋಜಿಸಲಾಗಿದ್ದ ಕಿಡ್ಸ್ ಅಥ್ಲೆಟಿಕ್ಸ್ ಮೀಟ್–2025 ಸ್ಪರ್ಧೆಯಲ್ಲಿ ಪಾಲ್ಗೊಂಡ ಅಜಯ್ ಪೃಥ್ವಿರಾಜ್ (16ವರ್ಷ ವಯಸ್ಸಿನೊಳಗಿನ) 600 ಮೀಟರ್ ಓಟದಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಈ ಹಿಂದೆಯೂ ಹಲವಾರು ಸ್ಪರ್ಧೆಗಳಲ್ಲಿ ಅತೀ ಉತ್ಸಾಹದಿಂದ ಪಾಲ್ಗೊಳ್ಳುವ ಅಜಯ್ ಪೃಥ್ವಿರಾಜ್ ಪ್ರಥಮ ಸ್ಥಾನ ಗಳಿಸಿ ಸಾಧನೆಗೈದಿದ್ದಾರೆ. ಮೈಸೂರಿನ ಎಂ.ಎಲ್.ರಾಜು (ರಾಜ್ ಬ್ಯಾಗ್ಸ್) ಮತ್ತು ಸಂಗೀತ ದಂಪತಿಯ ಪುತ್ರ ಅಜಯ್ ಐಡಿಎಲ್ ಜಾವಾ ರೋಟರಿ ಶಾಲೆಯ ವಿದ್ಯಾರ್ಥಿಯಾಗಿದ್ದಾರೆ.

ಸಂತೋಷ್‌ಕುಮಾರ್‌ಗೆ ಪಿಹೆಚ್.ಡಿ ಪದವಿ



ಮೈಸೂರು, ಜೂ.24– ಡಾ.ಜಿ.ಎನ್.ಕೆ.ಸುರೇಶ್‌ಬಾಬು ಅವರ ಮಾರ್ಗದರ್ಶನದಲ್ಲಿ ಬಿ.ಎನ್.ಸಂತೋಷ್‌ಕುಮಾರ್ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಜನತಾ ದರ್ಶನ ಕಾರ್ಯಕ್ರಮ ಮುಂದೂಡಿಕೆ

ಮೈಸೂರು,ಜೂ.24– ಜಿಲ್ಲಾ ಮಟ್ಟದಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಸೂಕ್ತ ಪರಿಹಾರವನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳು ನಡೆಸುವ ಜಿಲ್ಲಾ ಮಟ್ಟದ ಜನತಾ ದರ್ಶನವನ್ನು ಜೂನ್ 25 ರಂದು ಹಮ್ಮಿಕೊಳ್ಳಲಾಗಿತ್ತು.

ಆದರೆ ಕಾರಣಾಂತರಗಳಿಂದ ಜುಲೈ 4ಕ್ಕೆ ಮುಂದೂಡಲಾಗಿದೆ. ಸಾರ್ವಜನಿಕರು ಅಂದು ಜನತಾ ದರ್ಶನದಲ್ಲಿ ಪಾಲ್ಗೊಂಡು ತಮ್ಮ ಅಹವಾಲು ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ನಾಳೆ ರಾಷ್ಟ್ರೀಯ ವಿಚಾರ ಸಂಕಿರಣ

ಮೈಸೂರು,ಜೂ.24–ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಿಂದ ಜೂ.26ರಂದು ಕಾಲೇಜಿನ ಸುವರ್ಣ ಮಹೋತ್ಸವ ಸಭಾಂಗಣದಲ್ಲಿ ಕವಿರಾಜ ಮಾರ್ಗ: ಕನ್ನಡ, ಕನ್ನಡಿಗ ಮತ್ತು ಕರ್ನಾಟಕ ವಿಷಯ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿದೆ. ವಿಚಾರ ಸಂಕಿರಣದಲ್ಲಿ ಸುತ್ತೂರು ಶ್ರೀಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ನಾಡೋಜ ಡಾ.ಚಂದ್ರಶೇಖರ ಕಂಬಾರರು ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಪ್ರಧಾನ್ ಗುರುದತ್ತ ಅಧ್ಯಕ್ಷತೆ ವಹಿಸಲಿದ್ದಾರೆ. ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಉದ್ಘಾಟನೆಯ ನಂತರ ಕವಿರಾಜಮಾರ್ಗ ಕನ್ನಡ, ಕವಿರಾಜ ಮಾರ್ಗ ಕನ್ನಡಿಗ ಮತ್ತು ಕವಿರಾಜಮಾರ್ಗ ಕರ್ನಾಟಕ ಎಂಬ ವಿಷಯಗಳ ಮೇಲೆ ಮೂರು ಗೋಷ್ಠಿಗಳು ನಡೆಯಲಿವೆ.

ಪ್ರೊ.ಸಿ.ಪಿ.ಸಿದ್ಧಾಶ್ರಮ, ಜಯಶಂಕರ ಹಲಗೂರು, ಡಾ.ಎಂ.ಜಿ.ಮಂಜುನಾಥ, ಡಾ.ರತ್ನಾಕರ ಮಲ್ಲಮೂಲೆ, ಡಾ.ಕವಿತಾ ರೈ, ಡಾ.ಎಸ್.ಡಿ.ಶಶಿಕಲಾ, ಡಾ.ಎಚ್.ಟಿ. ಶೈಲಜ, ಡಾ.ಪಿ.ಮಣಿ ಮತ್ತು ಪ್ರೊ ಮೊರಬದ ಮಲ್ಲಿಕಾರ್ಜುನ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಲಿದ್ದಾರೆ.

ಜೂ.29, ನಿರಂತರ ಕಲೆಮನೆ ಉತ್ಸವ

ಮೈಸೂರು, ಜೂ. 24– ಮೈಸೂರಿನ ಕುಮಾರ್ ಪ್ರದರ್ಶಕ ಕಲೆಗಳ ಕೇಂದ್ರದ ವತಿಯಿಂದ ಕಲೆಮನೆ ಸಭಾಂಗಣದಲ್ಲಿ ಜೂ.29ರಂದು ಮಧ್ಯಾಹ್ನ 3 ಗಂಟೆಗೆ 57ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ಶಾರದಾ ವಿಲಾಸ ಕಾಲೇಜಿನ ನಿವೃತ್ತ ಕನ್ನಡ ವಿಭಾಗದ ಪ್ರಾಧ್ಯಾಪಕ ಪ್ರೊ.ಸೂರ್ಯನಾರಾಯಣ ಸ್ವಾಮಿ ಆಗಮಿಸಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಭರತನಾಟ್ಯದ ನೃತ್ಯ ಗುರು, ವಿದುಷಿ ಡಾ.ಜಮುನಾ ರಾಣಿ ಮಿರ್ಲೆ, ಧನಲಕ್ಷ್ಮಿ, ಸೀಮಾ, ಸಿಂಧು, ರೇಣುಕಾ ಆನಂದ್, ಡಾ.ಲಕ್ಷ್ಮಿ ವಿಶ್ವನಾಥನ್, ಅರ್ಚನಾ ಭಟ್, ಗುರಾಡಿ ಸೌಮ್ಯ ಆಗಮಿಸಲಿದ್ದಾರೆ. ಉತ್ಸವದಲ್ಲಿ ಭರತನಾಟ್ಯ, ಮೋಹಿನಿ ಆಟಂ ಮುಂತಾದ ನೃತ್ಯ ಪ್ರಕಾರಗಳ ನೃತ್ಯ ಕಾರ್ಯಕ್ರಮ ಜರುಗಲಿದೆ. ಕಾಸರಗೋಡಿನ ನೃತ್ಯ ಗುರುಗಳಾದ ವಿದ್ವಾನ್ ಬಾಲಕೃಷ್ಣ ಮಂಜೇಶ್ವರ್ ಮತ್ತು ತಂಡ, ಬೆಂಗಳೂರಿನ ಹೆಸರಾಂತ ನೃತ್ಯ ಗುರುಗಳಾದ ವಿದುಷಿ ಮಹಿಮಾ ಹರೀಶ್ ಮತ್ತು ತಂಡ, ಸಿಂಗಪೂರಿನ ಹೆಸರಾಂತ ನೃತ್ಯ ಕಲಾವಿದರಾದ ಗುರು ಮಾಲಿಕ ಪನ್ನಿಕರ್, ತಿರುವನಂತಪುರದ ಗುರು ಅಮಿತಾ ಪ್ರತೀಶ್ ನೃತ್ಯ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.06.2025 ಬುಧವಾರ, ಮಳೆ ನಕ್ಷತ್ರ: ಆರ್ದ್ರಾ, 22.06.2025 ರಿಂದ 05.07.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ಸರ್ ಎಂ. ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಮತ್ತು ಆಷಾಢ ಮಾಸದ ಪ್ರಯುಕ್ತ ಚಾಮುಂಡಿ ಬೆಟ್ಟದ 1101 ಮೆಟ್ಟಿಲು ಗಳ ಸ್ವಚ್ಛತಾ ಕಾರ್ಯಕ್ರಮ, ಚಾಲನೆ : ಹೋಟೇಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜು (ಬಸಪ್ಪ), ಸ್ಥಳ: ಚಾಮುಂಡಿ ಬೆಟ್ಟದ ತಪ್ಪಲಿನಿಂದ, ಬೆಳಗ್ಗೆ 6.30ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು ನಿವಾರಣ ಚಿಕಿತ್ಸಾ ಶಿಬಿರ, ಗರ್ಭಾಶಯ ಮುಖದಲ್ಲಿ ಹುಣ್ಣು (ಸರ್ವೈಕಲ್ ಎರೋಷನ್) ಶಿಬಿರ, ಕಾರ್ನಿಯಲ್ ಒಪೇಸಿಟಿ (ಕಾರ್ನಿಯಾದ ಅಪಾರದರ್ಶಕತೆ/ಕಣ್ಣಿನ ಹೂ)ಗೆ ಚಿಕಿತ್ಸಾ ಶಿಬಿರ, ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಮುಟ್ಟಿನ ಸಮಯದಲ್ಲಿ ಅತಿಯಾದ ರಕ್ತಸ್ರಾವ, ಮುಖದಲ್ಲಿ ಮೊಡವೆಗಳಿಗೆ ಚಿಕಿತ್ಸೆ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2025, ಗುಜರಾತ್ ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ವರ್ತುಲ ರಸ್ತೆ, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆಕ್ಯೂಪ್ರೆಷರ್ ಹಾಗೂ ಸು–ಜೋಕ್ ಮತ್ತು ಆಕ್ಯೂ ಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಇನ್ನರ್‌ವ್ಹೀಲ್ ರೋಟರಿ ಭವನ, ವಿಜಯನಗರ, ರೈಲ್ವೇ ಬಡಾವಣೆ, ಬೆಳಗ್ಗೆ 10.30 ರಿಂದ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ :** ಸದ್ಭಾವ, ಒಂದು ರಾಷ್ಟ್ರೀಯ ಅಭಿಯಾನ, ಉದ್ಘಾಟನೆ : ಹಿರಿಯ ಗಾಂಧಿವಾದಿ ಸರೋಜ ತುಳಸೀದಾಸ್, ಕನ್ನಡ ಭಿತ್ತಿಪತ್ರ ಬಿಡುಗಡೆ : ಹಿರಿಯ ಮುಖಂಡ ಪಿ.ಜಿ.ಆರ್. ಸಿಂಧ್ಯಾ, ಹಿಂದಿ ಭಿತ್ತಿಚಿತ್ರ ಬಿಡುಗಡೆ : ಹಿರಿಯ ಗಾಂಧಿವಾದಿ ವಿಜಯ ಪ್ರತಾಪ್, ಇಂಗ್ಲಿಷ್ ಭಿತ್ತಿಪತ್ರ ಬಿಡುಗಡೆ : ಇಪ್ಟಾ ರಾಷ್ಟ್ರೀಯ ಕಾರ್ಯಾಧ್ಯಕ್ಷ ರಾಕೇಶ್ ವೇದ, ಲಕ್ನೋ, ಮುಖ್ಯ ಅತಿಥಿಗಳು : ನಟ, ಸಾಮಾಜಿಕ ಕಾರ್ಯಕರ್ತ ಪ್ರಕಾಶ್ ರಾಜ್, ಸದ್ಭಾವ ಗೀತೆ ಮಂಡನೆ : ರಂಗ ನಿರ್ದೇಶಕ ಪ್ರಸನ್ನ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ ಆವರಣ, ಸಂಜೆ 6.30ಕ್ಕೆ.

■ **ವಿವಿಧ್ ಎಕನಾಮಿಕ್ಸ್ ಅಂಡ್ ಕೋ ಆಪರೇಷನ್ ಅಲ್ಯೂಮ್ನಿ ಸೊಸೈಟಿ ಆಫ್ ಮೈಸೂರು ಯೂನಿವರ್ಸಿಟಿ** : ವೇಕಾಸಮ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಎಂ.ಕೆ. ಸವಿತಾ, ಗೌರವ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಸಿ.ಕೆ. ರೇಣುಕಾರ್ಯ, ಡಿಪ್ಯುಟಿ ಕಮೀಷನರ್ (ಕ್ರೈಮ್ ಅಂಡ್ ಟ್ರಾಫಿಕ್) ಕೆ.ಎಸ್. ಸುಂದರ್ ರಾಜ್, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಜೈ ಹಿಂದ್–ದೇಶ ರಕ್ಷಣೆಯ ವೀರರಿಗೆ ಬಾನುಲಿ ನಮನ, ಪ್ರಸ್ತುತಿ–ಎಸ್. ಲಕ್ಷ್ಮೀನಾರಾಯಣ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಟಿ. ಉದಯಕಿರಣ್ ಹಾಗೂ ಮತ್ತೂರು ಕುಮಾರಸ್ವಾಮಿ, ವ್ಯಾಖ್ಯಾನ–ಡಾ. ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 8.35 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗ ದರ್ಶನ ಡಿಪ್ಲೊಮಾ ಇನ್ ಕೋ–ಆಪರೇಟಿವ್ ಮ್ಯಾನೇಜ್ ಮೆಂಟ್ ಕೋರ್ಸ್ ಕುರಿತು ಮೈಸೂರಿನ ಕರ್ನಾಟಕ ಇನ್ ಸ್ಟಿಟ್ಯೂಟ್ ಆಫ್ ಕೋ–ಆಪರೇಟಿವ್ ಮ್ಯಾನೇಜ್ ಮೆಂಟ್ ಸಂಸ್ಥೆಯ ಪ್ರಾಂಶು ಪಾಲರಾದ ಪುಟ್ಟಸ್ವಾಮಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ್, 9.30 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ನಾಸಿರ್ ಅಹ್ಮದ್–ಮ್ಯಾಂಡೋಲಿನ್ ವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಹಳೇಪುರ ಮಾದಶೆಟ್ಟಿ ಮತ್ತು ಸಂಗಡಿಗರಿಂದ ಕಲ್ಯಾಣದ ಬಸವಣ್ಣನ ಕಥೆ, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಎಂ. ಆರ್. ಶ್ರೀಹರ್ಷ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅನುರಾಧ ಸುರೇಶ್ ಕೃಷ್ಣಮೂರ್ತಿ – ಹಾಡುಗಾರಿಕೆ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಮಾಧವಿ ಭಂಡಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, ಪ್ರಾಯೋಜಕರು–ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ವಿಷಯ–ಸುಧಾರಿತ ಮೀನುಗಾರಿಕೆ ಪದ್ಧತಿಗಳು, ಭಾಗವಹಿಸುತ್ತಾರೆ–ಮೀನುಗಾರಿಕೆ ಇಲಾಖೆಯ ಉಪ ನಿರ್ದೇಶಕರಾದ ಡಾ. ಚಿಕ್ಕಣ್ಣ, ಬಾನುಲಿ ಬೇಸಾಯ–ದಣಿವರಿಯದ ಕೃಷಿಗೆ ನಮ್ಮ ಸಹಾಯ, ಪ್ರಸ್ತುತಿ–ಎನ್.ಕೇಶವಮೂರ್ತಿ, 7.35 ಕನ್ನಡದಲ್ಲಿ ವಾರ್ತೆಗಳು, 7.45 ನಕ್ಷತ್ರ ಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, ಇಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಹೆಸರಾಂತ ಚಲನಚಿತ್ರ ಸಾಹಿತಿ ಕವಿರಾಜ್, ಇವರೊಂದಿಗೆ ಭಾಗವಹಿಸುತ್ತಾರೆ ಪ್ರಭುಸ್ವಾಮಿ ಮಳೀಪಠ್ ಹಾಗೂ ಶ್ರೀಮಾನ್ ಎಸ್., 8.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಕದರಿ ಗೋಪಾಲನಾಥ್–ಸ್ಯಾಕ್ಸೋಫೋನ್ ವಾದನ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಹಳ್ಳಿಹಾಡು, ಭಾಗವಹಿಸುತ್ತಾರೆ ಗುಂಡ್ಲುಪೇಟೆ ತಾಲೂಕು ನಿಟ್ರೆ ಮಹಾದೇವಯ್ಯ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 10.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು

ಮೈಸೂರು ಮಿತ್ರ

ಮೈಸೂರು, ಚಾ.ನಗರ ಸಹಕಾರಿಗಳ ಸಹಕಾರ ಸದಾ ನನಗಿದೆ

–ಎಸ್.ಚಂದ್ರಶೇಖರ್



ಭಾರತ ಕೃಷಿ ಪ್ರಧಾನ ದೇಶ. ಅನ್ನ ನೀಡುವ ರೈತರು ನಮ್ಮ ದೇಶದ ಬೆನ್ನೆಲುಬು. ರೈತರು ಆರ್ಥಿಕವಾಗಿ, ಸಾಮಾಜಿಕವಾಗಿ ಬಲಿಷ್ಠರಾದಷ್ಟೂ ದೇಶದ ಅಭಿವೃದ್ಧಿಯ ವೇಗ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಸಹಕಾರ ಕ್ಷೇತ್ರವು ರೈತರಿಗೆ ಶಕ್ತಿ ತುಂಬುವಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದೆ. ಜೊತೆಗೆ ಜನಸಾಮಾನ್ಯರ ಜೀವನಮಟ್ಟ ಸುಧಾರಣೆಗೂ ಪೂರಕವಾಗಿದೆ. ಆದರೆ ಅಗತ್ಯವುಳ್ಳವರಿಗೆ ಸಕಾಲದಲ್ಲಿ ನೆರವು ದೊರೆತಾಗ ಮಾತ್ರ ಸಹಕಾರ ಕ್ಷೇತ್ರದ ಆಶಯ ಸಾಕಾರಗೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ರೈತಾಪಿ ವರ್ಗ ಹಾಗೂ ಜನಸಾಮಾನ್ಯರ ಸಂಕಷ್ಟಕ್ಕೆ ಸ್ಪಂದಿಸುವ, ಅವರ ಶ್ರೇಯೋಭಿವೃದ್ಧಿಗಾಗಿ ನಿಸ್ವಾರ್ಥವಾಗಿ ಶ್ರಮಿಸುವ ಸಹಕಾರಿ ಮನೋಭಾವವುಳ್ಳ ಮೈಸೂರಿನ ಎಸ್.ಚಂದ್ರಶೇಖರ್ ಅವರಂತಹ ಸಹಕಾರಿಗಳು ಈ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಸಕ್ರಿಯರಾಗಿರಬೇಕು.

ಮೈಸೂರಿನ ಎ.ಶಿವನಂಜಪ್ಪ ಹಾಗೂ ದೇವಮ್ಮ ದಂಪತಿಯ ಪುತ್ರನಾಗಿ 30–04–1965ರಲ್ಲಿ ಜನಿಸಿದ ಎಸ್.ಚಂದ್ರಶೇಖರ್ ಅವರ ಜೀವನ ಮತ್ತು ಸಾಧನೆ ಇತರರಿಗೆ ಪ್ರೇರಣೆಯಾಗಬಹುದು. ತಂದೆ ಹಣ್ಣಿನ ವ್ಯಾಪಾರಿ. ಹಾಗಾಗಿ ಚಂದ್ರಶೇಖರ್ ಅವರ ಕುಟುಂಬಕ್ಕೆ ಆರ್ಥಿಕ ಸಂಕಷ್ಟ ಇರಲಿಲ್ಲ. ಸ್ಥಿತಿವಂತರೆಂಬ ಯಾವುದೇ ಹಮ್ಮುಬಿಮ್ಮಿಲ್ಲದ ಈ ಕುಟುಂಬಕ್ಕೆ ಬಡವರೆಂದರೆ ಸಹಾನುಭೂತಿ. ಕಷ್ಟ ಎಂದವರ ಬಗ್ಗೆ ಮರುಗುವುದಷ್ಟೇ ಅಲ್ಲದೆ ಸಾಧ್ಯವಾದಷ್ಟು ಸಹಾಯ ಮಾಡಿಕೊಂಡು ಬಂದಿದೆ.

ತಂದೆ ಶಿವನಂಜಪ್ಪ ಅವರು ನಿಧನರಾದ ನಂತರ ಕುಟುಂಬದ ಜವಾಬ್ದಾರಿಯನ್ನು ಎಸ್.ಚಂದ್ರಶೇಖರ್ ಹೊರಬೇಕಾಯಿತು. ಮನೆ ನಿರ್ವಹಣೆ ಜೊತೆಗೆ ಮನೆತನದ ಘನತೆ–ಗೌರವ ಕಾಪಾಡಿಕೊಂಡು ಸೇವಾ ಕಾರ್ಯಗಳನ್ನು ಮುಂದುವರೆಸುವ ಹೊಣೆಗಾರಿಯೂ ಇವರದ್ದಾಯಿತು. ಹಾಗಾಗಿ ಶಿಕ್ಷಣವನ್ನು ಮೊಟಕುಗೊಳಿಸಿ, ತಂದೆಯ ವೃತ್ತಿಯಲ್ಲೇ ತೊಡಗಿಸಿಕೊಂಡರು. ವಿದ್ಯಾಭ್ಯಾಸ ಪಿಯುಸಿಗೆ ಸೀಮಿತವಾದರೂ ಜೀವನಾನುಭವದಿಂದ ಸಾಕಷ್ಟು ಬದುಕಿನ ತಿಳುವಳಿಕೆ ಪಡೆದುಕೊಂಡರು.



ಕುಟುಂಬದ ಜೊತೆಗೆ ಸಮಾಜದ ಒಳಿತಿಗಾಗಿ ತಮ್ಮನ್ನು ತಾವು ಪ್ರಾಪ್ತ ವಯಸ್ಕರಾಗುತ್ತಲೇ ತೊಡಗಿಸಿಕೊಂಡರು.

ತಾವು ಶಿಕ್ಷಣ ಕಲಿತ ದಳವಾಯಿ ಆಂಗ್ಲ ಮಾಧ್ಯಮ ಶಾಲೆಗೆ ಅಧ್ಯಕ್ಷರಾಗುವ ಯೋಗವೂ ಒದಗಿ ಬಂತು. ಆ ಮೂಲಕ ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿರುವುದು ಚಂದ್ರಶೇಖರ್ ಜೀವನದ ವಿಶೇಷಗಳಲ್ಲೊಂದು. ನಿರಂತರವಾಗಿ ಒಂದಷ್ಟು ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುವುದರ ಜೊತೆಗೆ ಸಂದರ್ಭ ಹಾಗೂ ಪರಿಸ್ಥಿತಿಗೆ ಅನುಸಾರವಾಗಿ ಜನರ ಸಂಕಷ್ಟಗಳಿಗೆ ಸ್ಪಂದಿಸುತ್ತಿರುವ ಚಂದ್ರಶೇಖರ್, ಸಮಾಜಕ್ಕೆ ತಮ್ಮದೇ ಆದ ಮಹತ್ವದ ಕೊಡುಗೆ ನೀಡುತ್ತಿದ್ದಾರೆ.

ರಾಜಕೀಯ ಕ್ಷೇತ್ರದಲ್ಲೂ ತಕ್ಕ ಮಟ್ಟಿಗೆ ಸೇವೆ ಸಲ್ಲಿಸಿರುವ ಚಂದ್ರಶೇಖರ್, ಕಾಂಗ್ರೆಸ್ ಪಕ್ಷದಲ್ಲಿ ಹಲವು ವರ್ಷಗಳ ಕಾಲ ನಿಷ್ಠೆಯಿಂದ ದುಡಿದಿದ್ದಾರೆ. ಪಕ್ಷದಲ್ಲಿ ಯಾವುದೇ ಹುದ್ದೆ ಸಿಗದೇ ಇದ್ದಾಗಲೂ ಬೇಸರಿಸಿಕೊಳ್ಳದೆ ತಮ್ಮದೇ ಆದ ರೀತಿಯಲ್ಲಿ ಪಕ್ಷ ಸಂಘಟಿಸಿದ್ದಾರೆ. 2009ರಲ್ಲಿ ಸಹಕಾರಿ ಕ್ಷೇತ್ರದ ಚುನಾವಣೆಗೆ ಧುಮುಕಿ, ತಮಗಿರುವ ಜನಬೆಂಬಲ ಹಾಗೂ ವೈಯಕ್ತಿಕ ಶಕ್ತಿ–ಸಾಮರ್ಥ್ಯವನ್ನೂ ಸಾಬೀತುಪಡಿಸಿದ್ದಾರೆ. ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾಗಿ, ಎರಡು ಅವಧಿಗೆ ಅಧ್ಯಕ್ಷರಾಗುವಲ್ಲಿ ಯಶಸ್ವಿಯಾದರು. ಅಧಿಕಾರಾವಧಿಯಲ್ಲಿ ಬ್ಯಾಂಕ್ ಅಭಿವೃದ್ಧಿ ಜೊತೆಗೆ ಬ್ಯಾಂಕ್ ಸದಸ್ಯರ ಸಹಕಾರಿ ಸೇವೆಗೆ ನೆರವಾಗುತ್ತಾ ಬಂದಿದ್ದಾರೆ.

ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಜನ್ಮದಿನದಂದು ಪ್ರತಿ ವರ್ಷ ಮೈಸೂರಿನಲ್ಲಿ 10 ಜೋಡಿಯ ಸಾಮೂಹಿಕ ವಿವಾಹ ಕಾರ್ಯಕ್ರಮದ ಮೂಲಕ ಅರ್ಥಪೂರ್ಣವಾಗಿ ಅಪ್ಪುವನ್ನು ಸ್ಮರಿಸಿಕೊಳ್ಳುತ್ತಿದ್ದಾರೆ. ಚಂದ್ರಶೇಖರ್ ಅವರ ಈ ಸೇವಾ ಕಾರ್ಯ 3 ವರ್ಷಗಳಿಂದ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ. ಮೈಸೂರು ಜಿಲ್ಲೆಯಲ್ಲಿರುವ ಸಹಕಾರ ಸಂಘಗಳಿಗೆ ಮೂಲ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ. ಅಲ್ಲದೆ ರಾಜ್ಯಾದ್ಯಂತ ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟಿರುವುದು ವಿಶೇಷ. ಸೂಳೇಭಾವಿಯ ಶ್ರೀ ರಾಮಯ್ಯಸ್ವಾಮಿ ಶಿಕ್ಷಣ ಸಂಸ್ಥೆಗೆ 2.50 ಲಕ್ಷ ರೂ. ವೆಚ್ಚದಲ್ಲಿ ಶಾಲಾ ಕೊಠಡಿಯ ನಿರ್ಮಿಸಿಕೊಟ್ಟಿರುವುದು ಇವರ ಶೈಕ್ಷಣಿಕ ಸೇವಾ ಕಾರ್ಯಗಳಿಗೊಂದು ಸಾಕ್ಷಿಯಾಗಿದೆ.



ಇಚ್ಛಾಶಕ್ತಿ–ಬದ್ಧತೆಯಿಂದ ಸಾಧನೆ: ಈಗ ಸಹಕಾರ ಕ್ಷೇತ್ರದ ಧುರೀಣರಾಗಿರುವ ಎಸ್.ಚಂದ್ರಶೇಖರ್, ದಿಢೀರ್ ಸಾಧಕ ಸ್ಥಾನಕ್ಕೇರಿದವರಲ್ಲ. ಸುಲಭವಾಗಿ ಸಿಕ್ಕ ವಸ್ತು ಅಥವಾ ಅವಕಾಶಕ್ಕೆ ಹೆಚ್ಚು ಆಯಸ್ಸಿಲ್ಲ ಎಂಬ ಅರಿವಿಟ್ಟುಕೊಂಡೇ ನಡೆದುಬಂದವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗರಡಿಯಲ್ಲಿ ರಾಜಕಾರಣ ಹಾಗೂ ದಿವಂಗತ ಸಹಕಾರಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್‌ರಿಂದ ಸಹಕಾರ ಕ್ಷೇತ್ರದ ಆಳ–ಅಗಲ ಹಾಗೂ ವಿಸ್ತಾರವನ್ನು ಚೆನ್ನಾಗಿ ತಿಳಿದುಕೊಂಡೇ ಈ ಕ್ಷೇತ್ರಗಳಿಗೆ ಪಾದಾರ್ಪಣೆ ಮಾಡಿದವರು. ಅಗತ್ಯ ಜಾಗೃತಿ ಜೊತೆಗೆ ವೈಯಕ್ತಿಕ ಸಾಮರ್ಥ್ಯದ ಮೂಲಕ ಸಹಕಾರ ಕ್ಷೇತ್ರಕ್ಕೆ ಕಾಲಿಟ್ಟ ಕೆಲವೇ ದಿನಗಳಲ್ಲಿ ತಮ್ಮದೇ ಛಾಪು ಮೂಡಿಸಿದರು. ದಿಟ್ಟ ನಡೆಯ ಮೂಲಕ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಸ್ಥಾನ ಅಲಂಕರಿಸಿದರು. ಇಚ್ಛಾಶಕ್ತಿ, ಬದ್ಧತೆ ಹಾಗೂ ಪರಿಶ್ರಮವಿದ್ದರೆ ಯಾವುದೇ ಸಾಧನೆಯೂ ಅಸಾಧ್ಯವಲ್ಲ ಎಂಬುದನ್ನು ಯುವಕನಾಗಿದ್ದಾಗಲೇ ಸಾಬೀತುಪಡಿಸಿದರು. ಮೈತ್ರಿ ಪಕ್ಷಗಳ ರಾಜಕೀಯ ದಾಳಕ್ಕೆ ಗುರಿಯಾಗದೆ ಸಹಕಾರ ಕ್ಷೇತ್ರದ ಚುನಾವಣೆಯಲ್ಲಿ ಸತತವಾಗಿ ಜಯ ಸಾಧಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ನುಡಿದಂತೆ ನಡೆಯುತ್ತಿರುವ ಕಾಂಗ್ರೆಸ್ ಸರ್ಕಾರದ ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗರಡಿಯಲ್ಲಿ ಪಳಗಿದ್ದರಿಂದ ಚಂದ್ರಶೇಖರ್ ಸಹಕಾರ ಕ್ಷೇತ್ರದಲ್ಲಿ ತಮ್ಮದೇ ಆದ ಹಿಡಿತ ಸಾಧಿಸಿ, ನಾಯಕತ್ವ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೋವಿಡ್ ಸಂದಿಗ್ಧತೆಯಲ್ಲಿ ನೆರವು: ಕೋವಿಡ್ ಸಾಂಕ್ರಾಮಿಕ ವ್ಯಾಪಿಸಿದಾಗ ಲಾಕ್‌ಡೌನ್ ಸಂದರ್ಭದಲ್ಲಿ ಚಂದ್ರಶೇಖರ್ ಅವರು ಮೈಸೂರು, ಚಾಮರಾಜನಗರ, ಗುಂಡ್ಲುಪೇಟೆ ಹಾಗೂ ಕೊಳ್ಳೇಗಾಲ ಸೇರಿದಂತೆ ವಿವಿಧೆಡೆ 20 ಸಾವಿರಕ್ಕೂ ಹೆಚ್ಚು ಬಡವರಿಗೆ ದಿನಸಿ ಕಿಟ್‌ಗಳನ್ನು ವಿತರಿಸಿದ್ದಾರೆ. ಚಾಮರಾಜನಗರ ಭಾಗದಲ್ಲಿ ಬಡವರು, ಕೂಲಿ ಕಾರ್ಮಿಕರು ಜೀವನಕ್ಕೂ ಕಷ್ಟಪಡುವುದನ್ನು ಕಂಡು ಅಂತಹವರಿಗೆ ಅಕ್ಕಿ, ರಾಗಿ, ಜೋಳ, ಖಾರದ ಪುಡಿ, ಎಣ್ಣೆ, ಉಪ್ಪು, ಸಕ್ಕರೆ, ಬೇಳೆ ಸೇರಿದಂತೆ ಅಗತ್ಯ ವಸ್ತುಗಳ ದಿನಸಿ ಕಿಟ್‌ಗಳನ್ನು ನೀಡಿದ್ದರು. ಕಿಟ್‌ಗಳನ್ನು ತಾವೇ ಮನೆ ಮನೆಗೆ ತಲುಪಿಸುವ ಮೂಲಕ ಜನಮನ್ನಣೆ ಗಳಿಸಿದ್ದಾರೆ. ಇವರ ಈ ಜನಪರ ಕಾರ್ಯವನ್ನು ಗಮನಿಸಿದ್ದ ಸಿದ್ದರಾಮಯ್ಯನವರೂ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಹೀಗೆ ಸಹಕಾರ ಕ್ಷೇತ್ರದಲ್ಲಿ ಸಕ್ರಿಯವಾಗುವುದರ ಜೊತೆಗೆ ಸಮಾಜ ಸೇವೆಯನ್ನೂ ರೂಢಿಸಿಕೊಂಡು ಬಂದಿರುವ ಚಂದ್ರಶೇಖರ್ ಅವರು, ನೊಂದವರು, ಬಡವರ ಧ್ವನಿಯಾಗಿ ಕೆಲಸ ಮಾಡುತ್ತಾ ಬಂದಿದ್ದಾರೆ. ಮನೆ ಬಾಗಿಲಿಗೆ ಬಂದವರನ್ನು ಅತ್ಯಂತ ಪ್ರೀತಿ ವಿಶ್ವಾಸದಿಂದ ಕಾಣುವ ಇವರು, ದೇವಾಲಯ, ಮಠಮಾನ್ಯಗಳ ಮೇಲೂ ಅಪಾರ ಭಕ್ತಿ ಹೊಂದಿದ್ದಾರೆ. ಬಡ ವಿದ್ಯಾರ್ಥಿಗಳು, ಆರ್ಥಿಕವಾಗಿ ಹಿಂದುಳಿದವರು, ಗ್ರಾಮೀಣ ಕ್ರೀಡಾಕೂಟಗಳು ಹೀಗೆ ಯಾವುದೇ ಕಾರ್ಯಕ್ಕೂ ಉದಾರ ದೇಣಿಗೆ ಮೂಲಕ ಜನಸೇವೆಯನ್ನು ಬದುಕಿನ ಭಾಗವಾಗಿಸಿಕೊಂಡಿದ್ದಾರೆ.

“ ನನ್ನ ಸಮಾಜಮುಖಿ ಕಾರ್ಯಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ಕೆ.ಹರೀಶ್‌ಗೌಡ ಅವರು ಬೆನ್ನೆಲುಬಾಗಿ ನಿಂತಿದ್ದಾರೆ. ದಿವಂಗತ ಸಹಕಾರ ಸಚಿವ ಹೆಚ್.ಎಸ್.ಮಹದೇವಪ್ರಸಾದ್, ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣರ ಆಶೀರ್ವಾದ ಸದಾ ನನ್ನ ಮೇಲಿದೆ ಎನ್ನುವ ಎಸ್.ಚಂದ್ರಶೇಖರ್ ಅವರು, ಸಿದ್ದರಾಮಯ್ಯ ಅವರು ಬಹುದೊಡ್ಡ ಸ್ಫೂರ್ತಿ. ಅವರ ಅಬಿವೃದ್ಧಿ ಕಾರ್ಯಗಳೇ ತಮಗೆ ಶ್ರೀರಕ್ಷೆ. ಎಂತಹ ಸಂದರ್ಭ ಎದುರಾದರೂ ಸಹಕಾರಿಗಳು ನನ್ನ ಕೈಬಿಡುವುದಿಲ್ಲ. ಅವರ ಆಶೀರ್ವಾದ ಸದಾ ನನ್ನ ಮೇಲಿರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೆಂಬಲಿಗರ ಗೆಲುವಿಗೆ ಅವಿರತ ಪರಿಶ್ರಮ

“ ಎಸ್.ಚಂದ್ರಶೇಖರ್ ತಮ್ಮ ಗೆಲುವಿನ ಜೊತೆಗೆ ತಮ್ಮ ಬೆಂಬಲಿಗರ ಗೆಲುವಿಗೂ ಕಟಿಬದ್ಧರಾಗಿ ಶ್ರಮಿಸುತ್ತಾರೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಬ್ಯಾಂಕ್, ಜನತಾ ಬಜಾರ್, ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘ ಮೊದಲಾದ ಸಹಕಾರ ಸಂಸ್ಥೆಗಳಲ್ಲಿ ತಮ್ಮ ಬೆಂಬಲಿಗರು ಅಧಿಕ ಸಂಖ್ಯೆಯಲ್ಲಿ ಹೆಚ್ಚು ಗೆಲ್ಲುವಂತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಹೀಗೆ ಸಹಕಾರ ಕ್ಷೇತ್ರದಲ್ಲಿ ಅತೀ ಕಡಿಮೆ ಅವಧಿಯಲ್ಲಿ ಅಪಾರ ಅನುಭವದೊಂದಿಗೆ ಹಿಡಿತ ಸಾಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಷ್ಟದಲ್ಲಿರುವವರಿಗೆ ಸ್ಪಂದಿಸುವ ಗುಣ, ಎಂದಿಗೂ ರೈತರ ಪರವಾಗಿ ನಿಲ್ಲುವ, ಯಾವ ಸಂದರ್ಭದಲ್ಲೂ ಎದೆಗುಂದದೆ ಹೋರಾಡುವ ಮನೋಭಾವದಿಂದಲೇ ಚಂದ್ರಶೇಖರ್, ಇಂದು ಪ್ರಭಾವಿಯಾಗಿ ಬೆಳೆದಿದ್ದಾರೆ. ಎರಡು ಬಾರಿ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೇರುವಲ್ಲೂ ಯಶಸ್ವಿಯಾಗಿದ್ದಾರೆ.

ಜನತಾ ಬಜಾರ್‌ಗೆ ಹೊಸ ಆಯಾಮ ನೀಡಿ ‘ಜನತಾ ಬಜಾರ್ ಚಂದ್ರುವೇ ಆದರು...

ಈಗ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷ ಎಸ್.ಚಂದ್ರಶೇಖರ್ ಅವರು ಸಹಕಾರ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದಾಗ ಅವರಿಗೆ ಈ ಕ್ಷೇತ್ರದ ಬಗ್ಗೆ ಅಷ್ಟೇನೂ ಅನುಭವ ಇರಲಿಲ್ಲ. ಆದರೆ ಸೇವಾ ಮನೋಭಾವದ ಜೊತೆಗೆ ಸಹಕಾರ ಧೋರಣೆಯುಳ್ಳವರಾಗಿ, ಯಾವ ಕ್ಷೇತ್ರವಾದರೂ ಜಯಿಸುವ ಆತ್ಮವಿಶ್ವಾಸ ರೂಢಿಸಿಕೊಂಡರು. ಕಾಲಕ್ರಮೇಣ ಸಹಕಾರ ಕ್ಷೇತ್ರದ ಎಲ್ಲಾ ಮಜಲುಗಳನ್ನು ಅಧ್ಯಯನ ಮಾಡಿ, ಆಳ–ಅಗಲ ತಿಳಿದುಕೊಂಡರು. ಆಸಕ್ತಿಯಿಂದ ಎಲ್ಲಾ ವಿಚಾರಗಳನ್ನೂ ತಿಳಿದುಕೊಂಡು ಅನುಭವ ಗಿಟ್ಟಿಸಿಕೊಂಡರು.



ಬ್ಯಾಂಕ್ ಚುನಾವಣೆ ವೇಳೆಗೆ ಸ್ವತಂತ್ರ ಹಾಗೂ ಏಕಾಂಗಿಯಾಗಿ ಮುನ್ನುಗ್ಗುವಷ್ಟು ಆತ್ಮವಿಶ್ವಾಸ ಹಾಗೂ ಸಾಮರ್ಥ್ಯ ಬೆಳೆಸಿಕೊಂಡರು. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಸಹಕಾರಿಗಳನ್ನು ಸಂಘಟಿಸಿ, ತಮ್ಮ ಬೆಂಬಲಿಗರನ್ನು ಗೆಲ್ಲಿಸುವಲ್ಲಿ ಯಶಸ್ವಿಯಾದರು. ಜನತಾ ಬಜಾರ್ ಚುನಾವಣೆಗೆ ಸ್ಪರ್ಧಿಸಿ ಪ್ರಥಮ ಬಾರಿಗೆ ಅಧ್ಯಕ್ಷರಾದಾಗ ತಮ್ಮ ವಿಶಿಷ್ಟ ಆಡಳಿತದ ವೈಖರಿಯಿಂದ ಗಮನ ಸೆಳೆದರು. ಜನತಾ ಬಜಾರ್ ದುಃಸ್ಥಿತಿಯಿಂದ ಕಂಗೆಡದೆ ಕಾಯಕಲ್ಪ ನೀಡುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇಲ್ಲಿನ ವ್ಯವಸ್ಥೆ ಸುಧಾರಣೆ ಜೊತೆಗೆ ಜನತಾ ಬಜಾರ್ ಔಷಧಿ ಘಟಕ ಸ್ಥಾಪಿಸಿ ರಿಯಾಯಿತಿ ದರದಲ್ಲಿ ಔಷಧಿಗಳು ಸಿಗುವಂತೆ ಮಾಡಿ ಬಡರೋಗಿಗಳಿಗೆ ನೆರವಾದರು. ಜನತಾ ಬಜಾರ್ ಮಾರುಕಟ್ಟೆ ವ್ಯಾಪ್ತಿ ವಿಸ್ತರಿಸಿ, 60 ಲಕ್ಷ ರೂ. ವೆಚ್ಚದಲ್ಲಿ ಸಭಾಂಗಣ ನಿರ್ಮಾಣ ಮಾಡಿದರು. ಜನತಾ ಬಜಾರ್ ಅಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿ, ರಾಜ್ಯಾದ್ಯಂತ ಸಹಕಾರ ಕ್ಷೇತ್ರದಲ್ಲಿ ‘ಜನತಾ ಬಜಾರ್ ಚಂದ್ರು’ ಎಂದೇ ಗುರುತಿಸುವಂತಾದರು.

▶ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಆಡಳಿತ ಮತ್ತು ಸುಧಾರಣೆಯ ದೃಷ್ಟಿಯಿಂದ ಮೈಲಿಗಲ್ಲು ಸ್ಥಾಪಿಸಿದ ಎಸ್. ಚಂದ್ರಶೇಖರ್, ರಾಜ್ಯದಲ್ಲಿ ಬ್ಯಾಂಕ್‌ನ ಪ್ರತಿಷ್ಠೆಯನ್ನು ಬೆಳಗಿದವರು. ವಿವಿಧೆಡೆ ಶಾಖೆಗಳನ್ನು ತೆರೆಯುವ ಮೂಲಕ ಬ್ಯಾಂಕ್ ಸೇವೆ ರೈತರ ಕೈಗೆಟಕುವಂತೆ ಮಾಡಿದವರು. ಸಿಬ್ಬಂದಿ ಕೊರತೆಯನ್ನು ನೀಗುವ ದೃಷ್ಟಿಯಿಂದ ತ್ವರಿತ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿದ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ. ಅತ್ತ ಜನತಾ ಬಜಾರ್‌ನ ಅಧ್ಯಕ್ಷರಾಗಿ ಹೊಸ ಅಧ್ಯಾಯವನ್ನೇ ಬರೆದವರು. ಇದುವರೆಗೆ ದವಸ ಧಾನ್ಯ ವಿತರಣೆಗೆ ಮೀಸಲಾಗಿದ್ದ ಜನತಾ ಬಜಾರ್ ಇವರ ಅವಧಿಯಲ್ಲಿ ಔಷಧಿ ಸೇರಿದಂತೆ ಜೀವನಾವಶ್ಯಕ ವಸ್ತುಗಳ ಪೂರೈಸುವ ಕೇಂದ್ರವಾಗಿ ಪರಿವರ್ತನೆಯಾಯಿತು. ಅಕ್ಕಿಯ ಬೆಲೆ ಗಗನಕ್ಕೇರಿದಾಗ ಜನತಾ ಬಜಾರ್ ವತಿಯಿಂದ ಅಕ್ಕಿ ಮೇಳ, ಶಾಲಾ ಮಕ್ಕಳಿಗೆ ಬ್ಯಾಗ್, ನೋಟ್‌ಬುಕ್ ಅಲ್ಲದೆ ಅಗತ್ಯ ವಸ್ತುಗಳನ್ನು ಕಲ್ಪಿಸುವುದರೊಂದಿಗೆ ಜನಪರ ಮಳಿಗೆಯಾಗಿ ಪರಿವರ್ತಿಸಿದ ಹೆಗ್ಗಳಿಕೆ ಎಸ್.ಚಂದ್ರಶೇಖರ್ ಅವರದ್ದು....



ಸಹಕಾರಿಗಳಿಗೆ ಶಕ್ತಿ ತುಂಬುವ ಕೆಲಸ

“ ನನ್ನ ಬಗ್ಗೆ ಸಹಕಾರಿಗಳಿಗೆ ತಿಳಿದಿದೆ. ನನ್ನ ಮೇಲೆ ವಿಶ್ವಾಸವನ್ನಿಟ್ಟು ಈಗಾಗಲೇ ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಗೆಲ್ಲಿಸಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ನನ್ನ ಈವರೆಗಿನ ಕೆಲಸ ಕಾರ್ಯಗಳನ್ನು ಸಹಕಾರಿಗಳು ಅರಿತಿದ್ದಾರೆ. ಯಾವುದೇ ಸಂದರ್ಭದಲ್ಲೂ ನಾನು ಸಹಕಾರಿಗಳ ಜೊತೆಗಿದ್ದು, ಕೆಲಸ ಮಾಡಿದ್ದೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ನನ್ನ ಮೇಲೆ ವಿಶ್ವಾಸ ಇಟ್ಟು ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಬ್ಯಾಂಕ್ ಹಾಗೂ ಸಹಕಾರ ಸಂಘಗಳ ಅಭಿವೃದ್ಧಿ ಜೊತೆಗೆ ಪರಿಶಿಷ್ಟ ಜಾತಿ ಮತ್ತು ವರ್ಗ ಸಹಕಾರ ಸಂಘಗಳ ಅಭಿವೃದ್ಧಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಶ್ರಮಿಸುತ್ತೇನೆ. ಸಹಕಾರಿಗಳ ಶಕ್ತಿ ಇರುವವರೆಗೂ ನನಗೆ ಯಾವುದೇ ಆತಂಕವಿಲ್ಲ.

–ಎಸ್.ಚಂದ್ರಶೇಖರ್, ಅಧ್ಯಕ್ಷರು,
ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಪತ್ತಿನ ಸಹಕಾರ ಸಂಘ

ಎಂಸಿಡಿಸಿಸಿ ಬ್ಯಾಂಕ್ ಅಭಿವೃದ್ಧಿಗೆ ಪರಿಶ್ರಮ



15–07–2016ರಿಂದ 09–08–2016ರವರೆಗೆ ಎಂಸಿಡಿಸಿಸಿ ಬ್ಯಾಂಕ್ ಪ್ರಭಾರ ಅಧ್ಯಕ್ಷರಾಗಿ ಕಾರ್ಯ ನಿರ್ವಹಣೆ. 10–08–2016ರಿಂದ ಬ್ಯಾಂಕಿನ ಅಧ್ಯಕ್ಷರಾಗಿ ಚುನಾಯಿತರಾಗಿ 21–11–2018ರವರೆಗೆ ಸೇವೆ. ಅಧ್ಯಕ್ಷರಾದ ಕೂಡಲೇ ವಿವಿಧೆಡೆ ಬ್ಯಾಂಕ್‌ನ ಶಾಖೆಗಳನ್ನು ತೆರೆಯಲು ಆದ್ಯತೆ. 2012–13ನೇ ಸಾಲಿನಲ್ಲಿದ್ದ ಒಟ್ಟು 19 ಶಾಖೆಗಳನ್ನು ಗಣನೀಯವಾಗಿ ಹೆಚ್ಚಿಸಿದ್ದು. 2016–17ನೇ ಸಾಲಿನಲ್ಲಿ 22ಕ್ಕೆ, 2018–19ನೇ ಸಾಲಿನಲ್ಲಿ 31ಕ್ಕೆ ಹೆಚ್ಚಿಸುವ ಮೂಲಕ 12 ಹೊಸ ಶಾಖೆಗಳನ್ನು ತೆರೆಯಲಾಯಿತು.

2012–13ನೇ ಸಾಲಿನಲ್ಲಿ ಬ್ಯಾಂಕ್ ಅಂದಿನ ಅಧ್ಯಕ್ಷರಾಗಿದ್ದ ಸಿ.ಬಸವೇಗೌಡರ ಅವಧಿಯಲ್ಲಿ, 31–03–2012ರನ್ವಯ ಒಟ್ಟು 30226.56 ಲಕ್ಷ ರೂ.ಗಳ ಕೃಷಿ ಹಾಗೂ ಕೃಷಿಯೇತರ ಸಾಲಗಳನ್ನು ರೈತರು ಹಾಗೂ ಗ್ರಾಹಕರಿಗೆ ವಿತರಿಸಲಾಯಿತು. 2012–13ನೇ ಸಾಲಿನಲ್ಲಿ 2274.80 ಲಕ್ಷ ರೂ. ಹಾಗೂ 2016–17ನೇ ಸಾಲಿನಲ್ಲಿ 3919.64 ಲಕ್ಷ ರೂ. ಇದ್ದ ಷೇರು ಬಂಡವಾಳ 2017–18ಕ್ಕೆ 4701.81 ಲಕ್ಷ ರೂ.ಗೆ ಹಾಗೂ 2018–19ನೇ ಸಾಲಿನಲ್ಲಿ 5285.15 ಲಕ್ಷ ರೂ.ಗಳಿಗೆ ಏರಿಕೆಯಾಯಿತು.

2016–17ನೇ ಸಾಲಿನಲ್ಲಿ ಎಸ್.ಚಂದ್ರಶೇಖರ್ ಅಧ್ಯಕ್ಷರಾಗಿ ಒಟ್ಟು 58507.92 ಲಕ್ಷ ರೂ.ಗಳ ಕೃಷಿ ಹಾಗೂ ಕೃಷಿಯೇತರ ಸಾಲಗಳನ್ನು ರೈತರು, ಗ್ರಾಹಕರಿಗೆ ವಿತರಣೆ. 2017–18ನೇ ಸಾಲಿನಲ್ಲಿ 71276.13 ಲಕ್ಷ ರೂ. ಕೃಷಿ, ಕೃಷಿಯೇತರ ಸಾಲಗಳ ವಿತರಣೆ. 2018–19ನೇ ಸಾಲಿನಲ್ಲಿ ಒಟ್ಟು 62329.14 ಲಕ್ಷ ರೂ. ಸಾಲ ವಿತರಣೆಯಾಯಿತು.

2012–13ನೇ ಸಾಲಿನಲ್ಲಿ ಬ್ಯಾಂಕ್‌ನಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಲಾದ ಠೇವಣಿ 24,000.77 ಲಕ್ಷ ರೂ. 2016–17ನೇ ಸಾಲಿನಲ್ಲಿ 39836.03 ಲಕ್ಷ ರೂ., 2017–18ಕ್ಕೆ 41787.51 ಲಕ್ಷ ರೂ., 2018–19ನೇ ಸಾಲಿಗೆ 49884.51 ಲಕ್ಷ ರೂ.ಗೆ ಠೇವಣಿ ಸಂಗ್ರಹ ಹೆಚ್ಚಳ.

2012–13ನೇ ಸಾಲಿನಲ್ಲಿ ನಬಾರ್ಡ್ ಮತ್ತು ಅಪೆಕ್ಸ್ ಬ್ಯಾಂಕಿನಿಂದ ಪಡೆದಿರುವ ಸಾಲಗಳಿಗೆ 2378.18 ಲಕ್ಷ ರೂ.ಗಳ ಬಡ್ಡಿ ಪಾವತಿ ಮಾಡಲಾಗಿತ್ತು. 2016–17ನೇ ಸಾಲಿನಲ್ಲಿ 3701.31 ಲಕ್ಷ ರೂ., 2017–18ರಲ್ಲಿ 4603.88 ಲಕ್ಷ ರೂ., 2018–19ರಲ್ಲಿ 5917.40 ಲಕ್ಷ ರೂ.ಗಳ ಬಡ್ಡಿ ಪಾವತಿ.

2012–13ನೇ ಸಾಲಿನಲ್ಲಿ 3857.10 ಲಕ್ಷ ರೂ.ಗಳು ಇತರೆ ಆದಾಯ ಮೂಲಗಳಿಂದ ಬಡ್ಡಿ ಮತ್ತು ಕಮೀಷನ್ ಬಂದಿದ್ದು. 2016–17ನೇ ಸಾಲಿನಲ್ಲಿ 5662.35 ಲಕ್ಷ ರೂ., 2017–18ಕ್ಕೆ 7514.61 ಲಕ್ಷ ರೂ. ಹಾಗೂ 2018–19ನೇ ಸಾಲಿಗೆ 8491.53 ಲಕ್ಷ ರೂ. ಇತರೆ ಆದಾಯ ಮೂಲಗಳಿಂದ ಬಡ್ಡಿ ಮತ್ತು ಕಮೀಷನ್ ಸಂಗ್ರಹ.

ಬ್ಯಾಂಕ್ ಹೆಚ್ಚಿನ ಲಾಭಗಳಿಸಿದ್ದರಿಂದ ಸಿಬ್ಬಂದಿಗೆ 2016–17ನೇ ಸಾಲಿನಲ್ಲಿ ಶೇ.20ರಷ್ಟು, 2017–18ಕ್ಕೆ ಶೇ.20ರಷ್ಟು, 2018–19ನೇ ಸಾಲಿಗೆ ಶೇ.20ರಷ್ಟು ಸಿಬ್ಬಂದಿಗಳಿಗೆ ಎಕ್ಸ್‌ಗ್ರೇಷಿಯಾ ಪಾವತಿ ಮಾಡಲಾಗಿದೆ.

2012–13ನೇ ಸಾಲಿನಲ್ಲಿ ಶೇ.6.5ರಷ್ಟು ಎನ್‌ಪಿಎ ಇತ್ತು. 2016–17ನೇ ಸಾಲಿನಲ್ಲಿ ಶೇ.8.49ರಷ್ಟು, 2017–18ಕ್ಕೆ ಶೇ.5.80ರಷ್ಟು, 2018–19ನೇ ಸಾಲಿಗೆ ಶೇ.7.15ಕ್ಕೆ ಏರಿಕೆಯಾಗಿರುತ್ತದೆ. (2017–18ನೇ ಸಾಲಿನಲ್ಲಿ ಸಾಲ ಮನ್ನಾಗೆ ಕೆಲವು ರೈತರು ಒಳಪಡದಿರುವುದರಿಂದ ಸಾಲ ಸುಸ್ತಿಯಾಗಿ ಎನ್‌ಪಿಎ ಹೆಚ್ಚಾಗಿತ್ತು)

2012–13ನೇ ಸಾಲಿನಲ್ಲಿ ಬ್ಯಾಂಕ್ 330.32 ಲಕ್ಷ ರೂ.ಗಳ ಲಾಭಗಳಿಸಿದರೇ, 2016–17ನೇ ಸಾಲಿನಲ್ಲಿ 279.40 ಲಕ್ಷ ರೂ., 2017–18ಕ್ಕೆ 385.29 ಲಕ್ಷ ರೂ., 2018–19ನೇ ಸಾಲಿಗೆ 27.75 ಲಕ್ಷ ರೂ. ಲಾಭ ಬಂದಿದೆ.(2017–18ನೇ ಸಾಲಿನಲ್ಲಿ ಸಾಲ ಮನ್ನಾದ ಅಸಲು ಮತ್ತು ಬಡ್ಡಿ ಬಿಡುಗಡೆ ಮಾಡುವುದು ತಡವಾಗಿರುವುದರಿಂದ ಲಾಭ ಕಡಿಮೆ ಆಗಿತ್ತು)

ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಆಯ್ಕೆಯಾದರೆ ಬ್ಯಾಂಕ್‌ನಿಂದ ರೈತರಿಗೆ ಭರಪೂರ ಯೋಜನೆ ಖಚಿತ

–ಎಸ್.ಚಂದ್ರಶೇಖರ್, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿ

ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಆಡಳಿತ ಮಂಡಳಿ ಚುನಾವಣೆ ಭಾರಿ ಕುತೂಹಲ ಸೃಷ್ಟಿಸಿದೆ. ಶಾಸಕರು, ಮಾಜಿ ಶಾಸಕರು, ಹಿರಿಯ ಸಹಕಾರಿಗಳು ಸೇರಿದಂತೆ ಅನೇಕ ಘಟಾನುಘಟಿಗಳು ಕಣದಲ್ಲಿದ್ದಾರೆ. ಹಾಗೆಯೇ ಬ್ಯಾಂಕ್ ಅಧ್ಯಕ್ಷರಾಗಿ 2 ಅವಧಿಗೆ ಕೆಲಸ ಮಾಡಿರುವ ಹಿರಿಯ ಸಹಕಾರಿ ಎಸ್.ಚಂದ್ರಶೇಖರ್ ಮತ್ತೆ ಅಖಾಡಕ್ಕಿಳಿದಿದ್ದಾರೆ. ತಾಲೂಕು, ಜಿಲ್ಲೆ ಹಾಗೂ ಅದಕ್ಕೂ ಮೇಲ್ಪಟ್ಟು ಕಾರ್ಯವ್ಯಾಪ್ತಿ ಹೊಂದಿರುವ ಸಹಕಾರ ಸಂಘಗಳು ಮತ್ತು ಸಹಕಾರ ಬ್ಯಾಂಕುಗಳ ಕ್ಷೇತ್ರದಿಂದ ಸ್ಪರ್ಧಿಸಿರುವ ಇವರು, ಸಹಕಾರಿಗಳ ಬೇಷರತ್ ಬೆಂಬಲ ಹಾಗೂ ಆಶೀರ್ವಾದದಿಂದ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಮೈಸೂರು ಮಿತ್ರ: ಮೈಸೂರು–ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಈ ಬಾರಿಯ ಚುನಾವಣೆ ನಿಮಗೆಷ್ಟು ಮುಖ್ಯವೆನಿಸಿದೆ?

ಚಂದ್ರಶೇಖರ್: ಎರಡು ಅವಧಿಗೆ ಅಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡಿರುವ ನನಗೆ ಈ ಚುನಾವಣೆ ಬಹಳ ಮುಖ್ಯ. ರೈತಾಪಿ ವರ್ಗ, ಜನಸಾಮಾನ್ಯರ ಪರವಾಗಿ ತ್ವರಿತ ಹಾಗೂ ನಿಸ್ವಾರ್ಥ ಸೇವೆ ಸಲ್ಲಿಸುವುದರ ಜೊತೆಗೆ ಬ್ಯಾಂಕ್ ಅಭಿವೃದ್ಧಿ ವಿಚಾರದಲ್ಲಿ ತನ್ನದೇ ಆದ ಚಿಂತನೆ, ಯೋಜನೆಯ ಅನುಷ್ಠಾನಕ್ಕೆ ಈ ಅವಕಾಶ ಮಹತ್ವದ್ದಾಗಿದೆ.

ಮಿತ್ರ: ಚುನಾವಣೆಯಲ್ಲಿ ತಾವು ಆಯ್ಕೆಯಾದಲ್ಲಿ ತಮ್ಮಿಂದ ಯಾವ ಮಹತ್ವದ ಯೋಜನೆ ಅಥವಾ ಕಾರ್ಯಕ್ರಮ ನಿರೀಕ್ಷಿಸಬಹುದು?

ಚಂದ್ರಶೇಖರ್: ನಮ್ಮ ಅವಧಿಯಲ್ಲಿ 12 ಹೊಸ ಶಾಖೆ ಆರಂಭಿಸಿದ್ದೆವು. ಈಗ, ಮತ್ತಷ್ಟು ಶಾಖೆಗಳನ್ನ ತೆರೆಯುವ ಮೂಲಕ ಸೇವೆ ವಿಸ್ತರಿಸುವ ಅವಶ್ಯಕತೆ ಇದೆ. ಹೆಚ್.ಎಸ್.ಮಹದೇವಪ್ರಸಾದ್ ಅವರು ಇದ್ದಾಗಲೇ ಎಂಸಿಡಿಸಿಸಿ ಬ್ಯಾಂಕ್ ವಿಭಜಿಸಿ ಚಾಮರಾಜನಗರಕ್ಕೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಸೃಜಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿತ್ತು. ಅಖಂಡ ಮೈಸೂರಿನಿಂದ ಚಾಮರಾಜನಗರ ಜಿಲ್ಲೆ ವಿಭಜಿತವಾಗಿ 2 ದಶಕಗಳಾದರೂ ಮಹತ್ವದ ಎಂಸಿಡಿಸಿಸಿ ಬ್ಯಾಂಕ್ ಮಾತ್ರ ವಿಭಜನೆ ಆಗಿಲ್ಲ. ಈ ನಿಟ್ಟಿನಲ್ಲಿ ನಾವು ಅಧ್ಯಕ್ಷರಾಗಿದ್ದಾಗಲೇ ನಬಾರ್ಡ್, ಅಪೆಕ್ಸ್ ಬ್ಯಾಂಕ್‌ಗೆ ಪತ್ರ ಬರೆಯಲಾಗಿತ್ತು. ನಮ್ಮ ಅಧಿಕಾರಾವಧಿ ಮುಗಿದ ಮೇಲೆ ಈ ಪ್ರಕ್ರಿಯೆ ಸ್ಥಗಿತಗೊಂಡಿತು. ನಮ್ಮ ಕಾಂಗ್ರೆಸ್ ಬೆಂಬಲಿತ ಆಡಳಿತ ಮಂಡಳಿ ರಚನೆಯಾದರೆ ಮೊದಲಿಗೆ ಚಾಮರಾಜನಗರಕ್ಕೆ ಪ್ರತ್ಯೇಕ ಬ್ಯಾಂಕ್ ಸೃಜಿಸುವ ಪ್ರಕ್ರಿಯೆ ಪುನಾರಂಭಿಸಲಾಗುವುದು. ಇದು ಮಹದೇವಪ್ರಸಾದ್ ಅವರ ಮಹದಾಸೆ. ನಾನು ಅವರ ಪರಮಶಿಷ್ಯ. ಅವರು ಮತ್ತು ಸಿದ್ದರಾಮಯ್ಯನವರು ಮೊದಲಿಗೆ ನನ್ನನ್ನು ಬ್ಯಾಂಕ್ ಅಧ್ಯಕ್ಷನಾಗಿ ಮಾಡಿದ್ದರು. ಅವರ ಆಸೆ ಈಡೇರಿಸುವ ಜವಾಬ್ದಾರಿ ಈಗ ನಮ್ಮ ಮೇಲಿದೆ.

ಮಿತ್ರ: ರೈತಾಪಿ ವರ್ಗಕ್ಕೆ ಮತ್ತಷ್ಟು ಅನುಕೂಲಕರವಾದ ಯೋಜನೆ ತರುವ ಚಿಂತನೆ ಇದೆಯೇ?

ಚಂದ್ರಶೇಖರ್: ರೈತರಿಗೆ ಈಗ ಬ್ಯಾಂಕ್‌ನಿಂದ ಸಾಲ ಸೌಲಭ್ಯ ನೀಡಲಾಗುತ್ತಿದೆ. ಬೆಳೆ ಸಾಲ, ಟ್ರ್ಯಾಕ್ಟರ್ ಖರೀದಿಗೆ, ಬೋರ್‌ವೆಲ್ ಸೌಕರ್ಯಕ್ಕೆ ಸಹಾಯ ಮಾಡಲಾಗುತ್ತಿದೆ. ಸಹಕಾರ ಸಂಘಗಳ ಕಟ್ಟಡಗಳಿಗೆ ನೆರವು ನೀಡಲಾಗುತ್ತಿದೆ. ಮುಂದುವರೆದು ರೈತರಿಗೆ ಮತ್ತಷ್ಟು ಆರ್ಥಿಕ ಬಲ ತುಂಬುವ ನಿಟ್ಟಿನಲ್ಲಿ ಅವರಿಗೆ ಅಗತ್ಯ ಕೃಷಿ ಯಂತ್ರೋಪಕರಣಗಳನ್ನು ಸಬ್ಸಿಡಿ ಯೋಜನೆಯಡಿ ಒದಗಿಸುವ ಯೋಜನೆ ತರುವ ಚಿಂತನೆ ಇದೆ. ನಮಗೆ ಅವಕಾಶ ದೊರೆತರೆ ನಬಾರ್ಡ್ ಹಾಗೂ ಅಪೆಕ್ಸ್ ಬ್ಯಾಂಕ್ ಸಹಕಾರದೊಂದಿಗೆ ಈ ಕಾರ್ಯಕ್ರಮ ಅನುಷ್ಠಾನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಮಿತ್ರ: ಎಲ್ಲಾ ರೈತರು ಹಾಗೂ ಹೈನುಗಾರಿಕೆಯಲ್ಲಿ ತೊಡಗಿರುವ ಶ್ರಮಿಕರನ್ನು ಸಹಕಾರ ಕ್ಷೇತ್ರದಲ್ಲಿ ಒಟ್ಟುಗೂಡಿಸುವ ಬಗ್ಗೆ ಏನಾದರೂ ಕಾರ್ಯಕ್ರಮ ರೂಪಿಸುವಿರಾ?.

ಚಂದ್ರಶೇಖರ್: ಸಹಕಾರ ಕ್ಷೇತ್ರವು ರೈತಾಪಿ ವರ್ಗದ ಅಭಿವೃದ್ಧಿಗೆ ಪೂರಕವಾಗಿದೆ ಎಂಬುದರ ಬಗ್ಗೆ ಮೊದಲು ಜಾಗೃತಿ ಮೂಡಿಸುವ ಅಗತ್ಯವಿದೆ. ಎಲ್ಲಾ ರೈತರನ್ನೂ ಸಹಕಾರ ಕ್ಷೇತ್ರದಲ್ಲಿ ಒಳಗೊಳ್ಳುವಂತೆ ಮಾಡಬೇಕಿದೆ. ಈ ನಿಟ್ಟಿನಲ್ಲಿ ಸೊಸೈಟಿಗಳಲ್ಲಿ, ತಾಲೂಕು ಕೇಂದ್ರಗಳಲ್ಲಿ ಸದಸ್ಯತ್ವ ನೋಂದಣಿಗೆ ಅಭಿಯಾನ ನಡೆಸಬೇಕಿದೆ. ಈ ನಿಟ್ಟಿನಲ್ಲಿ ಮತ್ತಷ್ಟು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಮಾಡುತ್ತೇವೆ.

ಮಿತ್ರ: ಚುನಾವಣೆ ವಾತಾವರಣ ಹೇಗಿದೆ? ಫಲಿತಾಂಶದ ಬಗ್ಗೆ ನಿಮ್ಮ ನಿರೀಕ್ಷೆ?

ಚಂದ್ರಶೇಖರ್: ಸದ್ಯ, ಎಲ್ಲಾ ಸಹಕಾರಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. ನಮ್ಮ ಕಾಂಗ್ರೆಸ್ ಬೆಂಬಲಿತ ಎಲ್ಲಾ ಅಭ್ಯರ್ಥಿಗಳೂ ಚುನಾವಣೆಯಲ್ಲಿ ಗೆಲುವು ಸಾಧಿಸುವ ವಿಶ್ವಾಸವಿದೆ. 13ರಲ್ಲಿ ಈಗಾಗಲೇ ಯಳಂದೂರು ಕ್ಷೇತ್ರದಿಂದ ಅವಿರೋಧ ಆಯ್ಕೆಯಾಗಿದೆ. ಇನ್ನು 12 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರೆಲ್ಲರೂ ಗೆಲುವು ಸಾಧಿಸುವುದರಲ್ಲಿ ನನಗಂತೂ ಅನುಮಾನ ಇಲ್ಲ.







ನಕ್ಕರೆ ಅದೇ ಸ್ವರ್ಗ

ಕುಡುಕ : ನಮಸ್ಕಾರ ಸಾರ್, ನಂಗೆ ಎಂ.ಜಿ. ರೋಡಿನಲ್ಲಿ ಒಂದು ಪರ್ಸ್ ಸಿಕ್ಕಿದೆ. ಅದರಲ್ಲಿ 15 ಸಾವಿರ ಕ್ಯಾಷ್, ಒಂದು ಐ-ಫೋನ್ 14, ಒಂದು ಕ್ರೆಡಿಟ್ ಕಾರ್ಡ್, ಜೊತೆಗೆ ಯಾರೋ ಪಲ್ಲವಿ ಎಂಬ ಹೆಸರಲ್ಲಿ ಒಂದು ಐಡಿ ಕಾರ್ಡ್ ಸಿಕ್ಕಿದೆ.

ರೇಡಿಯೋ ಜಾಕಿ : ಸರ್... ನಿಮ್ಮಂತಹ ಪ್ರಾಮಾಣಿಕರು ತುಂಬಾ ಕಮ್ಮಿ! ನೀವು ಅವರಿಗೆ ವಾಪಸ್ ತಲುಪಿಸಲಿಕ್ಕೆ ನಮಗೆ ಕಾಲ್ ಮಾಡಿದ್ರಿ ಅಲ್ವೇ?

ಕುಡುಕ : ಇಲ್ಲಾ ಸಾರ್... ಪಾಪ... ಪಲ್ಲವಿಯವರಿಗೋಸ್ಕರ ತುಂಬಾ ದುಃಖದ ಹಾಡು ಹಾಕ್ಬಿಡಿ ಸಾರ್...!

ಮೈಸೂರು ಮಿತ್ರ

ಬುಧವಾರ, 25 ಜೂನ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ದುಡ್ಡು ಎಲ್ಲರಿಗೂ ಸಿಗುತ್ತೆ. ಆದರೆ ಒಳ್ಳೆಯವರು ದುಡ್ಡಿಗೆ ಸಿಗುವುದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಗುಲ ಸ್ಥಳವನ್ನು ಕೊಟ್ಟರೆ ಮಠವನ್ನ ಕಟ್ಟಿದ

ನಿಮ್ಮ ಪತ್ರಗಳು

ಎಸ್‌ಬಿಐ ಫಾಸ್ಟ್‌ಟ್ಯಾಗ್ ಕರ್ಮಕಾಂಡ

ಮಾನ್ಯರೆ,

ದಿನಾಂಕ 15.6.2025 ರಂದು ವೈಯಕ್ತಿಕ ಕೆಲಸ ನಿಮಿತ್ತ ನಾನು ಬೆಂಗಳೂರಿಗೆ ತೆರಳುವಾಗ ಗಣಂಗೂರಿನ ಟೋಲ್ ಬಳಿ ನನ್ನ ವಾಹನವನ್ನು ಫಾಸ್ಟ್‌ಟ್ಯಾಗ್‌ನಲ್ಲಿ ಹಣವಿಲ್ಲದ ಕಾರಣಕ್ಕೆ ತಡೆಹಿಡಿಯಲಾಯಿತು. ಟೋಲ್ ಸಿಬ್ಬಂದಿ ಬಳಿ ನಾನು ನನ್ನ ಫಾಸ್ಟ್ ಟ್ಯಾಗ್ ಖಾತೆಯಲ್ಲಿ ರೂ.1460 ಇರುವುದರ ಬಗ್ಗೆ ತೋರಿಸಿದರೂ, ಅವರು ನಮ್ಮಲ್ಲಿ ತೋರಿಸುತ್ತಿಲ್ಲ. ನೀವು ಗ್ರಾಹಕ ಸೇವಾ ಕೇಂದ್ರಕ್ಕೆ ಮಾತನಾಡಿ ಎಂದರು. ಅಷ್ಟು ಹೊತ್ತಿಗೆ ಹಿಂದಕ್ಕೂ ಮುಂದಕ್ಕೂ ಹೋಗಲಾರದ ನಾನು ಅವರನ್ನು ಮುಂದೆ ಬಿಡಲು ವಿನಂತಿಸಿದಾಗ ಅವರು ಕೊನೆಯ ಲೇನ್‌ನಿಂದ ಮತ್ತೆ ಹಿಂದಕ್ಕೆ ಬರಲು ಅನುವು ಮಾಡಿಕೊಟ್ಟರು. ನಂತರ ನಾನು ಗ್ರಾಹಕ ಸೇವಾ ಕೇಂದ್ರಕ್ಕೆ ಮೊಬೈಲ್ ಮೂಲಕ ಮಾತನಾಡಿದಾಗ ಅವರು ನನ್ನ ಫಾಸ್ಟ್‌ಟ್ಯಾಗ್ ಸರಿಯಾಗಿದೆ ಮತ್ತು ಹಣವೂ ಕೂಡಾ ಖಾತೆಯಲ್ಲಿದೆ. ಮತ್ತೊಂದು ಲೇನ್ ಮೂಲಕ ಹಾದು ಹೋಗಲು ತಿಳಿಸಿದರು. ಆದರೆ ಈ ಬಾರಿ ಕೂಡ ಮತ್ತೊಂದು ಲೇನ್‌ನ ಸಿಬ್ಬಂದಿ ಕೂಡ ಹಳೆಯ ಉತ್ತರವನ್ನೇ ತಿಳಿಸಿದಾಗ ಹಿಂದುಗಡೆಯ ಇತರೆ ವಾಹನಗಳು ಸಾಲಿನಲ್ಲಿ ಸಹನೆ ಮೀರುತ್ತಿದ್ದಾಗ ನಾನು ರೂ 350 ಡಬಲ್ ಟೋಲ್ ತೆತ್ತು ಮುಂದಕ್ಕೆ ಸಾಗಿದೆ.

ನಂತರ ಪುನಃ ಗ್ರಾಹಕ ಸೇವೆಯವರಿಗೆ ಫೋನ್ ಮಾಡಿದಾಗ ಅವರು ನನ್ನ ಫಾಸ್ಟ್‌ಟ್ಯಾಗ್ ಅನ್ನು ಕಪ್ಪು ಪಟ್ಟಿಗೆ ಸೇರಿಸಿರುವುದಾಗಿ ತಿಳಿಸಿ ನನ್ನನ್ನೇ ಏಕೆ ಹೀಗಾಗಿರ ಬಹುದು ಎಂದು ಕೇಳಿದರು. ಕಳೆದ ಮೇ ಮಾಹೆಯಲ್ಲಿ ಒಮ್ಮೆ ಕಣ್ತಪ್ಪಿನಿಂದಾಗಿ ನಾನು ರಸ್ತೆ ತಿಳಿಯದೆ ಎರಡು ಹೆಚ್ಚುವರಿ ಟೋಲ್‌ಗಳನ್ನು ಪೀಕಿದ್ದು, ನಂತರ ಇದು ಮೂವತ್ತು ರೂ.ಗಳ ಮೈನಸ್ ಲೆಕ್ಕವಾದಾಗ, ನಾನು ತಕ್ಷಣವೇ ಅಗತ್ಯ ಹಣವನ್ನು ತುಂಬಿದ್ದೆ. ಆದರೆ ಈ ರೀತಿ ಕಡಿತವಾದ ಮತ್ತು ಕಪ್ಪು ಪಟ್ಟಿಗೆ ಸೇರಿಸಿದ ಬಗ್ಗೆ ನನಗೆ ಯಾವುದೇ ಸಂದೇಶ ಬಂದಿರಲಿಲ್ಲ. ಈ ಬಗ್ಗೆ ಮಾತನಾಡಿದ ಗ್ರಾಹಕ ಸೇವೆಯವರು ಪುನಃ ಅಗತ್ಯ ಪ್ರತಿಗಳನ್ನು ಅವರ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದಾಗ, ಕಳೆದ ಮೂರು ದಿನಗಳಿಂದಲೂ ಈ ಪೋರ್ಟಲ್ ಸರ್ವರ್ ಡೌನ್ ಎಂದು ಬಿಂಬಿಸುತ್ತಿದೆ.

ಒಬ್ಬ ಸಾಮಾನ್ಯ ಪ್ರಜೆಗೆ ಆತನ ತಪ್ಪಿಲ್ಲದ ಕಾರಣಕ್ಕೆ ವಿನಾ ಕಾರಣ ಟೋಲ್‌ಗಳಲ್ಲಿ ಕೇಂದ್ರ ಭೂ ಸಾರಿಗೆ ಇಲಾಖೆಯ ವರ್ತನೆ ಸಲ್ಲ. ಅಲ್ಲದೆ ಅನವಶ್ಯಕವಾಗಿ ದ್ವಿಗುಣ ಸುಂಕ ಪಾವತಿ, ಅನಗತ್ಯ ವೇಳೆ ವಿಳಂಬ, ಮಾತಿನ ಚಕಮಕಿ, ಇವೆಲ್ಲವೂ ಬೇಕಾಗಿರಲಿಲ್ಲವಷ್ಟೆ. ಇತ್ತೀಚೆಗೆ ಕೇಂದ್ರದ ಭೂ ಸಾರಿಗೆ ಮಂತ್ರಿಯವರು ಫಾಸ್ಟ್ ಟ್ಯಾಗ್ ಇರುವ ಮಂದಿಗೆ ಹೊಸ ನೀತಿ ಎಂದು ಹೇಳಿ ಪ್ರಕಟಣೆ ನೀಡಿದ್ದು, ಮೊದಲು ಈ ರೀತಿಯ ತಪ್ಪುಗಳನ್ನು ಸರಿಪಡಿಸಿಕೊಂಡು ನಂತರ ಏನಾದರೂ ಬೆನ್ನು ತಟ್ಟಿಕೊಳ್ಳುವುದು ಒಳಿತು. ಈ ರೀತಿಯ ಕೇಂದ್ರದ ತಪ್ಪುಗಳೇ ಜನರ ಮನಸ್ಸನ್ನು ವಿಚಲಿತಗೊಳಿಸಬಹುದು ಮತ್ತು ದುರಾಡಳಿತದ ಬಗ್ಗೆ ಅಸಹ್ಯ ತರಿಸುವಂತಹುದು ಕೂಡ. ಈ ನಿಟ್ಟಿನಲ್ಲಿ ಇನ್ನು ಮುಂದಾದರೂ ಎಸ್‌ಬಿಐ ಫಾಸ್ಟ್‌ಟ್ಯಾಗ್ ಮೂಲಕ ಪಯಣಿಸುವವರ ಸಂಚಾರ ಸುಗಮ ಮಾಡಿಕೊಡಲಿ ಎಂಬುದು ಕೋರಿಕೆ.

–ವಿಜಯ್ ಹೆಮ್ಮಿಗೆ, ಮೈಸೂರು

ಸಾಹಿತಿ ಬನ್ನೂರು ರಾಜು ಅವರ ಆರೋಗ್ಯ ಸುಧಾರಣೆಗೆ ಸರ್ಕಾರ ನೆರವಿಗೆ ಬರಲಿ

ಮಾನ್ಯರೆ,

ಸಾಹಿತಿ, ಅಂಕಣಕಾರ ಬನ್ನೂರು ರಾಜು ಅವರ ಅನಾರೋಗ್ಯದ ವಿಷಯ ತಿಳಿದು ಬೇಸರವಾಯಿತು. ತಮ್ಮ ಪತ್ರಿಕೆಯಲ್ಲಿ ವಾರಕ್ಕೊಮ್ಮೆ ಬೆಂಗಳೂರು ಕಟ್ಟಿದ ಕೆಂಪೇಗೌಡ, ವಿಶ್ವ ಜನಸಂಖ್ಯಾ ದಿನ, ನೊಬೆಲ್ ಸಿ.ವಿ. ರಾಮನ್, ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ, ಕನ್ನಡ ಕುಲ ಪುರೋಹಿತ ಆಲೂರು ವೆಂಕಟರಾಯರು, ಯುಗಾದಿ, ಶಿವರಾತ್ರಿ, ರಂಜಾನ್, ಕ್ರಿಸ್‌ಮಸ್, ಪ್ರಜಾಪ್ರತಿನಿಧಿ ಸಭೆ ಸ್ಥಾಪಿಸಿದ ಕೃಷ್ಣರಾಜ ಒಡೆಯರ್, ಸ್ವಾತಂತ್ರ್ಯದ ಹಬ್ಬ, ವಿಶ್ವ ಯೋಗ ದಿನ... ಹೀಗೆ ಸಂದರ್ಭಕ್ಕೆ ತಕ್ಕಂತೆ ಸಂಕ್ಷಿಪ್ತ ಮಾಹಿತಿಯುಳ್ಳ ಅವರ ಲೇಖನ ಪ್ರಕಟವಾಗುತ್ತಿದ್ದು ನನ್ನಂತಹ ಶಾಲಾ ಶಿಕ್ಷಕರಿಗೆ ತುಂಬಾ ಉಪಯುಕ್ತವಾಗಿತ್ತು.

ಶಾಲೆಯಲ್ಲಿ ಮಕ್ಕಳಿಗೆ ಇವರ ಪತ್ರಿಕಾ ಲೇಖನಗಳನ್ನು ಓದಿಸುವ, ಪ್ರಬಂಧ ಬರೆಸುವ, ಚರ್ಚಿಸುವ ಇತ್ಯಾದಿ ಚಟುವಟಿಕೆಗಳಿಗೆ ಅನ್ವಯಿಸಿಕೊಳ್ಳುತ್ತಿದ್ದೆವು. ಇವರ ಲೇಖನದಲ್ಲಿನ ಜ್ಞಾನದ ಸವಿಯನ್ನು ನಾವೆಲ್ಲ ಸವಿದಿದ್ದೇವೆ.

ಬೆಳಗೆದ್ದು ಪತ್ರಿಕೆಯನ್ನು ಓದಿ ಮುಖ್ಯಾಂಶಗಳನ್ನು ಮಕ್ಕಳಿಗೆ ಹೇಳಿ ಖುಷಿ ಪಡುತ್ತಿದ್ದೆ. ಜ್ಞಾನ ದಾಸೋಹ ನಡೆಯುತ್ತಿತ್ತು. ಕಳೆದ ಎರಡು ವರ್ಷಗಳ ಹಿಂದೆ ಪ್ರತಿ ಭಾನುವಾರ ಬೇರೊಂದು ಪತ್ರಿಕೆಯಲ್ಲಿ ಇವರ ಮಕ್ಕಳ ಕಥೆಗಳೂ ಮಕ್ಕಳನ್ನು ರಂಜಿಸುತ್ತಿದ್ದವು. ಅವರ ಕಥಾ ವಿಮರ್ಶೆಗಳೂ ಹಿತಕರವಾಗಿರುತ್ತಿದ್ದವು.

ವರ್ಷಕ್ಕೊಮ್ಮೆ 'ಮೈಸೂರು ಮಿತ್ರ' ನಡೆಸುತ್ತಿದ್ದ ಕಥಾ ಸ್ಪರ್ಧೆಗೆ ಇವರೇ ತೀರ್ಪುಗಾರರಾಗಿ ಕಥೆಗಳನ್ನು ಆಯ್ಕೆ ಮಾಡಿ, ಬರೆಯುತ್ತಿದ್ದ ವಿಮರ್ಶೆ ಹೊಸ ಕಥೆಗಾರರಿಗೆ ಮಾರ್ಗದರ್ಶಿಯಾಗಿದ್ದವು. ಕಥಾ ಸ್ಪರ್ಧೆಯಾಗಲೀ, ವಾರದ ಅಂಕಣಗಳಾಗಲಿ ಮತ್ಯಾವ ಪತ್ರಿಕೆಯಲ್ಲೂ ನಾ ಕಾಣೆ. ಅಂತಹ ಮಹತ್ವ ಲೇಖಕನ ಆರೋಗ್ಯ ಶೀಘ್ರ ಸುಧಾರಿಸಲಿ. ಲೇಖನಿ ಅವರ ಕೈ ಹಿಡಿಯಲಿ ಎಂದು ಆಶಿಸುತ್ತೇನೆ. ಸರ್ಕಾರವೂ ಅವರ ನೆರವಿಗೆ ಧಾವಿಸಬೇಕೆಂದು ವಿನಂತಿಸುತ್ತೇನೆ.

–ಜಿ. ಇಂದ್ರಾಣಿ, ಶಾಲಾ ಶಿಕ್ಷಕಿ, ಮೈಸೂರು.

ಹೂಟಗಳ್ಳಿ ಕೈಗಾರಿಕಾ ಪ್ರಮುಖ ರಸ್ತೆ ಗುಂಡಿ ಮುಚ್ಚಿಸಿ



ಮಾನ್ಯರೆ,

ಮೈಸೂರು ತಾಲೂಕು ಕೂರ್ಗಳ್ಳಿಯಿಂದ ಹೂಟಗಳ್ಳಿಗೆ ಮತ್ತು ಹೂಟಗಳ್ಳಿಯ ಕೆಆರ್‌ಎಸ್ ರಸ್ತೆಯಿಂದ ಹೆಬ್ಬಾಳ ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಗಳು ವಿವಿಧ ಹೆಸರಾಂತ ಕಂಪನಿಗಳನ್ನು ಹೊಂದಿದೆ. ಈ ಮುಖ್ಯ ರಸ್ತೆಗಳು ಸಂಪೂರ್ಣವಾಗಿ ಗುಂಡಿಗಳಿಂದ ಕೂಡಿದೆ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ವಾಹನಗಳಲ್ಲಿ ಸಂಚರಿಸುವ ವಿವಿಧ ಕಂಪನಿಯ ಉದ್ಯೋಗಿಗಳಿಗೆ ಅಪಘಾತವಾಗುತ್ತಿದೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಗುಂಡಿಗಳನ್ನು ಮುಚ್ಚಿಸಿ ರಸ್ತೆಯನ್ನು ಅಭಿವೃದ್ಧಿಪಡಿಸಬೇಕಾಗಿ ಮನವಿ.

–ಹೂಟಗಳ್ಳಿಯ ನಿವಾಸಿ.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ತಮಸ್ಸು ಅಳಿದರಿದೆ ಬೆಳಕು

ತಮಸ್ಸು ಎಂದರೆ ಕತ್ತಲೆ. ರಾತ್ರಿಯಾದಾಗ ಲೋಕವೆಲ್ಲ ಕತ್ತಲೆಯಲ್ಲಿ ಮುಳುಗಿರುತ್ತದೆ. ಆದರೆ ಆ ಕತ್ತಲೆಯೂ ಶಾಶ್ವತವಲ್ಲ. ಬೆಳಗಾಗುವುದು ಖಚಿತ. ನಮ್ಮ ಜೀವನದಲ್ಲೂ ಕತ್ತಲೆ ಆವರಿಸಿರುತ್ತದೆ. ಅದನ್ನು ತೊಲಗಿಸಿ ಬೆಳಕನ್ನು ಕಂಡುಕೊಳ್ಳಬೇಕು ಎನ್ನುವುದೇ 'ತಮಸೋ ಮಾ ಜ್ಯೋತಿರ್ಗಮಯ' ಎಂಬ ಉಪನಿಷದ್ವಾಕ್ಯದ ತಾತ್ಪರ್ಯ. ಭಗವದ್ಗೀತೆ ಮೂರು ತಮೋದ್ವಾರಗಳನ್ನು, ಎಂದರೆ ಕತ್ತಲೆಯ ಬಾಗಿಲುಗಳನ್ನು ಗುರುತಿಸಿದೆ. ಅವು ನರಕದ ಬಾಗಿಲುಗಳು.

ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ।
ಕಾಮಃ ಕ್ರೋಧಸ್ತಥಾ ಲೋಭಸ್ಮಸ್ಮಾದೇತತ್ ತ್ರಯಂ ತ್ಯಜೇತ್॥
(16.21)

ಆತ್ಮನಾಶಕ್ಕೆ ಕಾರಣವಾದ ಮೂರು ನರಕದ ಬಾಗಿಲುಗಳು ಯಾವುವೆಂದರೆ ಕಾಮ, ಕ್ರೋಧ, ಲೋಭ. ಶ್ರೇಯಸ್ಸನ್ನು ಅಪೇಕ್ಷಿಸುವ ವ್ಯಕ್ತಿಯು ಈ ಮೂರನ್ನೂ ಬಿಡಬೇಕು.

ಏತೈರ್ವಿಮುಕ್ತಃ ಕೌಂತೇಯ ತಮೋ ದ್ವಾರೈಸ್ತ್ರಿಭಿರ್ನರಃ।
ಆಚರತ್ಯಾತ್ಮನಃ ಶ್ರೇಯಃ ತತೋ ಯಾತಿ ಪರಾಂ ಗತಿಮ್॥
(6.22)

ಈ ಮೂರು ತಮೋ ದ್ವಾರಗಳಿಂದ ಬಿಡುಗಡೆಯನ್ನು ಪಡೆದ ಮನುಷ್ಯನು ತನ್ನ ಶ್ರೇಯಸ್ಸಿಗೆ ಕಾರಣವಾದ ಯಜ್ಞವನ್ನು ಆಚರಿಸಿ ಅನಂತರ ಮೋಕ್ಷವನ್ನು ಹೊಂದುವನೆಂಬುದು ಗೀತೆಯ ಸಂದೇಶ.

ಆದರೆ ಇವುಗಳಿಂದ ಮುಕ್ತನಾಗುವುದೆಂತು? ಇವೆಲ್ಲವೂ ಪ್ರಕೃತಿಯ ಅಂಶಗಳಾದ್ದರಿಂದ ಪ್ರಾಣಿಗಳಲ್ಲೆಲ್ಲ ಸಮಾನ, ಮನುಷ್ಯನಲ್ಲಿ ವಿಶೇಷ. ವೈರಾಗ್ಯದ ಪಾಠಗಳನ್ನೆಷ್ಟೋ ಕೇಳಿದವರೂ ಹೇಳಿದವರೂ ಈ ಮೂರು ದೌರ್ಬಲ್ಯಗಳಿಗೆ ಒಳಗಾಗುವುದನ್ನು ನೋಡಿದ್ದೇವೆ. ನಮ್ಮ ಪುರಾಣಗಳಿಗೆ, ಕಾವ್ಯಗಳಿಗೆ, ನಾಟಕಗಳಿಗೆ ವಸ್ತುವೇ ಕಾಮ–ಕ್ರೋಧ–ಲೋಭಗಳಲ್ಲವೆ? ಭಗವಂತನೆನಿಸಿದ ಶಿವನೂ ಕಾಮಬಾಣನಿಂದ ವಿಚಲಿತನಾಗಿ ಕ್ರೋಧದಿಂದ ಕಾಮದಹನವನ್ನು ಮಾಡಿದನೆಂಬ ಕಥೆ ಪುರಾಣ ಪ್ರಸಿದ್ಧ. ಕ್ರೋಧದಿಂದಲೇ ವಿಷ್ಣು ನರಸಿಂಹನಾಗಿ ಅವತರಿಸಿ ಹಿರಣ್ಯ ಕಶಿಪುವನ್ನು ಸೀಳಿ ಕೊಂದನೆಂಬುದು ಯಾರಿಗೆ ತಿಳಿಯದು? ಪ್ರತಿದಿನವೂ ಕಾಮಕ್ರೋಧಗಳ ಪರಿಣಾಮವಾಗಿ ಎಷ್ಟು ಕೊಲೆಗಳಾಗುತ್ತಿವೆ. ಎಷ್ಟು ಜನ ಕಾರಾಗೃಹಗಳಲ್ಲಿ ಕೊಳೆಯುತ್ತಿದ್ದಾರೆ, ಎಷ್ಟು ಜನ ಆತ್ಮಹತ್ಯೆಗೆ ಈಡಾಗುತ್ತಿದ್ದಾರೆ ಎಂಬುದು ಸರ್ವವಿದಿತ.

ಕ್ರೋಧದ ಪರಿಣಾಮಗಳೇನೆಂಬುದನ್ನು ಮುದ್ದುರಾಮನ ಬದುಕಿನಲ್ಲಿ ದಾರ್ಶನಿಕ ಕವಿ ಕೆ.ಸಿ. ಶಿವಪ್ಪನವರು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

ಈ ದೇಹಕಾನನದಿ ಸಿಟ್ಟು ಕಿಡಿ ಪಸರಿದರೆ
ಬೂದಿ ಮಾಡದೆ ಬಿಡದು ಶಾಂತ ತರುಲತೆಯ
ತಾಪ ಮಿತಿ ಮೀರಿದರೆ ಹೂವೆಲ್ಲಿ ಚೆಲುವೆಲ್ಲಿ
ಸಿಟ್ಟಿಗಾಳಾಗದಿರು ಮುದ್ದುರಾಮ.

ಈ ದೇಹವೆಂಬುದೇ ಒಂದು ಕಾನನ–ಎಂದರೆ ಕಾಡು. ಸಿಟ್ಟು ಎಂಬುದು ಬೆಂಕಿಯ ಕಿಡಿ. ಕಿಡಿ ಮೊದಲು ಅತ್ಯಂತ ಚಿಕ್ಕದಾಗಿದ್ದರೂ ಬೆಳೆಯಲು ಬಿಟ್ಟರೆ ದೊಡ್ಡ ಜ್ವಾಲೆಯಾಗುತ್ತದೆ. ಆ ಜ್ವಾಲೆ ಅದುವರೆಗೂ ಶಾಂತವಾಗಿದ್ದ ತರುಗಳನ್ನು ಲತೆಗಳನ್ನು ಬೂದಿ ಮಾಡದೆ ಬಿಡದು. ದೇಹವೆಂಬ ಕಾಡಿನಲ್ಲಿದ್ದ ಸಮಾಧಾನ–ಶಾಂತಿಗಳೆಂಬ



ಮರಗಳನ್ನೂ ಬಳ್ಳಿಗಳನ್ನೂ ಸಿಟ್ಟೆಂಬ ಬೆಂಕಿಯ ಉರಿ ನಾಲಗೆಗಳು ಸುಟ್ಟು ಬೂದಿ ಮಾಡುತ್ತವೆ. ತಾಪವು ಮಿತಿ ಮೀರಿದಾಗ ಅಲ್ಲಿದ್ದ ಹೂವು, ಮೊಗ್ಗು, ಹಣ್ಣು ಎಲೆ–ಇವುಗಳಿಂದ ಉಂಟಾಗಿದ್ದ ಚೆಲುವೂ ನಾಶ ಹೊಂದುತ್ತದೆ ಎಂದರೆ ಬದುಕಿಗೆ ಚೆಲುವನ್ನು ತಂದಿತ್ತಿರುವ ಕಾವ್ಯ, ಕಲೆ, ಸಂಗೀತ, ನೃತ್ಯ ಮುಂತಾದವೆಲ್ಲವೂ ಇಲ್ಲವಾಗುತ್ತವೆ. ಆದುದರಿಂದ ಈ ವಿನಾಶವನ್ನು ತಪ್ಪಿಸಲು ಸಿಟ್ಟಿಗೆ ಅವಕಾಶವನ್ನು ಕೊಡಬಾರದು. ಅದನ್ನೇ ಕಾವ್ಯಮಯವಾಗಿ ಹೇಳಿದ್ದಾರೆ – ಸಿಟ್ಟಿಗೆ ಆಳಾಗದಿರು–ಎಂದು. ಎಲ್ಲ ಭಾವನೆಗಳೂ ನಮಗೆ ಆಳುಗಳಾಗಿರಬೇಕು. ನಾವು ಹೇಳಿದಂತೆ ಅವು ಕೇಳಬೇಕು. ಅವುಗಳ ಆಳು ನಾವಾಗಬಾರದು.

ಅನೇಕರು ಕ್ರೋಧವನ್ನು ಮನಸ್ಸಿನಲ್ಲೇ ಅದುಮಿಕೊಂಡು ಮುಂದೆ ಯಾವಾಗಲೋ ಸೇಡು ತೀರಿಸಿಕೊಳ್ಳುತ್ತೇವೆ ಎಂಬ ಕೆಟ್ಟ ತೀರ್ಮಾನವನ್ನು ಮಾಡುತ್ತಾರೆ. ಇದಕ್ಕಾಗಿ ನಾನಾ ತಂತ್ರಗಳನ್ನು ಹೂಡುತ್ತಾರೆ. ಇಂತಹ ಸೇಡು ವ್ಯಕ್ತಿಗಳಿಗೆ ಸೀಮಿತವಾಗುವುದಿಲ್ಲ. ಅನೇಕ ಪೀಳಿಗೆಗಳವರೆಗೆ ಮುಂದುವರಿದಿರುವುದೂ ಉಂಟು. ಇದು ಮಾಡುವ ಹಾನಿ ಲೆಕ್ಕಕ್ಕೇ ಸಿಕ್ಕದಷ್ಟು, ಇದರ ಬಗೆಗೆ ಕವಿ ಹೇಳುವ ಮಾತು –

ಒಮ್ಮೆ ಸೇಡಿನ ಸರ್ಪ ಮೆಲ್ಲ ಹೊಕ್ಕರೆ ಮನವ
ವಿಷತಾಣವಾಗುವುದು ಸಂತಸದ ಬೀಡು.
ಮಾತ್ಸರ್ಯ ವಿಷಮನಡೆ ತಲ್ಲಣಕೆ ಹೆದ್ದಾರಿ
ಕಾಠಿಣ್ಯ ಮಾರಕವೊ ಮುದ್ದುರಾಮ॥

ಸೇಡು, ಸೇಡನ್ನು ತೀರಿಸಬೇಕೆಂಬ ಭಾವನೆ ಮೆಲ್ಲ ಮೆಲ್ಲಗೆ ಮನಸ್ಸಿನ ಒಳಗೆ ಪ್ರವೇಶಿಸಿದರೆ ಸಾಕು. ಅದುವರೆಗೂ ಸಂತಸದ ಬೀಡಾಗಿದ್ದ ಮನಸ್ಸು ವಿಷದ ಸ್ಥಾನವಾಗುತ್ತದೆ. ಸೇಡನ್ನು ತೀರಿಸಲು ಕಾರಣವಾದ ಮಾತ್ಸರ್ಯ ವಿಷಮನಡೆಗೆ ಎಡೆ ಮಾಡಿಕೊಡುತ್ತದೆ. ಅದು ಮನಸ್ಸಿನ ತಲ್ಲಣಕ್ಕೆ ಹೆದ್ದಾರಿ, ಎಂದರೆ ರಾಜ ಮಾರ್ಗ. ಅದರಿಂದ ಮನಸ್ಸಿನಲ್ಲಿ ಕಾಠಿಣ್ಯ, ಕಠೋರತೆ ಹುಟ್ಟುತ್ತದೆ. ಯಾವ ದಯೆಯೂ ಇಲ್ಲದೆ ಹಗೆಯ ಮಕ್ಕಳೋ ಮೊಮ್ಮಕ್ಕಳೋ ನೆಂಟರೋ ಇಷ್ಟರೋ ಅವರೆಲ್ಲರ ಮೇಲೆ ಸೇಡನ್ನು ತೀರಿಸಿಕೊಳ್ಳುವ ತವಕ ಉಂಟಾಗುತ್ತದೆ. ಎಲ್ಲಕ್ಕೂ ಮೂಲ ಕಾರಣ ಕ್ರೋಧ. ಈ ಕಾಠಿಣ್ಯ ತನಗೂ ಇತರರಿಗೂ ಮಾರಕ.

ಇನ್ನು ಲೋಭದ ವಿಚಾರ. ಎಷ್ಟಿದೆಯೋ ಅಷ್ಟೆ ಸಾಕು ಎನ್ನುವುದು ತೃಪ್ತಿ. ಎಷ್ಟಿದ್ದರೂ ಸಾಲದು, ಇನ್ನಷ್ಟು ಮತ್ತಷ್ಟು ಬೇಕು, ನನ್ನದಾಗಿರುವುದನ್ನು ನಾನೇ ಇಟ್ಟುಕೊಳ್ಳಬೇಕು. ಬೇರೆಯವರಿಗೆ ಕೊಡಬಾರದು ಎನ್ನುವುದು ಲೋಭ. ಇದೇ ಜಿಪುಣತನ. ಇಂಗ್ಲೀಷಿನಲ್ಲಿ ಇದನ್ನು greed ಎನ್ನುತ್ತಾರೆ. ಇದರ ಬಗೆಗೆ ಮುದ್ದುರಾಮನ ಉಪದೇಶ.

ಇಷ್ಟು ಸಾಲದು ಎಂದು ಅಷ್ಟರತ್ತೋಡದಿರು
ಎಷ್ಟಾದರಷ್ಟೆ ಸರಿ ಎನುತ ನಗುತಲಿರು
ನಷ್ಟವಾದರೆ ಆಗ ಕಷ್ಟವೆಂದೊರಲದಿರು
ತುಷ್ಟಿಯಿದ್ದರೆ ಪುಷ್ಟಿ ಮುದ್ದುರಾಮ

ಭಗವಂತನು ಅಥವಾ ಪ್ರಕೃತಿಯು ನಮಗೆ ಏನೇನೆನ್ನೋ ದಯಪಾಲಿಸಿದೆ. ಕಣ್ಣು, ಕಿವಿ, ಮೂಗು, ನಾಲಿಗೆ, ಕೈಗಳು, ಕಾಲುಗಳು ಅನೇಕರಿಗೆ ಇಷ್ಟೆಲ್ಲ ಕೊಟ್ಟಿದ್ದಾನೆ ಎಂಬ ಕೃತಜ್ಞತೆ ಇಲ್ಲ. ದೇವರು ನನ್ನನ್ನು ಕೋಟ್ಯಧೀಶನನ್ನಾಗಿ ಮಾಡಬೇಕಾಗಿತ್ತು. ನನ್ನನ್ನು ಅತ್ಯಂತ ಸುಂದರಿಯನ್ನು ಮಾಡಬೇಕಾಗಿತ್ತು. ಹಾಗೆ ಮಾಡದೆ ಅವನು ನನಗೆ ಮೋಸ ಮಾಡಿಬಿಟ್ಟ ಎಂದು ಅನೇಕರು ಗೊಣಗುತ್ತಾರೆ. ಅವರಿಗೆ ಕವಿ ಹೇಳಿದ ಮಾತು–ಅಷ್ಟರತ್ತೋಡದಿರು. ಅಷ್ಟು ಎಂಬುದಕ್ಕೆ ಮಿತಿ ಇಲ್ಲ. ಆದ್ದರಿಂದ ಇದ್ದುದರಲ್ಲಿ ತೃಪ್ತಿಯಿರಬೇಕು. ಇದನ್ನೇ ಯೋಗ ಸೂತ್ರಗಳಲ್ಲಿ ಸಂತೋಷ ಎಂದು ಕರೆದಿದ್ದಾರೆ. ಎಷ್ಟಾದರಷ್ಟೆ ಸರಿ ಎಂದು ಮುಖದಲ್ಲಿ ನಗೆ ಇರಬೇಕು. ಎಷ್ಟೋ ಬಾರಿ ಇರುವುದೂ ನಷ್ಟವಾಗುತ್ತದೆ. ಆಗ ನನಗೆ ಕಷ್ಟ ಬಂತು ಎಂದು ಕೂಗಾಡಬೇಡ ಎನ್ನುತ್ತಾರೆ ಕವಿಗಳು. ತುಷ್ಟಿಯಿದ್ದರೆ ಪುಷ್ಟಿ, ತೃಪ್ತಿ ಅತ್ಯಂತ ಮುಖ್ಯ ಗುಣ ಎಂಬುದನ್ನಿಲ್ಲಿ ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಚಿಂತೆಯಿಲ್ಲದವರ ನಾ ಕಾಣೆ ಎನ್ನುತ್ತಾರೆ ದಾಸರು. ಎಲ್ಲರಿಗೂ ಹೀಗೆ ಏತಕ್ಕೆ ಚಿಂತೆಯಿದೆ?

ಚಿಂತೆ ಕಾಡುವುದೇಕೆ? ಮೂರು ಕಾರಣದಿಂದ
ಬರುವುದಕೆ ಮೊದಲೆ ಅದ ತಾ ಪಡೆವ ಬಯಕೆ
ಸಕಲ ಒಡೆತನದಾಸೆ ಅಧಿಕ ಓಲೈಸುವುದು
ಮರೆ ತನ್ನದಲ್ಲದುದ ಮುದ್ದುರಾಮ.

ಚಿಂತೆಯ ಮೂರು ಕಾರಣಗಳು– ಬರುವುದಕ್ಕೆ ಮೊದಲೇ ಅದನ್ನು ತಾನು ಪಡೆಯುವ ಬಯಕೆ–ಮೊದಲನೆಯ ಕಾರಣ. ನನಗೆ ಆ ಬಹುಮಾನ ಬರಬೇಕಾಗಿತ್ತು ಈ ಪ್ರಶಸ್ತಿ ಬರಬೇಕಾಗಿತ್ತು. ಈ ವರ್ಷವೂ ಯಾರು ಯಾರಿಗೂ ಕೊಟ್ಟುಬಿಟ್ಟಿದ್ದಾರೆ. ನನಗೆ ತಪ್ಪಿ ಹೋಯಿತು ಎಂದು ಕೊರಗುವವರು, ಸೊರಗುವವರು ಇದ್ದಾರೆ. ಅವರು ಅರ್ಥ ಮಾಡಿಕೊಳ್ಳಬೇಕು–

ಪ್ರಾಪ್ತವ್ಯಮರ್ಥಂ ಲಭತೇ ಮನುಷ್ಯಃ
ದೇವೋಽಪಿ ತಂ ಲಂಘಯಿತುಂ ನ ಶಕ್ತಃ

"ಯಾವನಿಗೆ ಯಾವುದು ಬರಬೇಕಾಗಿದೆಯೋ ಅದನ್ನು ಅವನು ಪಡೆಯುತ್ತಾನೆ. ಭಗವಂತನೂ ಅದನ್ನು ತಪ್ಪಿಸಲು ಶಕ್ತನಲ್ಲ. ಇನ್ನು ಯಾವುದೋ ನನಗೆ ಬರಲಿಲ್ಲ ಎಂದು ಅಳುವುದು ತಪ್ಪು. ಅಂತಹ ಆಸೆ ಚಿಂತೆಗೆ ಕಾರಣ ಅಷ್ಟೆ. ಎಲ್ಲವೂ ನನ್ನದಾಗಬೇಕಾಗಿತ್ತು ಎಂಬ ಆಸೆ ಚಿಂತೆಯ ಎರಡನೆಯ ಕಾರಣ. ಆಗುವುದು ಅಸಂಭವ ಎಂದು ಅರಿತುಕೊಂಡ ಮೇಲೂ ಆಸೆ ಪಡುವುದು ತಪ್ಪು. ತನಗೆ ಈ ಪದವಿ ಸಿಕ್ಕಬೇಕಾಗಿತ್ತು ಆ ಅಧಿಕಾರ ದೊರಕಬೇಕಾಗಿತ್ತು ಎಂದು ಯಾರನ್ನೋ ಓಲೈಸುವುದು, ಅವರು ಒಲಿಯಲಿಲ್ಲವೆಂದು ಬೇಸರಪಟ್ಟುಕೊಳ್ಳುವುದು ಮೂರನೆಯ ಕಾರಣ. ಇವೆಲ್ಲವನ್ನೂ ಮರೆಯಬೇಕು. ನನ್ನದ್ದು ಬೇರೆ ಯಾರಿಗೋ ಹೋಗುವುದಿಲ್ಲ. ಬೇರೆಯವರದು ನನಗೆ ಬರಬೇಕಾಗಿಲ್ಲ ಎಂಬ ಚಿಂತನೆಯೇ ಮನುಷ್ಯನದಾಗಬೇಕು. ಆಗ ಚಿಂತೆಗೆ ಕಾರಣ ಇರುವುದಿಲ್ಲ. ಇದನ್ನು ಈ ಚೌಪದಿಯಲ್ಲಿ ಸ್ಪಷ್ಟೊಳಿಸಲಾಗಿದೆ.

ಸಕಾಲಿಕ



ಆರ್.ಪಿ. ಜಗದೀಶ್
ಹಿರಿಯ ಪತ್ರಕರ್ತರು,
ಮೊ: 98450 48051

ಯಾರೇ ಕೂಗಾಡಲಿ...! ನನ್ನ ನೆಮ್ಮದಿಗೆ ಭಂಗವಿಲ್ಲ...!!

ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಆಡಳಿತ ಪಕ್ಷದ ಶಾಸಕರೇ ಅಪಸ್ವರ ಎತ್ತುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಆಡಳಿತಕ್ಕೆ ಕನ್ನಡಿ ಹಿಡಿದಿದ್ದಾರೆ. ಪಕ್ಷದೊಳಗೆ ಎದ್ದಿರುವ ಈ ಹೊಗೆ ಜ್ವಾಲೆಯಾಗುವ ಎಲ್ಲಾ ಸೂಚನೆಗಳಿದ್ದು, ಇದೊಂದು ಕಳಂಕಿತ ಸರ್ಕಾರ ಹೆಗ್ಗಳಿಕೆಗೆ ಪಾತ್ರವಾಗಿದೆ.

ಪಕ್ಷ ಹಾಗೂ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಇರುವ, ಮಿಗಿಲಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಆಪ್ತರೂ ಆಗಿ ಆರ್ಥಿಕ ಸಲಹೆಗಾರರೂ ಆದ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ಈ ಹಿಂದೆ **'ರಾಜ್ಯ ಭ್ರಷ್ಟಾಚಾರದಲ್ಲಿ ನಂಬರ್ 1'** ಎಂದು ಬಹಿರಂಗವಾಗಿ ಹೇಳಿದ್ದರು. ನಂತರ ಶಾಸಕ ಬಿ.ಆರ್.ಪಾಟೀಲ್ ಒಂದಲ್ಲ ಹಲವು ಬಾರಿ **ಈ ಸರ್ಕಾರದ ಲಂಚಾವತಾರದ** ವಿರುದ್ಧ ತಿರುಗಿ ಬಿದ್ದಿದ್ದಾರೆ. ಆದರೂ ಎಮ್ಮೆ ಚರ್ಮದ ಸರ್ಕಾರಕ್ಕೆ ಇದು ಅಂಟುವುದೇ ಇಲ್ಲ.

ಸರತಿಯ ಸಾಲಿನಂತೆ ಒಬ್ಬರಾದ ಮೇಲೆ ಒಬ್ಬ ಶಾಸಕರು ಅಂದರೆ, ಈಗ ಹಿರಿಯ ಶಾಸಕ ರಾಜುಕಾಗೆ, ಅಲ್ಲಮ ಪ್ರಭು ಪಾಟೀಲ್, ಬೇಳೂರು ಗೋಪಾಲಕೃಷ್ಣ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ್ದಾರೆ.

ಶಾಸಕರ ಧ್ವನಿಗೆ ಧ್ವನಿ ಸೇರಿಸುವಂತೆ ಸಜ್ಜನ ಸಚಿವರಾದ ಕೃಷ್ಣ ಭೈರೇಗೌಡರು ತಹಸೀಲ್ದಾರರ ಕಚೇರಿಗೆ ಭೇಟಿ ನೀಡಿ ಅಲ್ಲಿಯ ಭ್ರಷ್ಟಾಚಾರದ ಅವಾಂತರ ನೋಡಿ, ತೀವ್ರ ದುಗುಡಕ್ಕೊಳಗಾಗಿ **'ಜನರ ಕೆಲಸ ಮಾಡಿಕೊಡಲು ನಿಮಗೆ ಪಾದಪೂಜೆ ಮಾಡಬೇಕಾ? ನೀವು ಕಚೇರಿಯಲ್ಲಿ ಒಂದು ಲಂಚದ ರೇಟ್ ಬೋರ್ಡ್ ಹಾಕಿ! ಆಗ ಜನ ಆ ಪ್ರಕಾರ ಹಣ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ'** ಎಂದು ಮಾರ್ಮಿಕವಾಗಿ ಅಲ್ಲ... ಅಲ್ಲ...ಛಾಟಿ ಏಟು ಹೊಡೆದಂತೆ ಛೀಮಾರಿ ಹಾಕಿದ್ದಾರೆ. ಇದಕ್ಕಿಂತ ಇನ್ನೇನು ಬೇಕು? ಸಚಿವರಿಗೆ ಧೈರ್ಯವಿದ್ದರೆ ಅವರ ವಿರುದ್ಧ ಸ್ಥಳದಲ್ಲಿಯೇ ಕಠಿಣ ಕ್ರಮ ಕೈಗೊಳ್ಳ ಬೇಕಾಗಿತ್ತು? ಏಕೆ ಸುಮ್ಮನಾಗಿ ತಮ್ಮ ಅಸಹಾಯಕತೆ ಪ್ರದರ್ಶಿಸಿದರು!

ಏಕೆಂದರೆ ಅಲ್ಲಿರುವ ಅಧಿಕಾರಿಗಳು ಜಾತಿ ಹಾಗೂ ಹಣದ ಪ್ರಭಾವದಿಂದ ಅಲ್ಲಿ ಬೇರೂರಿದ್ದಾರೆ. ಅವರನ್ನು ಮುಟ್ಟುವ ಇಲ್ಲವೇ ಅಲ್ಲಾಡಿಸುವ ಎದೆಗಾರಿಕೆ ಸಚಿವರಿಗೆ ಎಲ್ಲಿಂದ ಬರಬೇಕು ಹೇಳಿ. ಇದಕ್ಕೆ ನಿದರ್ಶನ ಎನ್ನುವಂತೆ ಮರುದಿನ ಸಾರ್ವಜನಿಕರು ಅದೇ ಕಚೇರಿಗೆ ಭೇಟಿ ಕೊಟ್ಟು, ಕಾದು ನಿಂತಾಗ ಖಾಲಿ ಕುರ್ಚಿಗಳು ಕಂಡುಬಂದವು. ಅಂದರೆ ಸಚಿವರಿಗೇ ಅಧಿಕಾರಿಗಳು ಸವಾಲು ಹಾಕಿದ್ದರು! ಎಂಥ ವಿಪರ್ಯಾಸ ಅಲ್ವಾ.

ಮೊನ್ನೆಯಷ್ಟೇ ಶಾಸಕ ರಾಜು ಕಾಗೆ ಸರ್ಕಾರದ ಆಡಳಿತದ ವೈಫಲ್ಯಕ್ಕೆ ಬೇಸತ್ತು ಮಾಧ್ಯಮದ ಮುಂದೆ ಬಂದು ಮುಖ್ಯಮಂತ್ರಿಗಳು 50 ಕೋಟಿ ಅನುದಾನ ಕೊಟ್ಟಿದ್ದಾರೆ. ಕಾಮಗಾರಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಕಾರ್ಯಾದೇಶ ಹೊರಡಿಸಿಲ್ಲ. ಈ ಬಗ್ಗೆ ಏನೇ ಹೇಳಿದರೂ ನಮ್ಮ ಮಾತು ಕೇಳುತ್ತಿಲ್ಲ. ಅನುದಾನ ತಂದು ಈಡುಗಾಯಿ ಒಡೆದಿದ್ದೇ ಆಯ್ತು ಅಷ್ಟೇ ಎಂದು ಅಳಲು ತೋಡಿಕೊಂಡರು.

ಶಾಸಕರ ರಾಜೀನಾಮೆ ಗೊಡ್ಡು ಬೆದರಿಕೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗುವ ಜಾಯಮಾನದವರಲ್ಲ. ಅವರೊಂದು ರೀತಿ **Don't Care Master**. ಏಕೆಂದರೆ ಸರ್ಕಾರದಲ್ಲಿ ಬಹುಮತವಿದೆ. **ಕೆಲವರು ಪಕ್ಷ ತೊರೆದರೆ ಆಕಾಶವೇನೂ ಕಳಚಿ ಬೀಳುವುದಿಲ್ಲ. ಅಲ್ಲದೆ ಸರ್ಕಾರವೂ ಬೀಳದು ಎಂಬ ಭಂಡ ಧೈರ್ಯ. ಜತೆಗೆ**



ಪಕ್ಷದೊಳಗಿನ ಬಂಡಾಯಕ್ಕೆ ಮದ್ದು ಅರೆಯುವಷ್ಟು ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹೇಗೆಂದರೆ, ಸಿದ್ದರಾಮಯ್ಯ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜಕೀಯ ಗರಡಿಯಲ್ಲಿ ಪಳಗಿದವರು. ಅವರು ಹಾಕುವ ಪಟ್ಟು–ಪ್ರತಿಪಟ್ಟು–ತಂತ್ರ ಎಲ್ಲವನ್ನೂ ಮನನ ಮಾಡಿಕೊಂಡಿದ್ದಾರೆ. ಜತೆಗೆ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ ಜಾಣ್ಮೆ, ಪಟೇಲರ ನಿರ್ಲಿಪ್ತತೆ, ದಿವಂಗತ ದೇವರಾಜ ಅರಸು ಅವರ ಒಡೆದು ಆಳುವ ನೀತಿ, ಮೇಲು ಜಾತಿಯವರನ್ನು ಎದುರು ಹಾಕಿಕೊಳ್ಳದೆ ಅವರ ಮೂಗಿಗೆ ತುಪ್ಪ ಸವರುವುದನ್ನು ಕಲಿತಿದ್ದಾರೆ.

ಹೈಕಮಾಂಡ್‌ಗೆ ಕಮಾಂಡ್ ಎಲ್ಲಿದೆ, Only Demand.

ಹೀಗಾಗಿ ಸರ್ಕಾರ ಅಥವಾ ತಮ್ಮ ನಾಯಕತ್ವದ ವಿರುದ್ಧ 'ಯಾರೇ ಕೂಗಾಡಲಿ, ಊರೇ ಹೋರಾಡಲಿ ನಮ್ಮ ನಿದ್ದೆಗೆ ಭಂಗವಿಲ್ಲ ಹಾಗೂ ಹೈಕಮಾಂಡ್‌ನ ಭಯವಿಲ್ಲ' ಎಂಬ ಧೈರ್ಯ ಪ್ರದರ್ಶಿಸುತ್ತಿದ್ದಾರೆ. ಅಲ್ಲದೆ ಜಾತಿಗಣತಿ, ವಿಧಾನಪರಿಷತ್ತಿಗೆ ನಾಮಕರಣ..... ಜಾತಿ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ. ಅಲ್ಲದೆ ಈ ವಿವಾದ–ಜಟಿಲ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳುತ್ತಲೇ ಇಲ್ಲ. ಬಂದದ್ದು ಬರಲಿ ಹೈಕಮಾಂಡ್ ಕೃಪೆ ಒಂದಿರಲಿ ಎಂಬ ನಿರ್ಧಾರಕ್ಕೆ ಬಂದಿದ್ದಾರೆ.


ಮತ್ತೊಂದೆಡೆ, ವಸತಿ ಸಚಿವ ಜಮೀರ್ ಅಹಮದ್ ತಾಳಕ್ಕೆ ತಕ್ಕಂತೆ ಮುಖ್ಯಮಂತ್ರಿ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಾ, ಅಲ್ಪ ಸಂಖ್ಯಾತರ ಕಣ್ಮಣಿ ಆಗಲು ಹೊರಟಿದ್ದಾರೆ. ಇದು ಬಹುಸಂಖ್ಯಾತರ ಕಣ್ಣು ಕುಕ್ಕುವಂತೆ ಮಾಡುತ್ತಿದೆ.

ಈಗ ಸಿಎಂ ಸಿದ್ದರಾಮಯ್ಯ ಒಂದು ರೀತಿ ರಾಜಕೀಯ ವೈರಾಗ್ಯದತ್ತ ಒಲವು ತೋರಿದಂತಿದೆ. ಏಕೆಂದರೆ ರಾಜಕೀಯದಲ್ಲಿ ಎಲ್ಲಾ ಅಧಿಕಾರ, ಸುಖ–ಸಂತೋಷ ಅನುಭವಿಸಿಯಾಗಿದೆ. ಮುಂದಿನ ಆರು ತಿಂಗಳು ಏನಿದ್ದರೂ **'ಬೋನಸ್'**. ಮುಂದೆ ಅನಿವಾರ್ಯವಾದರೆ ಅಧಿಕಾರ ತ್ಯಾಗ. ಮನುಷ್ಯನಿಗೆ ಇನ್ನೇನು ಬೇಕು. ಅವರಿಗೆ ತೃಪ್ತಿ ಇದ್ದಂತಿದೆ.


ಜತೆಗೆ ತಮ್ಮ ನಂತರ ಮುಂದೆ ಇರಲಿ ಅಂತಾ ಪುತ್ರ ಡಾ.ಯತೀಂದ್ರ



ಹೆಚ್.ಡಿ.ದೇವೇಗೌಡ



ಜೆ.ಹೆಚ್.ಪಟೇಲ್



ದೇವರಾಜ ಅರಸು

ಅವರನ್ನು ರಾಜಕೀಯವಾಗಿ ಪಳಗಿಸಿದ್ದಾರೆ. ಅಂತರಂಗವನ್ನು ಪರಿಚಯಿಸಿ! ನಿಭಾಯಿಸಬಲ್ಲ ದಾರಿ ತೋರಿಸಿದ್ದಾರೆ. ಹಾಗೆಯೇ ಪಕ್ಷದಲ್ಲಿ ಪ್ರಾಬಲ್ಯಕ್ಕೆ ಅಂತಲೇ ಎಐಸಿಸಿ ಅಧ್ಯಕ್ಷ–ಕಳಂಕರಹಿತ ಮಲ್ಲಿಕಾರ್ಜುನ ಖರ್ಗೆ ಅವರಿಗೂ ಬಳುವಳಿ ನೀಡಿದ್ದಾರೆ. ಅಂದರೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರಿಗೆ ಒಳ್ಳೆಯ ಖಾತೆ ನೀಡಿದ್ದಾರೆ. ಜತೆಗೆ ಸರ್ಕಾರದ 'ವಕ್ತಾರ' ಸ್ಥಾನ ನೀಡಿ ಗೌರವಿಸಿದ್ದಾರೆ. ಇದು ಖರ್ಗೆಗೆ ಖುಷಿ ವಿಚಾರ ಅಲ್ಲವೆ?

ಪಕ್ಷದೊಳಗಿನ ಬಂಡಾಯಕ್ಕೆ ಮದ್ದು ಅರೆಯುವಷ್ಟು ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಹೇಗೆಂದರೆ, ಸಿದ್ದರಾಮಯ್ಯ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ರಾಜಕೀಯ ಗರಡಿಯಲ್ಲಿ ಪಳಗಿದವರು. ಅವರು ಹಾಕುವ ಪಟ್ಟು–ಪ್ರತಿಪಟ್ಟು–ತಂತ್ರ ಎಲ್ಲವನ್ನೂ ಮನನ ಮಾಡಿಕೊಂಡಿದ್ದಾರೆ. ಜತೆಗೆ ಮಾಜಿ ಮುಖ್ಯಮಂತ್ರಿ ದಿವಂಗತ ರಾಮಕೃಷ್ಣ ಹೆಗಡೆ ಅವರ ಜಾಣ್ಮೆ, ಪಟೇಲರ ನಿರ್ಲಿಪ್ತತೆ, ದಿವಂಗತ ದೇವರಾಜ ಅರಸು ಅವರ ಒಡೆದು ಆಳುವ ನೀತಿ, ಮೇಲು ಜಾತಿಯವರನ್ನು ಎದುರು ಹಾಕಿಕೊಳ್ಳದೆ ಅವರ ಮೂಗಿಗೆ ತುಪ್ಪ ಸವರುವುದನ್ನು ಕಲಿತಿದ್ದಾರೆ.

ಇನ್ನು ಆಡಳಿತದಲ್ಲಿನ ಭ್ರಷ್ಟಾಚಾರ ಆರೋಪಗಳು, ಮುಡಾ ಸೈಟು ಹಗರಣ, ಶಾಸಕರ ಕೋಪ–ತಾಪ ಇವೆಲ್ಲ ಕ್ಷಣಿಕ. ಜನರು ಬೇಗ ಮರೆತು ಬಿಡುತ್ತಾರೆಂಬ ಬಗ್ಗೆ ಅಪಾರ ವಿಶ್ವಾಸ. ಹಾಗಾಗಿ ಸರ್ಕಾರದ ಆಡಳಿತದ ಬಗೆಗಿನ ಕಪ್ಪುಚುಕ್ಕೆಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಜಾಯಮಾನದವರಲ್ಲ. ರಾಜಕೀಯ ಮೌಲ್ಯಗಳಿಗೆ ತಿಲಾಂಜಲಿಯೇ? ಎಂದರೆ ಯಾವ ಮೌಲ್ಯಗಳ ಬಗ್ಗೆ ಹೇಳುತ್ತೀರಿ ಎಂದು ಅವರದು ಮರು ಪ್ರಶ್ನೆ?

ಇನ್ನು ಸರ್ಕಾರದ 2ನೇ ಸ್ತಂಭವಾದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಈಗ ಮೌನಕ್ಕೆ ಶರಣಾಗಿದ್ದಾರೆ. ಅಲ್ಲದೆ ತಾಳ್ಮೆಯಿಂದ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿ, ಸಿದ್ದರಾಮಯ್ಯ ಹಾಗೂ ಹೈಕಮಾಂಡ್ ಕೃಪಾಶೀರ್ವಾದಕ್ಕಾಗಿ ಎದುರು ನೋಡುತ್ತಿದ್ದಾರೆ. ಹಾಗಾಗಿ ಯಾವ ವಿವಾದಗಳ ಬಗ್ಗೆಯೂ ತಲೆಕೆಡಿಸಿಕೊಳ್ಳುತ್ತಿಲ್ಲ.

ಅಧಿಕೃತ ವಿರೋಧ ಪಕ್ಷವಾದ ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಹೋರಾಟ, ಪ್ರತಿಭಟನೆ, ಧರಣಿಗೆ ಸೀಮಿತವಾಗಿದೆ. ಅಲ್ಲದೆ, ವಿಪಕ್ಷ ನಾಯಕರಾದ ಆರ್.ಅಶೋಕ್ ಹಾಗೂ ಪಕ್ಷದ ಅಧ್ಯಕ್ಷರಾದ ವಿಜಯೇಂದ್ರ ಸಿದ್ದರಾಮಯ್ಯ ಪಾಲಿಗೆ ಸಾಟಿಯೇ ಇಲ್ಲ. ಅವರು ಈ ಇಬ್ಬರನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಇನ್ನು ಬಿಜೆಪಿಗೆ ದಕ್ಷಿಣ ಭಾರತದ ಹೆಬ್ಬಾಗಿಲ ತೆರೆದು, ಕರ್ನಾಟಕದಲ್ಲಿ ಸರ್ಕಾರ ಪ್ರತಿಷ್ಠಾಪಿಸಿದ ಕೀರ್ತಿಗೆ ಪಾತ್ರರಾಗಿದ್ದ ಬಿ.ಎಸ್. ಯಡಿಯೂರಪ್ಪನವರಿಗೆ ಹಿಂದಿದ್ದ ವರ್ಚಸ್ಸಿಲ್ಲ. ಆಗೊಮ್ಮೆ–ಈಗೊಮ್ಮೆ ಕಾಣಿಸಿಕೊಳ್ಳುತ್ತಾರೆ. ಹೀಗಾಗಿ ರಾಜ್ಯದಲ್ಲಿ ಸಿದ್ದರಾಮಯ್ಯನವರದ್ದೇ ದರ್ಬಾರ್, ಇದು ಇನ್ನೆಷ್ಟು ತಿಂಗಳು ಕಾದು ನೋಡಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಹಾಸನದಲ್ಲಿ ಅಬ್ಬರದ ಮಳೆ: ಕೊಚ್ಚಿ ಹೋದ ತಡೆಗೋಡೆ

ಸಕಲೇಶಪುರ ತಾಲೂಕಲ್ಲಿ ಶಾಲೆಗಳಿಗೆ ರಜೆ



ಹಾಸನ/ಚಿಕ್ಕಮಗಳೂರು: ರಾಜ್ಯದ ಕೆಲ ಭಾಗಗಳಲ್ಲಿ ಮಂಗಳವಾರ ಅಬ್ಬರದ ಮಳೆ ಸುರಿಯುತ್ತಿದ್ದು, ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ, ನಿರಂತರ ಮಳೆಗೆ ಸಕಲೇಶಪುರ ತಾಲೂಕಿನ ಆನೆಮಹಲ್ ದೋಣಿಗಲ್ ನಡುವೆ ರಾಷ್ಟ್ರೀಯ ಹೆದ್ದಾರಿ ಬದಿಗೆ ನಿರ್ಮಿಸಿದ್ದ 100 ಮೀಟರ್ ಉದ್ದದ ತಡೆಗೋಡೆ ಸಂಪೂರ್ಣ ಕೊಚ್ಚಿ ಹೋಗಿದೆ.

ಈ ಹೆದ್ದಾರಿ ಪಕ್ಕದಲ್ಲಿ ಕಳೆದ ವಾರ ನಿರ್ಮಿಸಿರುವ ಕಾಂಕ್ರೀಟ್ ರಸ್ತೆಯೂ ಬಿರುಕು ಬಿಟ್ಟಿದೆ. ಮಳೆ ಹೆಚ್ಚಾದರೆ ತಡೆಗೋಡೆ ಕುಸಿಯುವ ಆತಂಕ ಎದುರಾಗಿದೆ. ಸದ್ಯ ವಾಹನಗಳು ಸಂಚರಿಸುತ್ತಿವೆ.

ಸಕಲೇಶಪುರ ತಾಲೂಕಿನ ಅಂಗನವಾಡಿ ಹಾಗೂ ಶಾಲೆಗಳಿಗೆ ಬುಧವಾರ ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ರಜೆ ಘೋಷಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದಲ್ಲಿ ಗಾಳಿ ಮತ್ತು ಮಳೆ ಜೋರಾಗಿದ್ದು, ಕಳಸ ತಾಲೂಕಿನ ಬಸರೀಕಲ್ ಚೆಕ್‌ಪೋಸ್ಟ್ ಬಳಿ ದೊಡ್ಡ ಮರವೊಂದು ರಸ್ತೆಗೆ ಉರುಳಿದೆ. ಮರ ಬಿದ್ದಿರುವುದರಿಂದ ಕಳಸ–ಕಾರ್ಕಳ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಬಂದ್ ಆಗಿತ್ತು. ಪೊಲೀಸರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ಮರ ತೆರವು ಮಾಡಿದರು.

ಕೊಪ್ಪ, ಕಳಸ, ಕುದುರೆಮುಖ, ಶೃಂಗೇರಿ, ಮೂಡಿಗೆರೆ, ಕೊಟ್ಟಿಗೆಹಾರ, ಬಾಳೆಹೊನ್ನೂರು, ನರಸಿಂಹರಾಜಪುರ ಭಾಗದಲ್ಲಿ ಮಳೆ ಜೋರಾಗಿದೆ. ಮುಳ್ಳಯ್ಯನಗಿರಿ ಭಾಗದಲ್ಲಿ ಆಗಾಗ ಮಳೆಯಾಯಿತು. ಮಲೆನಾಡಿನಲ್ಲಿ ಮತ್ತೆ ಮಳೆ ಬಿರುಸುಗೊಂಡಿದೆ. ತೀರ್ಥಹಳ್ಳಿ, ಸಾಗರ ಹಾಗೂ ಹೊಸನಗರ ತಾಲೂಕುಗಳಲ್ಲಿ ಉತ್ತಮ ವರ್ಷಧಾರೆಯಾಗಿದೆ. ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳಲ್ಲಿ ಹೊಸನಗರ ತಾಲೂಕಿನ ಮಾಸ್ತಿಕಟ್ಟೆಯಲ್ಲಿ 14.8 ಸೆಂ.ಮೀ, ಹುಲಿಕಲ್‌ನಲ್ಲಿ 13.40 ಸೆಂ.ಮೀ, ಚಕ್ರಾ 11 ಸೆಂ.ಮೀ ಮಳೆ ದಾಖಲಾಗಿದೆ.

ವಸ್ತ್ರ ಸಂಹಿತೆ ಜಾರಿಗೆ ಮನವಿ



ಚಾಮುಂಡೇಶ್ವರಿ ದೇವಸ್ಥಾನವೂ ಸೇರಿದಂತೆ ಮುಜರಾಯಿ ದೇವಸ್ಥಾನಗಳಲ್ಲಿ ವಸ್ತ್ರ ಸಂಹಿತೆ ಜಾರಿಗೆ ಭಕ್ತರಿಂದ ಸಹಿ ಸಂಗ್ರಹದೊಂದಿಗೆ ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷರಾದ ವಿನಯ್ ಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುಡಾ ಮಾಜಿ ಸದಸ್ಯರಾದ ನವೀನ್‌ಕುಮಾರ್, ಮುಖಂಡರಾದ ಅಜಯ್ ಶಾಸ್ತ್ರಿ, ಆನಂದ್, ರವಿಚಂದ್ರ ಮಹಾನ್ ಶ್ರೇಯಸ್, ಮಹೇಶ್, ಬಸವರಾಜ್, ಎಸ್.ಎನ್.ರಾಜೇಶ್ ಇನ್ನಿತರರು ಈ ವೇಳೆ ಹಾಜರಿದ್ದರು.

ಇಂದು, ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜೂ.24– ಜೂ.25 ರಂದು ಮಧ್ಯಾಹ್ನ 1 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತುರ್ತು ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, PGCL (Power Grid Corporation of India) ಬಸ್ತಿಪುರ ಸುತ್ತಮುತ್ತಲಿನ ಪ್ರದೇಶ, Zoo rehabilitation center ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ನಾಳೆ ನಿಲುಗಡೆ: ಜೂನ್ 26 ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಮುಖ್ಯರಸ್ತೆ, ಯುನಿವರ್ಸಿಟಿ ಕ್ವಾರ್ಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿ ರಸ್ತೆ ಮುರಗನ್ ಮೆಡಿಕಲ್ಸ್‌ಯಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5 ರಿಂದ 16ನೇ ಮೇನ್, ಪಡುವಾರಹಳ್ಳಿ, ಡಿ.ಸಿ. ರೆಸಿಡೆನ್ಸಿ, ರಿಜನಲ್ ಕಮಿಷನರ್ ಆಫೀಸ್, ಸಿ.ಎಫ್.ಟಿ.ಆರ್.ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯರಸ್ತೆ, ವಾಗ್ದೇವಿನಗರ, ಜೆ.ಸಿ. ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಲ್ಲಾ ಪಂಚಾಯತ್ ಕಚೇರಿ, ಕೋರ್ಟ್, ಅರಸು ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ.ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆ.ಎಲ್.ಬಿ ರಸ್ತೆ, ಜಯಲಕ್ಷ್ಮೀ ವಿಲಾಸ್, ಜಿಲ್ಲಾ ಪಂಚಾಯತ್ ಕಚೇರಿ, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೋಟೆಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜೂ.30ರಂದು ವ್ಯತ್ಯಯ: ಜೂನ್ 30ರಂದು ಬೆಳಿಗ್ಗೆ 10ರಿಂದ ಸಂಜೆ 5:30 ಗಂಟೆಯವರೆಗೆ ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ, ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO–55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. **ದೇವನೂರು ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಮುಖ್ಯ ಪ್ರದೇಶಗಳು:** ಬಿ.ಡಿ ಕಾಲೋನಿ, ಅಜೀಜ್ ಸೇಠ್ ನಗರ, 320 ಮನೆ, ಕೆಸರಿ ಕಾಲೋನಿ, ಮಹದೇವಪುರ ಮುಖ್ಯ ರಸ್ತೆ, ಶಕ್ತಿನಗರ, ರಾಜ್‌ಕುಮಾರ್ ರಸ್ತೆ, ಕಲ್ಯಾಣಗಿರಿ, ಅಕ್ಷಯಭಂಡಾರ್, ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರ ಹುಂಡಿ, ನೆಹರು ನಗರ, ಸಾತಗಳ್ಳಿ ಗ್ರಾಮ, ಡಿ.ಟಿ.ಎಸ್ ರಾವ್ ನಗರ, ವಿ.ಟಿ.ಯು ಕಾಲೇಜು ಎದುರು, ಸನ್ ಪ್ಯೂರ್ ಬಡಾವಣೆ, ಸಾತಗಳ್ಳಿ ಬಿ ಜೋನ್, ವಿಟಿಯು ಕಾಲೇಜು, ಭಾರತ್ ನಗರ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಕರ್ನಾಟಕ ಬೆಳೆಗಾರರ 2.5 ಲಕ್ಷ ಟನ್ ಮಾವು ಖರೀದಿ



ನವದೆಹಲಿ, ಜೂ.24– ತೀವ್ರ ಬೆಲೆ ಕುಸಿತದಿಂದ ಕಂಗಾಲಾಗಿದ್ದ ಕರ್ನಾಟಕ ಮಾವು ಬೆಳೆಗಾರರ ನೆರವಿಗೆ ಕೇಂದ್ರ ಸರ್ಕಾರ ಧಾವಿಸಿದ್ದು, ರೈತರಿಂದ ಸುಮಾರು 2.5 ಲಕ್ಷ ಟನ್ ಮಾವು ಖರೀದಿಗೆ ಮುಂದಾಗಿದೆ.

ಬೆಲೆಗಳಲ್ಲಿ ತೀವ್ರ ಕುಸಿತದ ನಡುವೆಯೂ ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿಯಲ್ಲಿ 2025–26ನೇ ಸಾಲಿಗೆ ಕರ್ನಾಟಕದಿಂದ ಕ್ವಿಂಟಾಲ್‌ಗೆ 1,616 ರೂ.ಗಳಂತೆ 2.5 ಲಕ್ಷ ಟನ್ ಮಾವನ್ನು ಖರೀದಿಸುವುದಾಗಿ ಕೇಂದ್ರ ಮಂಗಳವಾರ ಘೋಷಿಸಿದೆ. ಕೇಂದ್ರ ಕೃಷಿ ಸಚಿವಾಲಯ ಜಾರಿಗೆ ತಂದ ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯ ಮೂಲಕ ಖರೀದಿಯನ್ನು ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.



ಹೆಚ್.ಡಿ.ಕುಮಾರಸ್ವಾಮಿ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಮ್ಮ ತವರು ರಾಜ್ಯದಲ್ಲಿ ಮಾವು ಬೆಳೆಗಾರರ ಬಗ್ಗೆ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರೊಂದಿಗೆ ಕಳವಳ ವ್ಯಕ್ತಪಡಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಕರ್ನಾಟಕ ರಾಜ್ಯದಲ್ಲಿ 2025–26ರ ಮಾರುಕಟ್ಟೆ ವರ್ಷಕ್ಕೆ ಮಾವಿನ ಮೇಲಿನ ಮಾರುಕಟ್ಟೆ ಹಸ್ತಕ್ಷೇಪ ಯೋಜನೆಯಡಿಯಲ್ಲಿ, ಕ್ವಿಂಟಾಲ್‌ಗೆ 1,616 ರೂ.ಗಳಂತೆ ಗರಿಷ್ಠ 2,50,000 ಟನ್ ಮಾವನ್ನು ಅನುಮೋದಿಸಲಾಗಿದೆ ಎಂದು ನಾನು ನಿಮಗೆ ತಿಳಿಸಲು ಬಯಸುತ್ತೇನೆ' ಎಂದು ಚೌಹಾಣ್ ಕುಮಾರಸ್ವಾಮಿ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಈ ಕ್ರಮವು ರಾಜ್ಯದಲ್ಲಿ ಮಾವಿನ ಬೆಳೆಗಾರರಿಗೆ ಪರಿಹಾರ ನೀಡುತ್ತದೆ ಎಂದು ಕೃಷಿ ಸಚಿವರು ಭರವಸೆ ವ್ಯಕ್ತಪಡಿಸಿದರು, ಏಕೆಂದರೆ ಅಲ್ಲಿ ಬೆಲೆಗಳು ತೀವ್ರ ವಾಗಿ ಕುಸಿದು ಕ್ವಿಂಟಲ್‌ಗೆ 400 ರೂ.ಗಳಿಗೆ ತಲುಪಿವೆ. ಇದು ಖರೀದಿ ಬೆಲೆಗಿಂತ ನಾಲ್ಕು ಪಟ್ಟು ವ್ಯತ್ಯಾಸವಾಗಿದೆ.

ಪ್ರಧಾನಿ ಮೋದಿಗೆ ಎಚ್‌ಡಿಕೆ ಧನ್ಯವಾದ: ಇನ್ನು ಸಂಕಷ್ಟದಲ್ಲಿದ್ದ ಕರ್ನಾಟಕ ಮಾವು ಬೆಳೆಗಾರರ ನೆರವಿಗೆ ಧಾವಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಧನ್ಯವಾದ ಹೇಳಿದ್ದಾರೆ. ಈ ಕುರಿತು ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಎಚ್‌ಡಿಕೆ, 'ಕರ್ನಾಟಕದ ಮಾವು ಬೆಳೆಗಾರರ ನೆರವಿಗೆ ಧಾವಿಸಿದ ಗೌರವಾನ್ವಿತ ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಸರಕಾರದ ರೈತಪರ ಬದ್ಧತೆ, ಅಚಲತೆಗೆ ನನ್ನ ಹೃದಯ ಪೂರ್ವಕ ಧನ್ಯವಾದಗಳು ಎಂದು ಹೇಳಿದ್ದಾರೆ.

ಹಣ ಅಕ್ರಮ ವರ್ಗಾವಣೆ ಪ್ರಕರಣ: ಐಶ್ವರ್ಯಾಗೌಡ ವಿರುದ್ಧ ದೂರು ದಾಖಲು



ಬೆಂಗಳೂರು, ಜೂ.24– ಜಾರಿ ನಿರ್ದೇಶನಾಲಯ ಬೆಂಗಳೂರು ವಲಯವು ಐಶ್ವರ್ಯಾಗೌಡ ಮತ್ತು ಇತರೆ 17 ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯ (ಪಿಎಂಎಲ್‌ಎ)ದಲ್ಲಿ ದೂರು ದಾಖಲಿಸಿದೆ. ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ದಂತೆ ಐಶ್ವರ್ಯಾಗೌಡ ಅವರ ಸುಮಾರು 3.98 ಕೋಟಿ ಮೌಲ್ಯದ ಆಸ್ತಿಯನ್ನು ಎರಡು ದಿನದ ಹಿಂದೆಯಷ್ಟೇ ಇ.ಡಿ. ಮುಟ್ಟುಗೋಲು ಹಾಕಿಕೊಂಡಿತ್ತು. ಐಶ್ವರ್ಯಾ ಮತ್ತು ಅವರ ಪತಿ ಕೆ.ಎನ್.ಹರೀಶ್ ವಿರುದ್ಧ ಬೆಂಗಳೂರು ನಗರ ಹಾಗೂ ಮಂಡ್ಯದಲ್ಲಿ ದಾಖಲಾಗಿದ್ದ ಎಫ್‌ಐಆರ್ ಆಧರಿಸಿ ಇ.ಡಿ. ತನಿಖೆ ಕೈಗೊಂಡಿತ್ತು.

ಬಡವರಿಗೆ ಮನೆ ಹಂಚಿಕೆಗೆ ಹಣ ಪಡೆದಿರುವುದು ಸಾಬೀತು ಮಾಡಿದರೆ ರಾಜೀನಾಮೆ

ಸಚಿವ ಜಮೀರ್ ಅಹಮದ್ ಖಾನ್ ಸವಾಲು



ಬೆಂಗಳೂರು, ಜೂ. 24(ಕೆಎಂಶಿ)–ಬಡವರಿಗೆ ಮನೆ ಹಂಚಿಕೆ ಮಾಡಲು ಹಣ ಪಡೆದಿದ್ದೇನೆಂದು ಸಾಬೀತು ಮಾಡಿದರೆ ತಕ್ಷಣವೇ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ವಸತಿ ಸಚಿವ ಜಮೀರ್ ಅಹಮದ್ ಖಾನ್ ಇಂದಿಲ್ಲಿ ಸವಾಲು ಹಾಕಿದ್ದಾರೆ.

ಪಕ್ಷದ ಹಿರಿಯ ಶಾಸಕ ಬಿ.ಆರ್. ಪಾಟೀಲ್ ಆರೋಪ ಮಾಡಿದ ಬೆನ್ನಲ್ಲೇ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡವರಿಗೆ ಕೊಡುವ ಮನೆಗೆ ಹಣ ಪಡೆದು ಬದುಕುವ ದರಿದ್ರ ನನಗೆ ಬಂದಿಲ್ಲ ಎಂದು ಕಿಡಿಕಾರಿದರು. ನಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಇಲ್ಲ, ಆದರೆ, ನಮ್ಮ ಶಾಸಕರೇ ಆರೋಪ ಮಾಡಿರುವ ಹಿನ್ನೆಲೆಯಲ್ಲಿ ತನಿಖೆಗೆ ಆದೇಶಿಸುವುದಾಗಿ ತಿಳಿಸಿದರು.

ತನಿಖಾ ವರದಿ ನಂತರ ಒಂದು ವೇಳೆ ಯಾರಾದರೂ ತಪ್ಪು ಮಾಡಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು, ನಾನು ಪಾಟೀಲರ ಬಳಿಯೂ ಮಾತನಾಡುತ್ತೇನೆ ಎಂದರು. ನಾನಾಗಲೀ, ಅಧಿಕಾರಿಗಳಾಗಲೀ ಮನೆ ನೀಡಲು ಹಣ ಪಡೆದಿದ್ದಾರೆಂದು ಪಾಟೀಲ್ ಆರೋಪ ಮಾಡಿಲ್ಲ, ಅವರು, ಯಾರ ಹೆಸರೂ ಹೇಳಿಲ್ಲ, ಪಂಚಾಯತ್ ಮಟ್ಟದಲ್ಲಿ ಈ ದಂಧೆ ನಡೆದಿದೆ ಎಂದು ಮಾಹಿತಿ ಕೊಟ್ಟರೆ ಕ್ರಮ ಕೈಗೊಳ್ಳುತ್ತೇನೆ. ನಾನು ಪ್ರವಾಸದಲ್ಲಿದ್ದ ಕಾರಣ ಇದಕ್ಕೆ ತಕ್ಷಣಕ್ಕೆ ಪ್ರತಿಕ್ರಿಯಿಸಲು ಸಾಧ್ಯವಾಗಲಿಲ್ಲ, ಆದರೆ, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಎಲ್ಲಾ ಮಾಹಿತಿ ನೀಡಿದ್ದೇನೆ.

ಮೊದಲನೆಯದಾಗಿ ಮನೆಗಳ ಹಂಚಿಕೆ ಪಂಚಾಯತ್‌ಗೆ ಅಧಿಕಾರ, ಅವರು ಯಾವ ತೀರ್ಮಾನ ಕೈಗೊಳ್ಳುತ್ತಾರೋ ಅದೇ ಅಂತಿಮ. ಈ ಬಗ್ಗೆ ನಮ್ಮ ಪಕ್ಷದ ಮತ್ತೊಬ್ಬ ಶಾಸಕ ಗೋಪಾಲಕೃಷ್ಣ ಅವರಿಗೆ ಪೂರ್ಣ ಮಾಹಿತಿ ಇಲ್ಲ, ಅರಿಯದೆ ನನ್ನ ರಾಜೀನಾಮೆ ಕೇಳಿದ್ದಾರೆ, ಪಂಚಾಯತ್ ಅಲ್ಲದೆ, ಸ್ಥಳೀಯ ಶಾಸಕರು ನೀಡುವ ಶಿಫಾರಸಿನ ಆಧಾರದ ಮೇಲೂ ಆಶ್ರಯ ಮತ್ತಿತರ ಯೋಜನೆಗಳ ಮನೆಗಳ ಹಂಚಿಕೆ ಆಗಲಿದೆ ಎಂದರು.

ಸಿದ್ದರಾಮಯ್ಯ ರಾಜ್ಯವನ್ನೇ ಹರಾಜು ಹಾಕಿದ್ದಾರೆ!



ಎ.ಹೆಚ್.ವಿಶ್ವನಾಥ್, ಎಂಎಲ್‌ಸಿ

ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದರೂ ಮೌನವೇಕೆ ಸಿದ್ದರಾಮಯ್ಯನವರೇ: ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಪ್ರಶ್ನೆ

ಮೈಸೂರು, ಜೂ.24(ಎಂಟಿವೈ)– ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭ್ರಷ್ಟಾಚಾರ ತಡೆಗೆ ಗಂಭೀರವಾದ ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿದ್ದಾರೆ ಎಂದು ಆರೋಪಿಸಿದ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಸಿದ್ದರಾಮಯ್ಯ ರಾಜ್ಯವನ್ನೇ ಹರಾಜು ಹಾಕಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಯಾವುದನ್ನು ಸಹ ಗಂಭೀರವಾಗಿ ಪರಿಗಣಿಸುತ್ತಿಲ್ಲ. ಬಿಜೆಪಿಯವರನ್ನು ಕಳ್ಳ ಎನ್ನುವ ಸಿದ್ದರಾಮಯ್ಯನೇ ಕಳ್ಳ. ಇವರು ರಾಜ್ಯವನ್ನು ಹರಾಜು ಹಾಕಿದ್ದಾರೆ.

ವಸತಿ ಇಲಾಖೆಯಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಶಾಸಕ ಬಿ.ಆರ್. ಪಾಟೀಲ್ ಧ್ವನಿ ಎತ್ತಿದ್ದಾರೆ. ಶಾಸಕ ರಾಜುಕಾಗೆ ರಾಜ್ಯ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದಾರೆ. ಆದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭ್ರಷ್ಟಾಚಾರದ ವಿರುದ್ಧ ಯಾಕೆ ಮಾತನಾಡುತ್ತಿಲ್ಲ ಎಂದು ಪ್ರಶ್ನಿಸಿದರು.

ವಸತಿ ಇಲಾಖೆಯಲ್ಲಿನ ಅಕ್ರಮದ ಬಗ್ಗೆ ಮಾತನಾಡಿ, ವಸತಿ ಮನೆಗಳ ಹಂಚಿಕೆಯಲ್ಲಿ ಆಶ್ರಯ ಸಮಿತಿಯೇ ಪರಮೋಚ್ಚ, ಆಶ್ರಯ ಸಮಿತಿ, ಶಾಸಕರ ಹಂತದಲ್ಲೇ ಮನೆಗಳು ಮಾರಾಟ ಆಗುತ್ತವೆ. ಕಾಮಗಾರಿಯಲ್ಲಿ ಸಚಿವರಿಗೆ ಶೇ.10 ಕಮಿಷನ್ ಹೋಗುತ್ತದೆ. ಕೆಲಸ ಮುಗಿಸುವವರೆಗೆ ಶೇ.25 ಆಗುತ್ತದೆ. ಮನೆಗಳ ಹಂಚಿಕೆಯಲ್ಲಿ ಆಶ್ರಯ ಸಮಿತಿ, ಗ್ರಾಮಸಭೆ ಮೂಲಕ ಆಯ್ಕೆ ಆಗಬೇಕು ಎಂದು ಹೇಳಿದರು.

ಮೂರ್ಖತನದ ಪರಮಾವಧಿ: ಮದ್ಯದ ಬೆಲೆ ಹೆಚ್ಚಿಸಿದ್ದಾರೆ. ಕುಡಿಯುವವರ ಸಂಖ್ಯೆ ಕಡಿಮೆ ಆಗಲಿ ಎಂದು ಬೆಲೆ ಹೆಚ್ಚಳ ಮಾಡಲಾಗಿದೆ ಎನ್ನುತ್ತಾರೆ. ಇದು ಮೂರ್ಖತನದ ಪರಮಾವಧಿ. ಮದ್ಯದ ಬೆಲೆ ಏರಿಕೆ ಮಾಡಿದ ಮಾತ್ರಕ್ಕೆ ಕುಡಿಯುವವರು ಕಡಿಮೆಯಾಗಿಲ್ಲ. ಯುವಕರು ಗಾಂಜಾ, ಅಫೀಮು ಮೊರೆ ಹೋಗುತ್ತಿದ್ದಾರೆ. ಎಲ್ಲೆಡೆ ಗಾಂಜಾ, ಅಫೀಮು ಹೆಚ್ಚಾಗಿದೆ. ಈ ಚಟ ಯುವಕರನ್ನು ಬಲಿ ತೆಗೆದುಕೊಳ್ಳುತ್ತಿದೆ. ಸಿಗರೇಟು ಸೇದುತ್ತಿದ್ದವರು ಗಾಂಜಾ ಹೊಡೆಯುತ್ತಿದ್ದಾರೆ ಎಂದು ಎಂಎಲ್‌ಸಿ ವಿಶ್ವನಾಥ್ ಕಿಡಿಕಾರಿದರು.

ಎಂಸಿಡಿಸಿಸಿ ಹಿಡಿತಕ್ಕೆ ಸಂಚು: ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಗೆ ಕೆಲ ಶಾಸಕರು ಸ್ಪರ್ಧಿಸಿದ್ದಾರೆ. ಶಾಸಕ ಜಿ.ಟಿ. ದೇವೇಗೌಡ ಅವರ ಪುತ್ರ ಹರೀಶ್ ಗೌಡ ಸಹಕಾರ ಕ್ಷೇತ್ರದಲ್ಲಿ ಈ ಮೊದಲಿನಿಂದಲೂ ಇದ್ದಾರೆ. ಸಹಕಾರ ಕ್ಷೇತ್ರದಲ್ಲಿ ಇವರ ಹಿಡಿತ ತಪ್ಪಿಸಿ, ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರಬೇಕು ಎಂದು ಸಿದ್ದರಾಮಯ್ಯ ಪ್ರಯತ್ನಿಸುತ್ತಿದ್ದಾರೆ. ಕಾರ್ಯಕರ್ತರು ಚುನಾವಣೆಗೆ ನಿಂತರೆ ಹಣದ ಕೊರತೆ ಆಗುತ್ತದೆ. ಶಾಸಕರೇ ಚುನಾವಣೆಗೆ ನಿಂತರೆ ಯಥೇಚ್ಛವಾಗಿ ಹಣ ಖರ್ಚು ಮಾಡುತ್ತಾರೆ. ಸಹಕಾರ ಕ್ಷೇತ್ರದಲ್ಲಿ ಶಾಸಕ ಜಿ.ಟಿ.ದೇವೇಗೌಡ ಕುಟುಂಬದ ಪ್ರಾಬಲ್ಯ ಮುಗಿಸುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ಲಾನ್ ಇರಬೇಕು ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅನುಮಾನಿಸಿದರು.

ಸರಗೂರು ಪೋಸ್ಟ್ ಆಫೀಸಿನಲ್ಲಿ ಗ್ರಾಹಕರು ಹೊಂದಿರುವ ವಿವಿಧ ಖಾತೆಗಳ ಪರಿಶೀಲನೆ

ಮೈಸೂರು,ಜೂ.24– ಮೈಸೂರು ಜಿಲ್ಲೆಯ ಸರಗೂರು ಪೋಸ್ಟ್ ಆಫೀಸಿನಲ್ಲಿ ಉಳಿತಾಯ ಖಾತೆ ಮತ್ತು ಠೇವಣಿ ಖಾತೆಗಳ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಸರಗೂರು ಪೋಸ್ಟ್ ಆಫೀಸ್ ಮತ್ತು ಇದರ ಕೆಳಗೆ ಬರುವ ಬ್ರಾಂಚ್ ಪೋಸ್ಟ್ ಆಫೀಸ್‌ಗಳಲ್ಲಿ, ಎಸ್.ಬಿ.ಆರ್.ಡಿ, ಮಾಸಿಕ ಆದಾಯ ಯೋಜನೆ (ಎಂಐಎಸ್) ಹಿರಿಯ ನಾಗರಿಕರ ಠೇವಣಿ, ಕಿಸಾನ್ ವಿಕಾಸ್ ಪತ್ರ ಮತ್ತು ರಾಷ್ಟ್ರೀಯ ಉಳಿತಾಯ ಖಾತೆ ಸೇರಿದಂತೆ ವಿವಿಧ ಖಾತೆಗಳನ್ನು ಹೊಂದಿರುವ ಗ್ರಾಹಕರು, ತಮ್ಮ ಪಾಸ್ ಪುಸ್ತಕ ಅಥವಾ ಠೇವಣಿ ಪತ್ರಗಳನ್ನು ಸರಗೂರು ಪಟ್ಟಣದಲ್ಲಿರುವ ಪೋಸ್ಟ್ ಆಫೀಸಿಗೆ ಜುಲೈ 15ರೊಳಗೆ ನೀಡಿ ಪರಿಶೀಲಿಸಿಕೊಳ್ಳಬೇಕಾಗಿದೆ ಎಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಜೂ.24– IISC, IIT, & NIT ಸಂಸ್ಥೆಗಳ ಮೂಲಕ Artifical Inteligence and Machine Learning ವೃತ್ತಿಪರ ತರಬೇತಿ ಶಿಷ್ಯ ವೇತನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. IISC, IIT, & NIT ಸಂಸ್ಥೆಗಳ ಮೂಲಕ Artifical Inteligence and Machine Learning ವೃತ್ತಿಪರ ತರಬೇತಿ ಕೋರ್ಸ್‌ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡದ 200 ಇಂಜಿನಿಯರಿಂಗ್ ಪದವೀಧರರಿಗೆ ಶಿಷ್ಯ ವೇತನ/ ತರಬೇತಿ ನೀಡುವ ಸಂಬಂಧ ಮಾಸಿಕ 15.000 ರೂ.ಗಳಂತೆ ಶಿಷ್ಯ ವೇತನವನ್ನು ನೀಡಲು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಅವಕಾಶ ಕಲ್ಪಿಸಲಾಗಿದೆ. ಅರ್ಜಿ ಸಲ್ಲಿಸಲು ಜುಲೈ 2 ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 9742099989.

ಸಂಚಾರ ಪೊಲೀಸರಿಂದ ಮಾದಕ ವಸ್ತು ವಿರುದ್ಧ ಜಾಗೃತಿ



ಅಂತಾರಾಷ್ಟ್ರೀಯ ಮಾದಕ ವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ ಮೈಸೂರಿನ ದೇವರಾಜ ಸಂಚಾರ ಠಾಣೆ ಪೊಲೀಸರು ಮಂಗಳವಾರ ಜನ ಜಾಗೃತಿ ಜಾಥಾ ನಡೆಸಿದರು.

ಮೈಸೂರು, ಜೂ.24(ಆರ್‌ಕೆ)–ಅಂತಾರಾಷ್ಟ್ರೀಯ ಮಾದಕ ವಸ್ತು ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರುದ್ಧ ದಿನಾಚರಣೆ ಅಂಗವಾಗಿ ದೇವರಾಜ ಸಂಚಾರ ಠಾಣೆ ಪೊಲೀಸರು ಇಂದು ಮೈಸೂರಲ್ಲಿ ಜನ ಜಾಗೃತಿ ಜಾಥಾ ನಡೆಸಿದರು.

ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಜಾಥಾಗೆ ಅಪರಾಧ ಮತ್ತು ಸಂಚಾರ ಡಿಸಿಪಿ ಸುಂದರರಾಜ್ ಚಾಲನೆ ನೀಡಿದರು. ಕೆ.ಆರ್.ಸರ್ಕಲ್, ಸಯ್ಯಾಜಿ ರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್, ಇರ್ವಿನ್ ರಸ್ತೆ, ನೆಹರು ಸರ್ಕಲ್, ಅಶೋಕ ರಸ್ತೆ ಮೂಲಕ ಸಾಗಿದ ಜಾಥಾ ಪುರಭವನದ ಬಳಿ ಅಂತ್ಯಗೊಂಡಿತು. ದೇವರಾಜ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಮಮತಾ, ಸಬ್‌ಇನ್ಸ್‌ಪೆಕ್ಟರ್‌ಗಳಾದ ಶಿವಕುಮಾರ್, ಚಂದ್ರಶೇಖರ್ ಮಾಣಗೇರಿ, ಸಿದ್ದೇಶ್, ನಾಗರಾಜ್, ರಮೇಶ್, ಪ್ರಭುರಾಜ್, ಸಿಬ್ಬಂದಿ, ಆಟೋ, ಟ್ಯಾಕ್ಸಿ ಚಾಲಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಪ್ರತಿ ಇಲಾಖೆಯಲ್ಲೂ ಭ್ರಷ್ಟಾಚಾರಕ್ಕೆ ಕೌಂಟರ್ ತೆರೆಯಲಾಗಿದೆ

● ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ● ಸಚಿವಾಲಯದಿಂದ ಗ್ರಾಮ ಪಂಚಾಯಿತಿವರೆಗೆ ಲಂಚದ ಹಾವಳಿ ವ್ಯಾಪಕವಾಗಿದೆ ● ಲಂಚ ವಸೂಲಿಗೆ ಮುಖ್ಯಮಂತ್ರಿಗಳೇ ಔಟ್‌ಸೋರ್ಸ್ ನೀಡಿದ್ದಾರೆ

ಬೆಂಗಳೂರು, ಜೂ. 24(ಕೆಎಂಶಿ)– ರಾಜ್ಯದ ಪ್ರತಿಯೊಂದು ಇಲಾಖೆಯಲ್ಲೂ ಭ್ರಷ್ಟಾಚಾರಕ್ಕೆ ಕೌಂಟರ್‌ಗಳನ್ನು ತೆರೆಯಲಾಗಿದೆ. ಸಚಿವಾಲಯದಿಂದ ಗ್ರಾಮ ಪಂಚಾಯತ್ ಕಚೇರಿವರೆಗೂ ಲಂಚ ಇಲ್ಲದೆ ಯಾವ ಕೆಲಸಗಳು ಸಾಧ್ಯವಿಲ್ಲ ಎಂಬಂತಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಕಮಿಷನ್ ಮಾಫಿಯಾಗೆ ಬೆಂಬಲ ಕೊಡುತ್ತಿದೆ. ಏಜೆಂಟರ ಮೂಲಕ ಆಡಳಿತ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳುವ ಏಕೈಕ ಕಾರಣಕ್ಕೆ ಸಿದ್ದರಾಮಯ್ಯ ಇದೆಲ್ಲವನ್ನು ನೋಡಿಯೂ ಕಣ್ಮುಚ್ಚಿ ಕುಳಿತಿದ್ದಾರೆ ಎಂದರು.

ಸಚಿವ ಕೃಷ್ಣಬೈರೇಗೌಡ ಅಧಿಕಾರಿಗಳ ಸಭೆ ಮುಗಿಸಿ, 'ಯಾತ್ರೀ ಹೊಟ್ಟೆ ಉರಿಸ್ತೀರಿ, ನಿಮ್ಮ ರೇಟ್ ಲಿಸ್ಟನ್ನೇ ಹಾಕಿ' ಎಂಬ ಹೇಳಿಕೆ ಕೊಟ್ಟಿದ್ದಾರೆ. ಗೃಹ ಸಚಿವ ಡಾ.ಜಿ. ಪರಮೇಶ್ವರ್ ಬಾದಾಮಿಯಲ್ಲಿ 'ಸಿದ್ರಾಮಣ್ಣ ಅವರ ಹತ್ರ ಕಾಸಿಲ್ಲ, ದಯವಿಟ್ಟು ಹಣ ಕೇಳಲು ಬರಬೇಡಿ' ಎಂದಿದ್ದಾರೆ. ಬೊಕ್ಕಸದಲ್ಲಿ ಹಣ ಇಲ್ಲ ಎಂಬ ಸಂದೇಶವನ್ನು ಮುಖ್ಯಮಂತ್ರಿಗಳು ಗೃಹ ಸಚಿವರ ಮೂಲಕ ಕಾಂಗ್ರೆಸ್ ಶಾಸಕರಿಗೆ ತಿಳಿಸಿದಂತಿದೆ. ಶಾಸಕರು ಅನುದಾನ ಕೇಳಬೇಡಿ ಎಂದಿರುವಂತಿದೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸು ಅವರ ದಾಖಲೆ ಮುರಿಯಲು ಹೋಗಿ, ರಾಜ್ಯ ಲೂಟಿ ಮಾಡಿ, ಲಂಚ ಇಲ್ಲದೇ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ ಎಂಬಂತಾಗಿದೆ. ಆಡಳಿತದ ಮೇಲೆ ಮುಖ್ಯಮಂತ್ರಿ ಸಂಪೂರ್ಣ ಹಿಡಿತ ಕಳೆದುಕೊಂಡಿದ್ದಾರೆ. ಲಂಚ ಸಂಗ್ರಹಕ್ಕೆ ಮುಖ್ಯಮಂತ್ರಿಗಳೇ ಔಟ್‌ಸೋರ್ಸ್ ನೀಡಿದ್ದಾರೆ. ಬಿ.ಆರ್.ಪಾಟೀಲ್ ಆರೋಪದ ಬಳಿಕವೂ ಸಚಿವ ಜಮೀರ್ ಅಹಮದ್ ಖಾನ್ ರಾಜೀನಾಮೆ ಪಡೆದಿಲ್ಲ. ಅದೇನೂ ದೊಡ್ಡ ವಿಚಾರವಲ್ಲ, ಭ್ರಷ್ಟಾಚಾರಕ್ಕೆ ಸರ್ಕಾರವನ್ನು ದೂಷಿಸುವುದು ಸರಿಯಲ್ಲ ಎಂಬುದಾಗಿ ಡಾ.ಪರಮೇಶ್ವರ್ ಹೇಳಿದ್ದಾರೆ, ಇದು ಜವಾಬ್ದಾರಿಯುತ ಹೇಳಿಕೆಯೇ ಎಂದರು.

ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಬೆಂಗಳೂರಿನಲ್ಲಿ ಹೊಸ ಮನೆ ನಿರ್ಮಾಣ ಮುಗಿದರೂ ಎನ್‌ಒಸಿ ಸಿಗುತ್ತಿಲ್ಲ. ಜನರೇಟರ್ ಇಟ್ಟುಕೊಂಡು ಗೃಹಪ್ರವೇಶ ಮಾಡುತ್ತಿದ್ದಾರೆ. ಇದು ರಾಜ್ಯದ ಪರಿಸ್ಥಿತಿ.



ಆಡಳಿತ ಪಕ್ಷದ ಶಾಸಕರಲ್ಲೇ ಬಹು ದೊಡ್ಡ ಹತಾಶೆ ಕಾಣುತ್ತಿದೆ. ಮುಖ್ಯಮಂತ್ರಿ ಅವರ ಆತ್ಮೀಯ, ಹಿರಿಯ ಶಾಸಕ ಹಾಗೂ ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್.ಪಾಟೀಲ್ ಕೊಡಲು ಲಂಚ ಇಲ್ಲದೇ ಬಡವರಿಗೆ ಮನೆ ಮಂಜೂರಾಗದ ಕುರಿತು ತಿಳಿಸಿದ್ದಾರೆ, ರಾಜೀವ್ ಗಾಂಧಿ ವಸತಿ ನಿಗಮದ ಮನೆ ಹಂಚಿಕೆಯಲ್ಲಿನ ಅಕ್ರಮ ಆರೋಪದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ, ಮನೆ ಹಂಚಿಕೆ ಗೋಲ್ಮಾಲ್ ಕುರಿತು ಸದ್ಯವೇ ಇನ್ನಷ್ಟು ಶಾಸಕರು ಮಾತನಾಡಲಿದ್ದಾರೆ ಎಂದು ವಿಜಯೇಂದ್ರ ಹೇಳಿದರು.

ಸಚಿವ ಬಿ.ನಾಗೇಂದ್ರ ರಾಜೀನಾಮೆಗೆ ಕಾರಣವಾದ ವಾಲ್ಮೀಕಿ ಅಭಿವೃದ್ಧಿ ನಿಗಮದ 150–160 ಕೋಟಿ ರೂ. ಹಗರಣ ವಿರುದ್ಧ ಬಿಜೆಪಿ ಹೋರಾಟ ಮಾಡಿತ್ತು. ಹಗರಣದ ಹಣ ತೆಲಂಗಾಣ ರಾಜ್ಯಕ್ಕೆ ಕಳುಹಿಸಲಾಗಿತ್ತು, ಇವರ ಲೂಟಿಗೆ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡರು, ಬಲಿಪಶುವಾದರು.

ಮೈಸೂರಿನ ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳೇ ಆರೋಪಿ ಸ್ಥಾನದಲ್ಲಿದ್ದರು, ಹಗರಣ ಆಗಿಲ್ಲವೆಂದ ಸಿದ್ದರಾಮಯ್ಯ, ತಮ್ಮ ಕುಟುಂಬ ಪಡೆದುಕೊಂಡಿದ್ದ 14 ನಿವೇಶನ ಹಿಂದಿರುಗಿಸಿದರು. ಬಿಜೆಪಿ ಹೋರಾಟ, ಜನಾಕ್ರೋಶ ಯಾತ್ರೆ ಮಾಡಿದಾಗ ಸಿದ್ದರಾಮಯ್ಯ ಮತ್ತು ಅವರ ಮಂತ್ರಿಮಂಡಲದ ಸದಸ್ಯರು ಬಹಳ ಹಗುರವಾಗಿ ಮಾತನಾಡಿದರು. ಬಿಜೆಪಿಯವರಿಗೆ ಕೆಲಸ ಇಲ್ಲ, ಗ್ಯಾರಂಟಿಗಳ ಜನಪ್ರಿಯತೆ ಸಹಿಸಲಾಗದೆ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ ಎಂದು ವಿಜಯೇಂದ್ರ ಟೀಕಿಸಿದರು.

ಹಾಗಿದ್ದರೆ, ಕಾಂಗ್ರೆಸ್ ಶಾಸಕರಾದ ಬಿ.ಆರ್.ಪಾಟೀಲ್, ರಾಜುಕಾಗೆ, ಗೋಪಾಲಕೃಷ್ಣ ಅವರ ಹೇಳಿಕೆಗೆ ನಿಮ್ಮ ಉತ್ತರ ಏನು ಎಂಬುದನ್ನು ರಾಜ್ಯದ ಜನರಿಗೆ ನೀಡಿ ಸಿದ್ದರಾಮಯ್ಯನವರೇ ಎಂದು ಆಗ್ರಹಿಸಿದರು.

ಮೊಳಕಾಲ್ಮೂರು ಶಾಸಕ ಎನ್.ವೈ. ಗೋಪಾಲಕೃಷ್ಣ, ತಾವು ಶಾಸಕರಾಗಿ ಚರಂಡಿ, ಶಾಲೆ ಕೆಲಸಗಳನ್ನೂ ಮಾಡಿಸಲು ಆಗುತ್ತಿಲ್ಲ ಎಂದಿದ್ದಾರೆ. ಮುಖ್ಯಮಂತ್ರಿಗಳ ಆತ್ಮೀಯ ಶಾಸಕರೇ ಈ ರೀತಿ ಹೇಳಿಕೆ ನೀಡುತ್ತಿದ್ದಾರೆಂದರೆ, ರಾಜ್ಯದಲ್ಲಿ ಆಡಳಿತ ನಡೆಯುತ್ತಿದೆಯೇ, ಸರ್ಕಾರ ಬದುಕಿದೆಯೇ ಎಂದು ರಾಜ್ಯದ ಜನ ಪ್ರಶ್ನಿಸುತ್ತಿದ್ದಾರೆ.

ರಾಜ್ಯ ಲೂಟಿ ಮಾಡಲು ಸರ್ಕಾರಿ ವ್ಯವಸ್ಥೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕುರ್ಚಿ ಉಳಿಸಿಕೊಳ್ಳಲು ಆಪ್ತ ಸಚಿವರಿಗೆ ಟಾರ್ಗೆಟ್ ನೀಡಿದ್ದಾರೆ. ಇದರಿಂದಾಗಿಯೇ ನಾಗೇಂದ್ರ ಹಣ ಅಕ್ರಮ ವರ್ಗಾವಣೆ ಹಳ್ಳಕ್ಕೆ ಬಿದ್ದರು ಎಂದರು.

ಪೀಣ್ಯ ಬಡಾವಣೆಯ ಕೈಗಾರಿಕೆದಾರರ ಸಂಘದ ಅಧ್ಯಕ್ಷರು ಪಕ್ಕದ ರಾಜ್ಯಗಳಿಗೆ ಹೋಗುವುದಾಗಿ ಹೇಳಿಕೆ ಕೊಟ್ಟಿದ್ದಾರೆ. ಇದು ಸರ್ಕಾರ ನಡೆಸುವ ರೀತಿಯೇ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಆಕ್ಷೇಪಿಸಿದರು.

ಚನ್ನಪಟ್ಟಣದಲ್ಲಿ ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನ ಯಶಸ್ವಿ

ರಾಜ್ಯ ಸರ್ಕಾರದಿಂದ ಎಸ್‌ಐಟಿ, ಲೋಕಾಯುಕ್ತ ದುರ್ಬಳಕೆ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪ



ಜೆಡಿಎಸ್ ಸದಸ್ಯತ್ವ ಅಭಿಯಾನ ಸಭೆಯಲ್ಲಿ ನಿಖಿಲ್ ಕುಮಾರಸ್ವಾಮಿ ಮಾತನಾಡಿದರು.

ಚನ್ನಪಟ್ಟಣ, ಜೂ.24 (ಮೋಹನ್ ರಾಜ್)– ಕಳೆದ 2 ವರ್ಷದಿಂದ ರಾಜ್ಯ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದ್ದು, ಎಸ್‌ಐಟಿ, ಲೋಕಾಯುಕ್ತವನ್ನು ಸಂಪೂರ್ಣ ದುರ್ಬಳಕೆ ಮಾಡಿಕೊಂಡಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆರೋಪಿಸಿದರು.

ಮಂಗಳವಾರ ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ಜನರೊಂದಿಗೆ ಜನತಾದಳ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಭೆ ಹಾಗೂ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒಂದಷ್ಟು ಜನಕ್ಕೆ ಹನಿಟ್ರ್ಯಾಪ್, ಮನಿಟ್ರ್ಯಾಪ್ ಮಾಡುತ್ತಿದ್ದು, ಎಲ್ಲಾ ಥರದ ಟ್ರ್ಯಾಪ್ ಮಾಡುತ್ತಿದೆ. ವಿಪಕ್ಷದವರು ಇರಲಿ, ಸ್ವಂತ ಪಕ್ಷದವರ ಮೇಲೆಯೇ ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದೇವೆ. ಸರ್ಕಾರದ ಈ ದುರಾಡಳಿತಕ್ಕೆ ತಕ್ಕ ಪಾಠ ಕಲಿಸಬೇಕು ಎಂದು ವಾಗ್ದಾಳಿ ನಡೆಸಿದರು.

ಸರ್ಕಾರದಲ್ಲಿ ಈಗ ಎಸ್ ಟ್ಯಾಕ್ಸ್ ಎಂಬುದು ಪ್ರಾರಂಭವಾಗಿದೆ. ಯಾವುದೇ ಇಲಾಖೆ ಕೆಲಸ ಆಗಬೇಕು ಅಂದರೆ ಎಸ್ ಟ್ಯಾಕ್ಸ್ ಕಟ್ಟಬೇಕು. ಎಸ್ ಟ್ಯಾಕ್ಸ್ ಅಂದರೆ ಏನು ಅಂತ ನೀವೇ ಅರ್ಥ ಮಾಡಿಕೊಳ್ಳಿ. ಇಂತಹ ಸರ್ಕಾರವನ್ನು ನಾವು ಕಿತ್ತೊಗೆದು ರಾಜ್ಯದಲ್ಲಿ ಪ್ರಾದೇಶಿಕ ಪಕ್ಷ ಉಳಿಸಬೇಕು ಎಂದರು.

ಪ್ರಧಾನಿ ಮೋದಿಯವರು ದೇವೇಗೌಡರ ಬಗ್ಗೆ ಸಾಕಷ್ಟು ಗೌರವ ಇಟ್ಟಿದ್ದಾರೆ. ಮೋದಿಯವರ ಸಂಪುಟದಲ್ಲಿ ಕುಮಾರಸ್ವಾಮಿ ಸಚಿವರಾಗಿದ್ದಾರೆ. ಇದಕ್ಕೆ ನೀವೂ ಕೂಡಾ ಕಾರಣ. ಚನ್ನಪಟ್ಟಣ ಉಪ ಚುನಾವಣೆಗೆ ಯಾರು ಅಭ್ಯರ್ಥಿ ಎನ್ನುವ ಚರ್ಚೆಯನ್ನು ಸ್ಥಳೀಯ ಮುಖಂಡರಿಗೆ ಬಿಟ್ಟಿದ್ದೆವು. ಸಾಕಷ್ಟು ಜನ ನಿಖಿಲ್‌ಗೆ ಈ ಉಪಚುನಾವಣೆ ಬೇಕಿತ್ತಾ ಎಂಬ ಪ್ರಶ್ನೆ ಮಾಡಿದ್ರು. ಆದರೆ ಕ್ಷೇತ್ರದ ಜನ ಎಷ್ಟು ಒತ್ತಾಯ ಮಾಡಿದ್ದಾರೆ ಅಂತ ನಿಮಗೆ ಗೊತ್ತು ಎಂದರು.

ಈಗ ರಾಜ್ಯಾದ್ಯಂತ ಪ್ರವಾಸ ಮಾಡಿ ಸದಸ್ಯತ್ವ ಅಭಿಯಾನ ಮಾಡುತ್ತಿದ್ದೇವೆ. ನಾನು ಮುಂದೆ ಚುನಾವಣೆಗೆ ನಿಲ್ಲಬೇಕಾ ಎಂಬ ಬಗ್ಗೆ ಇನ್ನು ಯಾವುದೇ ತೀರ್ಮಾನ ಮಾಡಿಲ್ಲ. ರಾಜ್ಯಾದ್ಯಂತ ಪಕ್ಷ ಸಂಘಟನೆಗೆ ನನ್ನ ಮೊದಲ ಆದ್ಯತೆ. ರಾಜ್ಯ ಸರ್ಕಾರದ ಪರಿಸ್ಥಿತಿ ಹೇಗಿದೆ ಅಂತ ನೀವೇ ನೋಡ್ತಿದ್ದೀರಿ. ಕಾಂಗ್ರೆಸ್ ಶಾಸಕರೇ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದಾರೆ ಎಂದರು.

ಚನ್ನಪಟ್ಟಣ ಡೇರಿ ಚುನಾವಣೆಯಲ್ಲಿ ಸಾಕಷ್ಟು ಅಕ್ರಮ ಆಗಿದೆ. ಕುತಂತ್ರ ಮಾಡಿ ಜೆಡಿಎಸ್ ಸೋಲಿಸಿದರು. ಹಾಗಾಗಿ ಕ್ಷೇತ್ರದಲ್ಲಿ ಇನ್ನು ಮುಂದೆ ಪಕ್ಷದ ಕಚೇರಿ ತೆಗೆದು ಸಂಘಟನೆ ಮಾಡುತ್ತೇವೆ. ಯಾವುದೋ ಒಂದು ಚುನಾವಣೆ ಸೋತ ತಕ್ಷಣ ನಾವು ಕ್ಷೇತ್ರ ಬಿಟ್ಟು ಹೋಗಲ್ಲ. ಇಂತಹ ಸಾಕಷ್ಟು ಸೋಲುಗಳನ್ನು ನಮ್ಮ ಕುಟುಂಬ ನೋಡಿದೆ. ನೀವು ಬೆಳೆಸಿರುವ ಮಕ್ಕಳು ನಾವು, ಇದು ನಮ್ಮ ಜಿಲ್ಲೆ. ಯಾವ ಕಾರಣಕ್ಕೂ ನಾವು ಪಲಾಯನವಾದ ಮಾಡಲ್ಲ. ಕಾಲಚಕ್ರ ತಿರುಗುತ್ತಿದೆ. ಮುಂದೆ ಚುನಾವಣೆಗಳು ಬರುತ್ತವೆ ಎಂದರು.

ರಾಜ್ಯದಲ್ಲಿ ಡೈರಿ ಚುನಾವಣೆಯಲ್ಲಿ ಸಾಕಷ್ಟು ಅಕ್ರಮ ಆಗಿದೆ. ಇತಿಹಾಸದಲ್ಲಿ ಮರೆಯಲಾಗದ ಚುನಾವಣೆ ನಡೆದಿದೆ. ಜೆಡಿಎಸ್ ಮತಗಳನ್ನು ಸೂಪರ್ ಸೀಡ್ ಮಾಡಿ ಕಾಂಗ್ರೆಸ್ ಅಧಿಕಾರ ಹಿಡಿದಿದೆ. ಜಯಮುತ್ತು 2 ಬಾರಿ ಗೆದ್ದು, 3ನೇ ಬಾರಿಗೆ ಸ್ಪರ್ಧೆ ಮಾಡಿದರು. ಆದರೆ ಅವರನ್ನು ಕುತಂತ್ರ ಮಾಡಿ ಚುನಾವಣೆಯಲ್ಲಿ ಸೋಲಿಸಿದರು. ಕುಮಾರಸ್ವಾಮಿ, ದೇವೇಗೌಡರನ್ನು ನೀವು ನೋಡಿದ್ದೀರಿ. ಸ್ಥಳೀಯ ಚುನಾವಣೆಯಲ್ಲಿ ಅವರು ಒಂದು ದಿನವೂ ಹಸ್ತಕ್ಷೇಪ ಮಾಡಿಲ್ಲ. ಮುಂದೆ ಡಿಸೆಂಬರ್‌ಗೆ ಗ್ರಾಪಂ, ಜಿಪಂ, ತಾಪಂ ಚುನಾವಣೆ ಬರುತ್ತಿದೆ. ಈ ಸ್ಥಳೀಯ ಚುನಾವಣೆಯಲ್ಲಿ ಪ್ರಾದೇಶಿಕ ಪಕ್ಷ ಉಳಿಯಬೇಕು. ಈಗಾಗಲೇ 3 ಲಕ್ಷ ಜನ ಸದಸ್ಯತ್ವ ನೋಂದಣಿ ಮಾಡಿಕೊಂಡಿದ್ದಾರೆ. ಮಿಸ್ ಕಾಲ್ ಅಭಿಯಾನಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತಿದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಎಚ್.ಸಿ.ಜಯಮುತ್ತು, ಒಕ್ಕಲಿಗರ ಸಂಘದ ನಿರ್ದೇಶಕ ಹಾಪ್‌ಕಾಮ್ಸ್ ದೇವರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಗೋವಿಂದಹಳ್ಳಿ ನಾಗರಾಜು, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಕುಕ್ಕೂರುದೊಡ್ಡಿ ಜಯರಾಮು, ಮುಖಂಡರಾದ ಪ್ರಸನ್ನ ಪಿ.ಗೌಡ ಇತರರಿದ್ದರು.

> ಜನರೊಂದಿಗೆ ಜನತಾದಳ ಹೆಸರಿನಲ್ಲಿ ರಾಜ್ಯ ಪ್ರವಾಸ ಮಾಡುತ್ತಿದ್ದೇವೆ. ಜೆಡಿಎಸ್ ಸದಾಕಾಲ ಜನರೊಂದಿಗೆ ಇರುತ್ತದೆ. ಅಧಿಕಾರ ಇರಲಿ, ಇಲ್ಲದಿರಲಿ ನಾವು ಜನರ ಜೊತೆ ಇರುತ್ತೇವೆ. 2 ಬಾರಿ ಕುಮಾರಸ್ವಾಮಿ ಅವರು ಚನ್ನಪಟ್ಟಣದಲ್ಲಿ ಶಾಸಕರಾಗಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಅವರು ಅನಿವಾರ್ಯ ಕಾರಣಗಳಿಂದ ಮಂಡ್ಯದಲ್ಲಿ ಸ್ಪರ್ಧಿಸಬೇಕಾಯಿತು. ಇದಕ್ಕೆ ಕ್ಷೇತ್ರದ ಜನ ಬೇಡ ಎಂದಿದ್ದೀರಿ. ಆದರೆ ದೇವರ ಆಟ, ಸಮಯ, ಸಂದರ್ಭ ಅವರು ಮಂಡ್ಯಕ್ಕೆ ಹೋದರು. ನನ್ನ ಮೇಲೆ ಹೆಚ್ಚಿನ ಒತ್ತಡ ಇದ್ದಿದ್ದರಿಂದ ಕೊನೆಗೆ ಕುಮಾರಸ್ವಾಮಿಯೇ ಅಲ್ಲಿಗೆ ತೆರಳಿದರು.
> – ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ.

ನಾಳೆ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆ

ಮಂಡ್ಯ, ಜೂ.24– ಧ್ವನಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ 2025ರ ವಿಶ್ವ ಮಾದಕ ವಸ್ತುಗಳ ವಿರೋಧಿ ದಿನಾಚರಣೆಯನ್ನು ಜೂ.26 ರಂದು ಬೆಳಗ್ಗೆ 11 ಗಂಟೆಗೆ ಸಿಹಿನೀರು ಕೊಳದಲ್ಲಿನ ಆರ್.ಜಿ.ವ್ಯಸನಿಗಳ ಪುನಶ್ಚೇತನಾ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್ ವಹಿಸಲಿದ್ದಾರೆ. ವಿಕಲಚೇತನರ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ ಎಸ್.ಎಸ್.ಕೋಮಲ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಗರಸಭಾ ಸದಸ್ಯೆ ಎಂ.ಎಸ್.ಪೂರ್ಣಿಮಾ ಆಗಮಿಸಲಿದ್ದು, ಆದಿಚುಂಚನಗಿರಿ ವೈದ್ಯಕೀಯ ಮಹಾವಿಶ್ವವಿದ್ಯಾಲಯದ ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ವಿಜಯ್ ಎಸ್.ಹೂಗಾರ್ ಮದ್ಯಪಾನದಿಂದಾಗುವ ದುಷ್ಪರಿಣಾಮ ಕುರಿತು ಉಪನ್ಯಾಸ ನೀಡಲಿದ್ದಾರೆ. ಪ್ರಾಸ್ತಾವಿಕ ನುಡಿಯನ್ನು ಡಿ.ತೇಜಕುಮಾರಿ ಮಾಡಲಿದ್ದಾರೆ.

ನಾಳೆ ಮಂಡ್ಯದಲ್ಲಿ ನೇರ ಸಂದರ್ಶನ

ಮಂಡ್ಯ, ಜೂ.24– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಮೆ.ಬಂಧನ್ ಬ್ಯಾಂಕ್, ಮೆ.ಎಂ.ಪಿ ಗಾರ್ಡಿಂಗ್ ಸಲ್ಯೂಷನ್ ಪ್ರೈ.ಲಿ., ಮತ್ತು ಮೆ.ಸಂಭವ್ ಫೌಂಡೇಷನ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳಿಗಾಗಿ ಜೂ.26 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ನೇರ ಸಂದರ್ಶನ ನಡೆಸಲಾಗುತ್ತಿದೆ. ಹೆಚ್ಚಿನ ಮಾಹಿತಿಗೆ ದೂ: 08232–295124 / 9164642684 ಅನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ

ಮಂಡ್ಯ, ಜೂ.24– 66/11 ಕೆವಿ ಜಿ.ಮಲ್ಲಿಗೆರೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.25 ರಂದು ಬೆಳಗ್ಗೆ 9 ರಿಂದ ಸಂಜೆ 6 ರವರೆಗೆ ಜಿ.ಮಲ್ಲಿಗೆರೆ, ಹೊನ್ನೇಮಡು, ಹುನಗನಹಳ್ಳಿ, ನಂಜೇನಹಳ್ಳಿ, ಮುತ್ತೆಗೆರೆ, ತಿಪ್ಪಾಪುರ, ಬುಂಡಾರೆಕೊಪ್ಪಲು, ಎಂ.ಹಟ್ನ, ಸಂಗಾಪುರ ಜವನಹಳ್ಳಿ, ಮಲ್ಲೇನಹಳ್ಳಿ, ಛತ್ರನಹಳ್ಳಿ, ಬಿಲ್ಲೇನಹಳ್ಳಿ, ಬಂಕನಹಳ್ಳಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಜನರ ಸಮಸ್ಯೆ ಪರಿಹರಿಸಲು ಜಿಲ್ಲಾಡಳಿತದಿಂದ ಪ್ರಯತ್ನ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಸಚಿವ ಚಲುವರಾಯಸ್ವಾಮಿ, ಶಾಸಕ ಹೆಚ್.ಟಿ.ಮಂಜು ಕೃಷಿ ವಸ್ತು ಪ್ರದರ್ಶನ ವೀಕ್ಷಿಸಿದರು.

ಕೆ.ಆರ್.ಪೇಟೆ, ಜೂ.24– ಸಾರ್ವಜನಿಕರಿಗೆ ಹಲವು ಸಮಸ್ಯೆಗಳಿರುತ್ತದೆ. ಎಲ್ಲಾ ಸಮಸ್ಯೆಗಳನ್ನು ಒಂದೇ ಬಾರಿ ಬಗೆಹರಿಸಲು ಆಗುವುದಿಲ್ಲ. ಹೀಗಾಗಿ ಹಂತ ಹಂತವಾಗಿ ಪರಿಹರಿಸಲು ಜಿಲ್ಲಾ ಹಾಗೂ ತಾಲೂಕು ಆಡಳಿತ ಶಕ್ತಿಮೀರಿ ಪ್ರಯತ್ನಿಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತ ಆಯೋಜಿಸಿದ್ದ ಜನಸ್ಪಂದನಾ ಸಭೆಯಲ್ಲಿ ಜನರಿಂದ ಅಹವಾಲು ಸ್ವೀಕರಿಸಿ ಮಾತನಾಡಿದ ಅವರು, ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳನ್ನು ಎಲ್ಲಾ 224 ಕ್ಷೇತ್ರಗಳಿಗೂ ಸಮಾನವಾಗಿ ನೀಡಲಾಗುತ್ತಿದೆ ಎಂದರು.

ಜಿಲ್ಲೆಯ ರೈತರ ಹಿತದೃಷ್ಟಿಯಿಂದ ಮೈಷುಗರ್ ಸಕ್ಕರೆ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ ಹಾಗೂ ಹೊಸ ಕೃಷಿ ವಿಶ್ವವಿದ್ಯಾನಿಲಯವನ್ನು ಮಂಡ್ಯದಲ್ಲಿ ಪ್ರಾರಂಭಿಸಲಾಗಿದೆ ಎಂದರು.

ಕಳೆದ 2 ವರ್ಷಗಳಲ್ಲಿ 20 ಸಾವಿರಕ್ಕೂ ಹೆಚ್ಚಿನ ಕಂದಾಯ ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ. ರಾಜ್ಯ ಸರ್ಕಾರ ಸಾರ್ವಜನಿಕರ ಹಿತದೃಷ್ಟಿಯಿಂದ ಇ–ಖಾತೆ, ಇ–ಸ್ವತ್ತು, ಬಿ–ಸ್ವತುಗಳ ನಿಯಮಾವಳಿಗಳನ್ನು ಸರಳೀಕರಣಗೊಳಿಸಲು ಚಿಂತನೆ ನಡೆಸಿದೆ. ಶೀಘ್ರದಲ್ಲಿ ಸಾರ್ವಜನಿಕರ ಸಮಸ್ಯೆ ಪರಿಹರಿಸಲು ಹೊಸ ನಿಯಮಾವಳಿ ಜಾರಿಗೆ ತರಲಾಗುವುದು ಎಂದರು.

ಕಳೆದ 3 ತಿಂಗಳಲ್ಲಿ ಕೆ.ಆರ್.ಪೇಟೆಯಲ್ಲಿ 219 ಪೋಡಿ ದುರಸ್ಥಿ ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 8 ಸಾವಿರ ಪೌತಿ ಖಾತೆ ಮಾಡಿ ಕೊಡಲಾಗಿದೆ ಎಂದರು.

ದೂರು ಕೇಂದ್ರ ತೆರೆಯಿರಿ: ಕಂದಾಯ ಹಾಗೂ ಇತರೆ ಇಲಾಖೆಗೆ ಸಂಬಂಧಿಸಿದಂತೆ ತಾಲೂಕು ಕಚೇರಿಗಳಲ್ಲಿ ಕೆಲಸ ಆಗದಿದ್ದಲ್ಲಿ ಸಾರ್ವಜನಿಕರು ದೂರು ಸಲ್ಲಿಸಲು ತಹಸೀಲ್ದಾರ್ ಹಾಗೂ ತಾಪಂಗಳಲ್ಲಿ ದೂರು ಕೇಂದ್ರ ತೆರೆಯಿರಿ. ಇಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಜಿಲ್ಲಾಧಿಕಾರಿ ಹಾಗೂ ಜಿಪಂ ಸಿಇಓ ಪರಿಶೀಲಿಸುವಂತೆ ತಿಳಿಸಿದರು.

ಜಿಲ್ಲೆಯಲ್ಲಿ ಉತ್ತಮ ಅಧಿಕಾರಿಗಳಿದ್ದಾರೆ: ಜಿಲ್ಲೆಯಲ್ಲಿ ಉತ್ತಮ ಅಧಿಕಾರಿಗಳಿದ್ದಾರೆ. ದಿನದ 24 ಗಂಟೆ ಜನಪರವಾಗಿ ಕೆಲಸ ಮಾಡುತ್ತಿದ್ದಾರೆ. ಪಾಂಡವಪುರ ಎಸಿ ಶ್ರೀನಿವಾಸ್ ಬಂದ ಮೇಲೆ 8 ಸಾವಿರ ಪೌತಿ ಖಾತೆ, 4 ಸಾವಿರ ಪಹಣಿ ತಿದ್ದುಪಡಿ ಮಾಡಿಕೊಟ್ಟಿದ್ದಾರೆ ಇಂತಹ ಅಧಿಕಾರಿಗಳಿಂದ ನಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಿದೆ. ರೈತರು ತಮ್ಮ ತಾತ, ಮುತ್ತಾತನ ಹೆಸರಿನಲ್ಲಿರುವ ಖಾತೆ ಮತ್ತು ದಾಖಲೆಗಳನ್ನು ಮಾಡಿಸಿಕೊಳ್ಳುವಂತೆ ರೈತರಿಗೆ ಸಲಹೆ ನೀಡಿದರು.

ಈ ವೇಳೆ ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಪಾಂಡವಪುರ ಎಸಿ ಶ್ರೀನಿವಾಸ್.ಕೆ.ಆರ್, ತಹಸೀಲ್ದಾರ್ ಡಾ.ಎಸ್.ಯು.ಅಶೋಕ್, ತಾಪಂ ಇಓ ಸುಷ್ಮಾ, ಬಿಇಓ ವೈ.ಕೆ.ತಿಮ್ಮೇಗೌಡ, ಕೆಪಿಟಿಸಿಎಲ್ ಎಇಇ ಹರ್ಷಿತ್, ತಾಲೂಕು ಚೆಸ್ಕಾಂ ಎಇಇ ಪುಟ್ಟಸ್ವಾಮಿ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಕೆಪಿಸಿಸಿ ಸದಸ್ಯ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ನಾಗೇಂದ್ರಕುಮಾರ್, ವಿಶ್ವನಾಥ್, ಪುರಸಭಾಧ್ಯಕ್ಷೆ ಪಂಕಜಾ, ಉಪಾಧ್ಯಕ್ಷೆ ಸೌಭಾಗ್ಯ, ತಾಲೂಕು ಕಾಂಗ್ರೆಸ್ ಉಸ್ತುವಾರಿ ರಮೇಶ್, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಜಿಲ್ಲಾ ಕೃಷಿ ಇಲಾಖೆ ಜಂಟಿ ಕಾರ್ಯದರ್ಶಿ ಅಶೋಕ್, ಡಿಡಿಪಿಐ ಚೆಲುವಯ್ಯ, ಶಿವರಾಮೇಗೌಡ ಮತ್ತಿತರರಿದ್ದರು.

> ನಮಗೆ ತೃಪ್ತಿಯಾಗುವಷ್ಟು ಕೆ.ಆರ್.ಪೇಟೆ ಅಭಿವೃದ್ಧಿಯಾಗಿಲ್ಲ. ಮಳೆ ಬಂದರೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಕೆರೆಯಂತಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ಇದನ್ನು ಸರಿಪಡಿಸಲು ಸಹಕರಿಸಿ. ಪಟ್ಟಣದ ಹೇಮಾವತಿ ಬಡಾವಣೆಯ ಸಹಸ್ರಾರು ನಿವೇಶನಗಳನ್ನು ಪುರಸಭೆ ಹಂಚಿ ಕೈ ತೊಳೆದುಕೊಂಡಿದೆ. ಆದರೆ ಯಾರೊಬ್ಬರಿಗೂ ಇಸ್ವತ್ತನ್ನು ಕೊಟ್ಟಿಲ್ಲ. ಪುರಸಭೆ ತಪ್ಪಿಗೆ ನಿವೇಶನ ಖರೀದಿಸಿದ ಸಾರ್ವಜನಿಕರಿಗೆ ಶಿಕ್ಷೆ ಕೊಡುವುದು ಸರಿಯೆ? ದಯಮಾಡಿ ಈ ಸಮಸ್ಯೆಯನ್ನು ಸರ್ಕಾರದ ಹಂತದಲ್ಲಿ ಸರಿಪಡಿಸಿ ಬಡ ಜನರಿಗೆ ಅನುಕೂಲ ಕಲ್ಪಿಸಿ. – ಹೆಚ್.ಟಿ.ಮಂಜು, ಶಾಸಕ.

ಒಂದನೇ ಪುಟದಿಂದ

ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 50 ಕೋಟಿ!

ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕಿತ್ತು, ಇದರಿಂದ ಪೂರ್ಣ ಅಭಿವೃದ್ಧಿ ಕಾರ್ಯಗಳು ಸಾಧ್ಯವಾಗಲಿಲ್ಲ ಎಂದಿದ್ದಾರೆ. ಹಿಂದಿನ ಬಿಜೆಪಿ ಆಡಳಿತದಲ್ಲಿ ಬೇಕಾಬಿಟ್ಟಿ ಕಾಮಗಾರಿ ಗುತ್ತಿಗೆಗಳನ್ನು ನೀಡಿ ಹಣವನ್ನೂ ಬಿಡುಗಡೆ ಮಾಡದೆ ಸ್ವೇಚ್ಛಾಚಾರ ನಡೆಸಿದ್ದರಿಂದ ಇಂತಹ ಪರಿಸ್ಥಿತಿ ಎದುರಾಗಿತ್ತು. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಅವರು, ಕಳೆದ ಎರಡು ವರ್ಷಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸುವಲ್ಲಿ ಯಶಸ್ವಿಯಾಗಿದ್ದಾರೆ. ಜುಲೈ ತಿಂಗಳಿನಿಂದಲೇ ಅಭಿವೃದ್ಧಿ ಹಣ ಬಿಡುಗಡೆ ಆಗಲಿದೆ.

ತ್ವರಿತವಾಗಿ ಕೆಲಸಗಳು ಆಗುತ್ತಿಲ್ಲ ಎಂಬುದಾಗಿ ನಮ್ಮ ಶಾಸಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆಯೇ ಹೊರತು ಆಡಳಿತ, ಸರ್ಕಾರ ಅಥವಾ ಮುಖ್ಯಮಂತ್ರಿ ವಿರುದ್ಧ ದಂಗೆ ಏಳುತ್ತಿಲ್ಲ, ಅವರುಗಳಿಗೆ ಅಭಿವೃದ್ಧಿ ಆಗಬೇಕೆಂಬುದಷ್ಟೇ ಮುಖ್ಯ ಉದ್ದೇಶವಾಗಿದ್ದು, ಅದಕ್ಕೆ ಮುಖ್ಯಮಂತ್ರಿ ಸ್ಪಂದಿಸುತ್ತಿದ್ದಾರೆ ಎಂದರು.

ಕಸಿದುಕೊಂಡು ಪರಾರಿಯಾದ ಖದೀಮರು

ಬಂದುಬಿಡುತ್ತಾರೆ ಎಂದು ಆತಂಕಗೊಂಡ ಖದೀಮ, ಜೇಬಿನಲ್ಲಿದ್ದ ಚಾಕು ತೆಗೆದು ಹೆದರಿಸಿದ್ದಾನೆ. ಆದರೂ ಪುಟ್ಟತಾಯಮ್ಮ ಕೂಗಾಡುವುದನ್ನು ನಿಲ್ಲಿಸದಿದ್ದಾಗ ಖದೀಮರು ಬೈಕ್‌ನಲ್ಲಿ ಹದಿನಾರು ಗ್ರಾಮದ ಕಡೆಗೆ ಪರಾರಿಯಾಗಿದ್ದಾರೆ.

ಘಟನೆಯಿಂದ ಗಾಬರಿಗೊಂಡಿದ್ದ ಪುಟ್ಟತಾಯಮ್ಮ ಜಮೀನಿನ ಬಳಿ ಓಡಿ ಹೋಗಿ ಪತಿಗೆ ವಿಷಯ ತಿಳಿಸಿದ್ದಾರೆ. ನಂತರ ಇಬ್ಬರೂ ಸ್ವಲ್ಪ ದೂರ ಓಡಿಹೋಗಿ ನೋಡಿದರಾದರೂ ಖದೀಮರ ಸುಳಿವು ಸಿಕ್ಕಿಲ್ಲ. ಈ ಸಂಬಂಧ ಪುಟ್ಟತಾಯಮ್ಮ ನೀಡಿದ ದೂರಿನನ್ವಯ ವರುಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

ಕಳ್ಳರಿಗೆ ಪ್ರಶಸ್ತವಾಗುತ್ತಿವೆ ಹಳ್ಳಿಗಳು: ನಗರಗಳಲ್ಲಿ ಹೊಂಚುಹಾಕಿ ಒಂಟಿ ಮಹಿಳೆಯರ ಸರ ಕಳವು ಮಾಡುತ್ತಿದ್ದ ಖದೀಮರಿಗೆ ಇತ್ತೀಚೆಗೆ ಹಳ್ಳಿಗಳೇ ಪ್ರಶಸ್ತವೆನಿಸಿರುವುದು ಆತಂಕ ಹುಟ್ಟಿಸಿದೆ. ಯಾವುದೇ ಭಯವಿಲ್ಲದೆ ಹಳ್ಳಿಗಳಿಗೆ ನುಗ್ಗಿ ದುಷ್ಕೃತ್ಯ ಮೆರೆಯುತ್ತಿರುವುದರಿಂದ ರೈತ ಮಹಿಳೆಯರು ಒಂಟಿಯಾಗಿ ಹೊಲ–ಗದ್ದೆಗೆ ಹೋಗುವುದಕ್ಕೂ ಹೆದರುವಂತಾಗಿದೆ.

ಕಳೆದ ವಾರವಷ್ಟೇ ಇಲವಾಲ ಹೋಬಳಿ, ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿ ನಮ್ಮ ನಾಯಿ ಕಳೆದಿದೆ, ನೀವೇನಾದರೂ ನೋಡಿದ್ದೀರಾ ಎಂದು ವಿಚಾರಿಸುವ ನೆಪದಲ್ಲಿ ಇಬ್ಬರು ಖದೀಮರು ರೈತ ಮಹಿಳೆ ಕುಮಾರಿ ಅವರ ಸುಮಾರು 3.20 ಲಕ್ಷ ಮೌಲ್ಯದ 37 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿದ್ದಾರೆ. ಅವರು ತಮ್ಮ ದನಗಳಿಗೆ ನೀರು ಕುಡಿಸಿಕೊಂಡು ಬರುವಾಗ ಹೊಂಚು ಹಾಕಿ ಈ ದುಷ್ಕೃತ್ಯ ಎಸಗಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿ ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ನಾಗನಹಳ್ಳಿ ನಿವಾಸಿ ಶ್ರೀಮತಿ ವೆಂಕಟಮ್ಮ ಅವರ 37 ಗ್ರಾಂ ಮಾಂಗಲ್ಯ ಸರ ಹಾಗೂ 10 ಗ್ರಾಂ ಕಿವಿಯೋಲೆ ಸೇರಿ ಸುಮಾರು 4.50 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಕಿತ್ತುಕೊಂಡು ಬೈಕ್‌ನಲ್ಲಿ ಪರಾರಿಯಾಗಿದ್ದಾನೆ. ಕೆಲ ತಿಂಗಳ ಹಿಂದೆ ಹೆಚ್.ಡಿ.ಕೋಟೆ ರಸ್ತೆ ಕೋಟೆ ಹುಂಡಿ ಗ್ರಾಮದ ಬಳಿ ಖದೀಮರು ಕಾರಿನಲ್ಲಿ ಬಂದು ಕುರಿ ಮೇಯಿಸುತ್ತಿದ್ದ ಮಹಿಳೆಯ ಚಿನ್ನದ ಸರ ಕಿತ್ತುಕೊಂಡಿದ್ದಾರೆ. ಇದೇ ರೀತಿಯಲ್ಲಿ ಇಲವಾಲದ ಬಳಿ ಮತ್ತೊಂದು ಘಟನೆ ನಡೆದಿತ್ತು. ಹೀಗೆ ಏನೇನೋ ನೆಪ ಮಾಡಿಕೊಂಡು ಹಳ್ಳಿ ಮಹಿಳೆಯರ ಮಾಂಗಲ್ಯ ಸರಗಳಿಗೆ ಕಂಟಕವಾಗಿದ್ದಾರೆ.


ಮಾರುಕಟ್ಟೆ ಕಟ್ಟಡದ ಮಣ್ಣು, ಇಟ್ಟಿಗೆ ಸಂಗ್ರಹ

ಅವುಗಳ ಉಲ್ಲೇಖವಿದೆ ಎಂಬುದನ್ನು ಮೇಲ್ಮನವಿ ದಾರರು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುದಂಶು ಧುಲಿಯ ಮತ್ತು ಅಸನುದ್ದೀನ್ ಅಮಾನುಲ್ಲಾ ಒಳಗೊಂಡ ಪೀಠವು ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್ ಡೌನ್ ಬಿಲ್ಡಿಂಗ್ ರಿಪೇರಿಯಾಗಲಿ, ನೆಲಸಮವಾಗಲೀ ಮಾಡಬಾರದು, ಇಂಟ್ಯಾಕ್ ಮತ್ತು ಎಎಸ್‌ಐ ತಜ್ಞರಿಂದ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತ್ತು. ಈ ಎರಡೂ ಪಾರಂಪರಿಕ ಕಟ್ಟಡ ಗಳನ್ನು ನೆಲಸಮಗೊಳಿಸಿ ಹೊಸದಾಗಿ ನಿರ್ಮಿಸ ಬೇಕೋ ಅಥವಾ ದುರಸ್ತಿಯೊಂದಿಗೆ ಸಂರಕ್ಷಿಸ ಬೇಕೋ ಎಂಬುದರ ಬಗ್ಗೆ ಸುಪ್ರೀಂಕೋರ್ಟ್ ಅಂತಿಮ ತೀರ್ಮಾನ ಕೈಗೊಳ್ಳಲಿದೆ.

ಶುಭಾಂಶು ಶುಕ್ಲಾ ಅಂತರಿಕ್ಷಯಾನ

ನಾಸಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್‌ಎಕ್ಸ್‌ನ ಫಾಲ್ಕನ್ 9 ರಾಕೆಟ್ ಹಾರಾಟ ನಡೆಸಲಿದೆ ಎಂದು ಎಂದು ನಾಸಾ ಪ್ರಕಟಣೆಯಲ್ಲಿ ತಿಳಿಸಿದೆ. ಈ ಕಾರ್ಯಾಚರಣೆಯ ನೇರಪ್ರಸಾರವನ್ನು ಉಡಾವಣೆಗೆ ಸುಮಾರು ಎರಡು ಗಂಟೆಗಳ ಮೊದಲು ಪ್ರಾರಂಭಿಸಲಾಗುತ್ತದೆ. ಇದನ್ನು @SpaceX ಹ್ಯಾಂಡಲ್‌ನಲ್ಲಿ X–ಪ್ಲಾಟ್‌ಫಾರ್ಮ್‌ನಲ್ಲಿ ವೀಕ್ಷಿಸಬಹುದಾಗಿದೆ. ಕಮಾಂಡರ್ ಪೆಗ್ಗಿ ವಿಟ್ಸನ್ ಅವರು, ಆಕ್ಸಿಯಂ–4 ವಾಣಿಜ್ಯ ಕಾರ್ಯಾಚರಣೆಯ ನೇತೃತ್ವವಹಿಸಿದ್ದು, ಶುಕ್ಲಾ ಮಿಷನ್ ಪೈಲಟ್ ಆಗಿ, ಹಂಗೇರಿಯನ್ ಗಗನಯಾತ್ರಿ ಟಿಬೋರ್ ಕಾಪು ಮತ್ತು ಪೋಲೆಂಡ್ನ ಸ್ಲಾವೋಸ್ಜ್ ಉಜ್ನಾನ್ಸ್ಕಿ–ವಿಸ್ನಿಯೆವ್ಸ್ಕಿ ಮಿಷನ್ ತಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅನಾಹುತಕ್ಕೆ ವಿಶೇಷ ಅನುದಾನ ಕಲ್ಪಿಸಿ



ಮಂಗಳವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ನವದೆಹಲಿಯಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿದರು.

ಒಟ್ಟಾರೆ 80 ಸಾವಿರ ಕೋಟಿ ಕಡಿಮೆಯಾಗಿದೆ. ಇದು ಬಹಳ ದೊಡ್ಡ ಮೊತ್ತವಾಗಿದೆ ಎಂದು ವಿತ್ತ ಸಚಿವರಿಗೆ ವಿವರಿಸಲಾಗಿದೆ ಎಂದು ತಿಳಿಸಿದರು.

ರಾಜ್ಯ ದೇಶದ ಆರ್ಥಿಕ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡುತ್ತಿದೆ. ದೇಶದ ಜನಸಂಖ್ಯೆಯಲ್ಲಿ ಕರ್ನಾಟಕದ ಜನ ಸಂಖ್ಯೆ ಶೇ.5ರಷ್ಟಿದೆ. ಕರ್ನಾಟಕದಿಂದ ಶೇ.8.7ರಷ್ಟು ಜಿಡಿಪಿಗೆ ಕೊಡುಗೆ ನೀಡುತ್ತಿದ್ದೇವೆ. ಜಿಎಸ್‌ಟಿ ಕೊಡುಗೆ ನೀಡುವುದರಲ್ಲಿ ಎರಡನೇ ಸ್ಥಾನದಲ್ಲಿದೆ. ಜಿಡಿಪಿಯಲ್ಲಿ ರಾಜ್ಯ ಮೂರನೇ ಸ್ಥಾನದಲ್ಲಿದೆ ಹಾಗಾಗಿ ಯಾವ ರಾಜ್ಯ ಹೆಚ್ಚು ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತಿದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಣಕಾಸಿನ ಕಾರ್ಯಕ್ಷಮತೆ ತೋರದ ರಾಜ್ಯಗಳಿಗೆ ವಿತ್ತೀಯ ಕೊರತೆ ಅನುದಾನ ನೀಡುವ ಕ್ರಮ ಸರಿಯಲ್ಲ. ಕೇರಳ, ಆಂಧ್ರ, ತಮಿಳುನಾಡು ರಾಜ್ಯಗಳಿಗೆ ನೀಡಿದಂತೆ ಆದಾಯ ಕೊರತೆ ಅನುದಾನವನ್ನು ಕರ್ನಾಟಕಕ್ಕೂ ನೀಡಬೇಕು. ಇಲ್ಲವೇ ಯಾವುದೇ ರಾಜ್ಯಗಳಿಗೆ ನೀಡಬಾರದು. ರಾಜಸ್ವ ಹೆಚ್ಚಳದಲ್ಲಿದ್ದ ಕರ್ನಾಟಕ ಕಳೆದ ವರ್ಷದಿಂದ ವಿತ್ತೀಯ ಕೊರತೆ ಎದುರಿಸುತ್ತಿದ್ದು, ಮುಂದಿನ ವರ್ಷಕ್ಕೆ ಈ ಪರಿಸ್ಥಿತಿ ಸುಧಾರಿಸಲಿದೆ ಎಂದು ತಿಳಿಸಲಾಯಿತು. ನಮ್ಮ ರಾಜ್ಯಕ್ಕೆ ಅಗತ್ಯವಿರುವ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಲಾಗಿದೆಯೇ ಹೊರತು ಯಾವುದೇ ಆರೋಪ ಮಾಡಿಲ್ಲ. ರಾಜ್ಯಕ್ಕೆ ಅನ್ಯಾಯವಾಗಿದ್ದರೆ, ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ವಿತ್ತ ಸಚಿವರು ಭರವಸೆ ನೀಡಿದ್ದಾರೆ ಎಂದರು.

ಕದನ ವಿರಾಮ ಘೋಷಿಸಿದ ಟ್ರಂಪ್!

ಏ. 22ರಂದು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರು ನಡೆಸಿದ ಗುಂಡಿನ ದಾಳಿಯಲ್ಲಿ 26 ಪ್ರವಾಸಿಗರು ಮೃತಪಟ್ಟರು. ಇದಕ್ಕೆ ಪ್ರತಿಯಾಗಿ ಭಾರತೀಯ ಸೇನೆಯು ಮೇ 7ರಂದು ಆಪರೇಷನ್ ಸಿಂಧೂರ ಹೆಸರಿನಲ್ಲಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ ಭಯೋತ್ಪಾದಕ ನೆಲೆಯನ್ನು ಗುರಿಯಾಗಿಸಿ ದಾಳಿ ನಡೆಸಿತ್ತು. ಇದು ಭಾರತ ಮತ್ತು ಪಾಕಿಸ್ತಾನ ನಡುವೆ ಯುದ್ಧಕ್ಕೆ ತಿರುಗಿತು. ಮೇ 7ರಂದು ಆರಂಭವಾದ ಈ ಸಂಘರ್ಷದಲ್ಲೂ ಮಧ್ಯ ಪ್ರವೇಶಿಸಿದ ಡೊನಾಲ್ಡ್ ಟ್ರಂಪ್ ಇದೇ ಮಾದರಿಯಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಉಭಯ ರಾಷ್ಟ್ರಗಳ ನಡುವೆ ಕದನ ವಿರಾಮ ಏರ್ಪಟ್ಟಿದೆ ಎಂದು ತಾವೇ ಘೋಷಿಸಿಕೊಂಡಿದ್ದರು.

ಶ್ವೇತ ಭವನದ ಅಧಿಕಾರಿಗಳನ್ನೇ ಅಚ್ಚರಿಗೊಳಿಸಿದ ಟ್ರಂಪ್ ಘೋಷಣೆ: ಇರಾನ್ ಮತ್ತು ಇಸ್ರೇಲ್ ನಡುವಿನ ಕದನ ತಾರಕಕ್ಕೇರಿದ ಸಂದರ್ಭದಲ್ಲೇ ಟ್ರಂಪ್ ಅವರ ಘೋಷಣೆಗೆ ಶ್ವೇತಭವನದ ಅಧಿಕಾರಿಗಳೇ ಚಕಿತಗೊಂಡಿದ್ದಾರೆ ಎಂದು ವರದಿಯಾಗಿದೆ. ಟ್ರಂಪ್ ಕದನ ವಿರಾಮ ಘೋಷಣೆಯಾಗಿದೆ ಎಂದು ಹೇಳಿದ ನಂತರ ಶ್ವೇತಭವನವು ಕತಾರ್‌ನ ಆಡಳಿತಗಾರ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರ ನೆರವನ್ನು ಪಡೆಯಿತು. ಈ ಅಚ್ಚರಿಯಿಂದ ಹೊರಬರಲು ಇಸ್ರೇಲ್ ಕೆಲ ಸಮಯ ತೆಗೆದುಕೊಂಡಿತು. ಈ ನಡುವೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಟ್ರಂಪ್ ದೂರವಾಣಿ ಮೂಲಕ ಸಮಾಲೋಚನೆ ನಡೆಸಿದ ನಂತರವೇ ಇದನ್ನು ಘೋಷಿಸಿದ್ದಾರೆ. ಟ್ರಂಪ್ ಘೋಷಣೆ ಅರಗಿಸಿಕೊಂಡು ತನ್ನ ಹೇಳಿಕೆ ನೀಡಲು ಇರಾನ್ ಕೂಡಾ ಬರೊಬ್ಬರಿ ಮೂರು ಗಂಟೆಗಳನ್ನು ತೆಗೆದುಕೊಂಡಿತು ಎಂದು ಮಾಧ್ಯಮಗಳು ವರದಿ ಮಾಡಿವೆ.

ಇಸ್ರೇಲ್ ಹಾಗೂ ಇರಾನ್ ನಡುವಿನ ಕದನ ವಿರಾಮದ ಶ್ರೇಯವನ್ನು ಟ್ರಂಪ್ ಪಡೆದುಕೊಂಡಿದ್ದಾರೆ. ಎರಡೂ ದೇಶಗಳು ಪರಸ್ಪರ ಕದನ ವಿರಾಮ ಒಪ್ಪಿಕೊಳ್ಳುವ ಮೊದಲೇ ಹೇಳಿಕೆ ನೀಡಿರುವ ಟ್ರಂಪ್, 'ಇಲ್ಲಿಂದ 6 ಗಂಟೆಗಳಲ್ಲಿ ಉಭಯ ರಾಷ್ಟ್ರಗಳು ಕದನ ವಿರಾಮ ಪ್ರಕ್ರಿಯೆ ಆರಂಭಿಸಲಿವೆ. 12 ಗಂಟೆಗಳ ಒಳಗಾಗಿ ಕದನ ವಿರಾಮ ಪೂರ್ಣಗೊಳ್ಳಲಿದೆ ಎಂಬ ಹೇಳಿಕೆ ನೀಡಿದ್ದಾರೆ.

ಇದಕ್ಕೆ ಪೂರಕವೆಂಬಂತೆ ಕದನ ವಿರಾಮದ ವೇಳಾಪಟ್ಟಿಯನ್ನೂ ಟ್ರಂಪ್ ಅವರೇ ನೀಡಿದ್ದಾರೆ. ಕದನ ವಿರಾಮದ ಆರಂಭ ಇರಾನ್ ನಡೆಸಬೇಕು. ಇದು 12 ಗಂಟೆಯ ಒಳಗಾಗಿ ಪೂರ್ಣಗೊಳ್ಳಬೇಕು. ಇಸ್ರೇಲ್ 24 ಗಂಟೆಗಳ ಒಳಗಾಗಿ ಕದನ ವಿರಾಮ ಪೂರ್ಣಗೊಳಿಸಬೇಕು. 12 ದಿನಗಳ ಕದನ ಅಧಿಕೃತವಾಗಿ ಕೊನೆಗೊಳ್ಳಬೇಕು. ಕದನ ವಿರಾಮ ಶಾಂತಿಯುತವಾಗಿ ಮತ್ತು ಗೌರವಯುತವಾಗಿ ಕೊನೆಗೊಳ್ಳಬೇಕು ಎಂದು ಟ್ರಂಪ್ ಹೇಳಿದ್ದಾರೆ.

ಡಿಕೆಶಿ ಮುಂದಿನ ಸಿಎಂ ಆಗೋದು 200% ಸತ್ಯ; ಶಾಸಕ ಇಕ್ಬಾಲ್ ಹುಸೇನ್

ರಾಮನಗರ, ಜೂ.24– ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗುವುದು 200% ಸತ್ಯ ಎಂದು ಅವರ ಆಪ್ತ ಹಾಗೂ ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವರ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ಡಿಕೆಶಿ ಮುಂದಿನ ಸಿಎಂ ಆಗೋದು 200% ಸತ್ಯ. ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ 140ಕ್ಕೂ ಹೆಚ್ಚು ಸ್ಥಾನಗಳನ್ನು ಗೆದ್ದು ಶಿವಕುಮಾರ್ ನೇತೃತ್ವದಲ್ಲಿ ಸರ್ಕಾರ ರಚಿಸುತ್ತದೆ ಎಂದು ಹೇಳಿದರು.

ಆದರೆ ಕಾಂಗ್ರೆಸ್ ಎಂಎಲ್‌ಸಿ ನಾಗರಾಜ್ ಯಾದವ್, ಹುಸೇನ್ ಹೇಳಿಕೆಯನ್ನು ಪ್ರಶ್ನಿಸಿದ್ದಾರೆ. ಮುಂದಿನ ಬಾರಿ ಅಂದ್ರೆ ಏನು ಅರ್ಥ? ಸಿದ್ದರಾಮಯ್ಯ ಈಗ ಹಾಲಿ ಸಿಎಂ ಆಗಿದ್ದಾರೆ. ಹೈಕಮಾಂಡ್ ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳಲಿದೆ ಎಂಬುದು ಯಾರಿಗೂ ಗೊತ್ತಿಲ್ಲ ಎಂದರು.

ಡಿ.ಕೆ.ಶಿವಕುಮಾರ್ ಸಾಕಷ್ಟು ಕೊಡುಗೆ ನೀಡಿದ್ದಾರೆ. ಆದರೆ ಸಿದ್ದರಾಮಯ್ಯ ಕೂಡ ಪಕ್ಷದ ಬೆಳವಣಿಗೆಯಲ್ಲಿ ಅಪಾರ ಶ್ರಮಿಸಿದ್ದಾರೆ ಎಂದರು. ಇಂತಹವರೇ ಸಿಎಂ ಆಗ್ತಾರೆ ಅಂತಾ ನಿರ್ಧರಿಸುವುದು ಇಕ್ಬಾಲ್ ಹುಸೇನ್‌ಗೆ ಆಗಲೀ ಅಥವಾ ನನ್ನಗಾಗಲಿ ಇಲ್ಲ ಎಂದರು.

ಮುಂದಿನ ಸಿಎಂ ಯಾರಾಗ್ತಾರೆ ಎಂಬುದನ್ನು ಹೈಕಮಾಂಡ್ ನಿರ್ಧಾರಿಸಿದೆ. 2028ರಲ್ಲಿಯೂ ಕೋಮುಶಕ್ತಿ ಗಳನ್ನು ಸೋಲಿಸಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂದು ನಾಗರಾಜ್ ಯಾದವ್ ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯನವರೇ ತಪ್ಪಿಯೂ ಕರ್ನಾಟಕವನ್ನು ಡಿಕೆಶಿ ಕೈಗೆ ಕೊಡಬೇಡಿ, ಮಾರಿಕೊಂಡು ಹೋಗ್ತಾರೆ!



ವಿಜಯಪುರ, ಜೂ.24– ಸಿದ್ದರಾಮಯ್ಯನವರೇ ನಿಮಗೆ ನಿಭಾಯಿಸಲು ಸಾಧ್ಯವಾಗದಿದ್ದರೆ, ವಿಧಾನಸಭೆ ವಿಸರ್ಜನೆ ಮಾಡಿ. ತಪ್ಪಿಯೂ ಕರ್ನಾಟಕವನ್ನು ಡಿ.ಕೆ.ಶಿವಕುಮಾರ್ ಕೈಗೆ ಕೊಡಬೇಡಿ. ಮಾರಿಕೊಂಡು ಹೋಗ್ತಾರೆ ಎಂದು ವಿಜಯಪುರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ಜಿಲ್ಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನಲ್ಲಿ ಎಲ್ಲ ಶಾಸಕರು ರೊಚ್ಚಿಗೆದ್ದಿದ್ದಾರೆ. ಸದ್ಯ ರಾಜ್ಯದ ಮಂತ್ರಿಗಳು ಲೂಟಿಗೆ ಇಳಿದಿದ್ದಾರೆ. ಸಿಎಂ ಡೀಲಿಂಗ್‌ನ್ನು ಅವರ ಮಗ ಮಾಡ್ತಿದ್ದಾನೆ, ಬೈರತಿ ಸುರೇಶ್ ಅವರು ಡೀಲಿಂಗ್ ಮಾಡುತ್ತಾರೆ. ಡಿಕೆಶಿ ಇಬ್ಬರು ಅಣ್ಣ, ತಮ್ಮ ಸೇರಿಕೊಂಡು ಲೂಟಿ ಮಾಡುತ್ತಿದ್ದಾರೆ. ಸರ್ಕಾರ ಯಾವಾಗ ಹೋಗುತ್ತೆ ಗೊತ್ತಿಲ್ಲ, ಅಷ್ಟರಲ್ಲಿ ನಾವು ಹಣ ಮಾಡಿಕೊಂಡು ಪಾರಾಗಬೇಕು ಎಂದು ಎಲ್ಲ ಮಂತ್ರಿಗಳೂ ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇನ್ನು ಗ್ಯಾರಂಟಿಗಳ ಬಗ್ಗೆ ಗೃಹ ಸಚಿವ ಜಿ.ಪರಮೇಶ್ವರ್ ಬಾದಾಮಿಯಲ್ಲಿ, ನಾವು ಬಾದಾಮಿಯ ಸಂಪೂರ್ಣ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಯಾಕೆಂದರೆ ನಮ್ಮ ಹತ್ತಿರ ದುಡ್ಡಿಲ್ಲ, ಅದಕ್ಕೆ ನರೇಂದ್ರ ಮೋದಿ ಅವರು ಕೊಡಬೇಕು ಎಂದಿದ್ದಾರೆ. ಕಾಂಗ್ರೆಸ್‌ನವರು ಗ್ಯಾರಂಟಿ ಹೆಸರಲ್ಲಿ ಪುಕ್ಕಟೆ ಹಂಚುತ್ತಾ ಹೋಗುತ್ತಾರೆ. ಗ್ಯಾರಂಟಿ ಒಂದು ನೆಪ ಅಷ್ಟೇ, ಇವರು ಲೂಟಿ ಮಾಡುತ್ತಿದ್ದಾರೆ. ಬಡವರಿಗೆ ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಗ್ಯಾರಂಟಿ ಬಿಟ್ಟು ಅಭಿವೃದ್ಧಿ ಮಾಡಬಹುದು. ಕರ್ನಾಟಕದಲ್ಲಿ ಸಾಕಷ್ಟು ಸಂಪನ್ಮೂಲ ಇದೆ. ಬಡವರಿಗೆ ಕೊಡುವುದನ್ನು ಕೊಟ್ಟು, ಬಳಿಕ ಬೇರೆ ಅಭಿವೃದ್ಧಿ ಕೆಲಸ ಮಾಡಬಹುದು ಎಂದರು.

ಇನ್ನೂ ಸಿದ್ದರಾಮಯ್ಯ ಅವರಿಗೆ ಗುರಿ ಇಲ್ಲ, ದಿನೇ ದಿನೆ ಕಾಂಗ್ರೆಸ್‌ನ ಶಾಸಕರು ಜಾಗೃತರಾಗುತ್ತಿದ್ದಾರೆ. ಎಲ್ಲವನ್ನು ಅಲ್ಪಸಂಖ್ಯಾತರಿಗೆ ಕೊಟ್ಟರೆ ಹೇಗೆ ಎನ್ನುತ್ತಿದ್ದಾರೆ. ಇದರಿಂದ ಸಿಎಂಗೆ ತಲೆನೋವಾಗಿದೆ. ನಿಮಗೆ ನಿಭಾಯಿಸಲು ಸಾಧ್ಯವಾಗದಿದ್ದರೆ, ವಿಧಾನಸಭೆ ವಿಸರ್ಜನೆ ಮಾಡಿ. ತಪ್ಪಿಯೂ ಕರ್ನಾಟಕವನ್ನ ಡಿಕೆಶಿ ಕೈಗೆ ಕೊಡಬೇಡಿ. ನೀವು ಸ್ವಲ್ಪ ಲೂಟಿ ಮಾಡಿದ್ದೀರಾ, ಡಿಕೆಶಿ ಕೈಯಲ್ಲಿ ಕೊಟ್ರೆ ಇಡೀ ಕರ್ನಾಟಕವನ್ನೇ ಮಾರಾಟ ಮಾಡಿಕೊಂಡು ಹೋಗುತ್ತಾರೆ. ಹೀಗಾಗಿ ರಾಜ್ಯ ಸರ್ಕಾರ ವಿಸರ್ಜನೆಯಾಗಬೇಕು, ರಾಜ್ಯಪಾಲರು ಮಧ್ಯಸ್ಥಿಕೆ ವಹಿಸಬೇಕು ಎಂದು ಆಗ್ರಹಿಸಿದರು.

ಉಳಿದ ಮೂರು ವರ್ಷವೂ ಸಿದ್ದರಾಮಯ್ಯರೇ ಮುಖ್ಯಮಂತ್ರಿಯಾಗಿರ್ತಾರೆ...!

ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಘೋಷಣೆ



ಬೆಂಗಳೂರು, ಜೂ. 24(ಕೆಎಂಶಿ)– ಉಳಿದ ಮೂರು ವರ್ಷ ಅವಧಿಗೂ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಅವರ ಆರ್ಥಿಕ ಸಲಹೆಗಾರ ಹಾಗೂ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ಬಹಿರಂಗಪಡಿಸಿದ್ದಾರೆ.

ಪಕ್ಷದ ಶಾಸಕರ ಅಸಮಾಧಾನದ ಹಿನ್ನೆಲೆಯಲ್ಲಿ, ಕೇಂದ್ರದಿಂದ ಆರ್ಥಿಕ ನೆರವು ತರಲು ಕಳೆದ ಎರಡು ದಿನಗಳಿಂದ ಮುಖ್ಯಮಂತ್ರಿ ದೆಹಲಿಯಲ್ಲಿ ಬಿಡಾರ ಹೂಡಿರುವ ಸಂದರ್ಭದಲ್ಲೇ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಪರ ಎಲ್ಲಾ ಶಾಸಕರು ಇದ್ದಾರೆ. ಅವರು ಮುಂದಿನ ಮೂರು ವರ್ಷ ಒಳ್ಳೆಯ ಆಡಳಿತ ನೀಡುತ್ತಾರೆ. ಅದನ್ನು ನೀಡಬೇಕು ಎಂಬುದಾಗಿ ಹೇಳಿದ್ದೇನೆ.

ಮುಖ್ಯಮಂತ್ರಿ ಅವರಿಗೆ ಬದ್ಧತೆ ಇದೆ, ಅದನ್ನು ಅವರು ಈಗಾಗಲೇ ತೋರಿಸಿದ್ದಾರೆ, ಭ್ರಷ್ಟಾಚಾರ ಎನ್ನುವುದು ಸರ್ಕಾರದ ಒಂದು ಭಾಗವಾಗಿ ಹೋಗಿದೆ. ಇದಕ್ಕೆ ಕಡಿವಾಣ ಹಾಕಲು ಸಿದ್ದರಾಮಯ್ಯ ಕೆಲವು ಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದಾರೆ.

ಸಚಿವರು, ಶಾಸಕರ ಶಿಫಾರಸಿನ ಮೂಲಕ ವರ್ಗಾವಣೆ ನಡೆಯಬಾರದು ಎಂಬ ಉದ್ದೇಶ ಹಾಗೂ ಭ್ರಷ್ಟಾಚಾರ ತಡೆಯಲು ಅಬಕಾರಿ, ಗಣಿ, ಉಪನೋಂದಣಾಧಿಕಾರಿ, ವಾಣಿಜ್ಯ ತೆರಿಗೆ ಸೇರಿದಂತೆ ಕೆಲವು ಪ್ರಮುಖ ಇಲಾಖೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ ನಡೆಸುತ್ತಿರುವುದೇ ಸಾಕ್ಷಿಯಾಗಿದೆ ಎಂದರು.

ನಾಗರಹೊಳೆ ಕಾಡಿನಲ್ಲಿ ಸಚಿವ ಜಮೀರ್ ಅಹಮದ್ ಅಕ್ರಮ ರೆಸಾರ್ಟ್

●ಬೆಂಬಲಿಗರು, ಆಪ್ತರ ಹೆಸರಿನಲ್ಲಿ ಕೋಟಿ, ಕೋಟಿ ಬಂಡವಾಳ ಹೂಡಿಕೆ: ಬಿಜೆಪಿ ಆರೋಪ ●ಲೋಕಾಯುಕ್ತಕ್ಕೆ ದೂರು ನೀಡಿದರೂ ಪ್ರಯೋಜನವಿಲ್ಲ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ವಕ್ತಾರ ಮೋಹನ್ ಅಕ್ರಮ ರೆಸಾರ್ಟ್‌ಗೆ ಸಂಬಂಧಿಸಿದ ದಾಖಲೆಗಳನ್ನು ಪ್ರದರ್ಶಿಸಿದರು.

ಮೈಸೂರು, ಜೂ.24(ಜಿಎ)–ನಾಗರಹೊಳೆ ಅಭಯಾರಣ್ಯದ ನಿಷೇಧಿತ ಪ್ರದೇಶದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ಅಕ್ರಮ ರೆಸಾರ್ಟ್ ಹೊಂದಿದ್ದು, ಸರ್ಕಾರದ ಹಣವನ್ನು ಇಲ್ಲಿಗೆ ತಂದು ಹಾಕುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿರುವ ಮೈಸೂರು ನಗರ ಬಿಜೆಪಿ ವಕ್ತಾರ ಮೋಹನ್, ಈ ಅಕ್ರಮದ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದು, ಕ್ರಮ ಕೈಗೊಂಡಿಲ್ಲ ಎಂದು ಆಪಾದಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವ ಜಮೀರ್ ಅಹಮದ್ ಖಾನ್ ತಮ್ಮ ಬೆಂಬಲಿಗರು, ಆಪ್ತರ ಹೆಸರಿನಲ್ಲಿ ನೂರಾರು ಕೋಟಿ ರೂ.ಗಳನ್ನು ಹೂಡಿಕೆ ಮಾಡಿ, ನಿಷೇಧಿತ ಅರಣ್ಯ ಪ್ರದೇಶದಲ್ಲಿ ಅಕ್ರಮ ವಸತಿ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. ಡಿ ದರ್ಜೆ ಗುಮಾಸ್ತ ಸರ್ಫರಾಜ್ ಕಳೆದ 25 ವರ್ಷದಿಂದ ಜಮೀರ್ ಖಾನ್ ಜೊತೆಗಿದ್ದು ಅವರ ಹೆಸರು ಮತ್ತು ಅವರ ಆಪ್ತರ ಹೆಸರಿನಲ್ಲಿ ರೆಸಾರ್ಟ್ ತೆರೆದಿದ್ದಾರೆ ಎಂದು ಆರೋಪಿಸಿದರು.

ಹೆಚ್.ಡಿ.ಕೋಟೆ 4 ಡ್ಯಾಮ್‌ಗಳು ಇರುವ ತಾಲೂಕು. ಜೀವ ವೈವಿಧ್ಯಗಳಿರುವ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ. ಬಂಡೀಪುರ, ನಾಗರಹೊಳೆ ಒಂದುಗೂಡುವ ಪ್ರದೇಶ. ಇಂತಹ ಪ್ರದೇಶದಲ್ಲಿ ಹಲವು ಅಕ್ರಮ ರೆಸಾರ್ಟ್‌ಗಳು ತಲೆ ಎತ್ತಿವೆ. ಅರಣ್ಯ ಇಲಾಖೆಯ ನೀತಿ ನಿಯಮಗಳನ್ನು ಗಾಳಿಗೆ ತೂರಿ ರೆಸಾರ್ಟ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಸರ್ಫರಾಜ್ ಸರ್ಕಾರಿ ನೌಕರರಾಗಿದ್ದುಕೊಂಡು ಬಿಜಿನೆಸ್ ಮಾಡುತ್ತಿದ್ದಾರೆ. ಒಬ್ಬ ಡಿ ಗ್ರೂಪ್ ನೌಕರ ಕೋಟ್ಯಾಂತರ ರೂಪಾಯಿ ಬಂಡವಾಳ ಹೂಡಿ ರೆಸಾರ್ಟ್ ಮಾಡಲು ಹೇಗೆ ಸಾಧ್ಯ ? ಇದರ ಹಿಂದೆ ಸಚಿವ ಜಮೀರ್ ಅಹಮದ್ ಖಾನ್ ಇದ್ದಾರೆ ಎಂದರು.

2015ರ ಟೂರಿಸಮ್ ಪಾಲಿಸಿ ಪ್ರಕಾರ ಅತಿಥಿ ಸ್ಕೀಮ್‌ನಲ್ಲಿ ರೈತರು ಹೋಂ ಸ್ಟೇ ಮಾಡಲು ಅವಕಾಶ ಇದೆ. ರೈತ ತಾನು ವಾಸವಿದ್ದು ಜೊತೆಗೆ 4 ಹೆಚ್ಚುವರಿ ರೂಮ್ ಮಾಡಿ ಆ ರೈತನೇ ಅದನ್ನು ನಿರ್ವಹಣೆ ಮಾಡಬೇಕು ಎಂಬ ನಿಯಮ ಇದೆ. ಆದರೆ ಇಲ್ಲಿನ ರೆಸಾರ್ಟ್‌ನಲ್ಲಿ 20ಕ್ಕೂ ಹೆಚ್ಚು ರೂಮ್‌ಗಳಿವೆ. ಸರ್ಫರಾಜ್ ಹೆಡ್ ಕ್ವಾರ್ಟರ್ಸ್ ಬೆಂಗಳೂರು. ಇಲ್ಲಿ ಹೇಗೆ ಮೆಂಟೇನ್ ಮಾಡಲು ಸಾಧ್ಯ. ಅದನ್ನು ನೋಡಿಕೊಳ್ಳಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಲಾಗಿದೆ ಎಂದು ಅವರು ವಿವರಗಳನ್ನು ನೀಡಿದರು.

ಒಬ್ಬ ಅತಿಥಿಗೆ ರೆಸಾರ್ಟ್‌ನಲ್ಲಿ 25,000 ಚಾರ್ಜ್ ಮಾಡುತ್ತಾರೆ. ಆ ರೆಸಾರ್ಟ್ ಪಕ್ಕದಲ್ಲೇ ಸರ್ಫರಾಜ್ ಪರ್ಸನಲ್ ಡ್ರೈವರ್ 4 ಎಕರೆ ಜಾಗದಲ್ಲಿ 100 ಕೋಟಿ ಬಂಡವಾಳ ಹೂಡಿ ದೊಡ್ಡ ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಒಬ್ಬ ಡ್ರೈವರ್ ಇಷ್ಟು ಹೂಡಿಕೆ ಮಾಡಲು ಸಾಧ್ಯವೇ. ಅಲ್ಲಿ ಒಂದು ಸಿ7 ಬಾರ್ ಇದೆ. ಆ ಸಿ7 ಬಾರಿನಲ್ಲಿ ಬೇರೆ ಕಡೆಗೆ ಪಾರ್ಸಲ್ ಕೊಡುವ ಆಗಿಲ್ಲ. ಆದರೆ ರಾತ್ರಿ 11 ಗಂಟೆಯವರೆಗೆ ಬಾರ್ ಓಪನ್ ಇರುತ್ತದೆ. ಇದೆಲ್ಲ ಜಮೀರ್ ಅಹಮದ್ ಖಾನ್ ಕೈವಾಡ ಇಲ್ಲದೇ ನಡೆಯೋದಿಲ್ಲ. 15 ದಿನಕ್ಕೊಮ್ಮೆ ರೆಸಾರ್ಟ್‌ಗೆ ಜಮೀರ್ ಬಂದು ಅಲ್ಲಿನ ಎಲ್ಲಾ ಜನರಿಗೆ ದುಡ್ಡನ್ನು ಕಡ್ಲೆಪುರಿ ರೀತಿ ಹಂಚುತ್ತಾರೆ ಎಂದು ಆರೋಪಿಸಿದರು.

ಕಾಡಂಚಿನಲ್ಲಿ ಬೃಹತ್ ಕಟ್ಟಡ ಕಟ್ಟಲು ಅನುಮತಿ ಕೊಟ್ಟವರು ಯಾರು?ಎಂದು ಪ್ರಶ್ನಿಸಿದ ಅವರು, ಇದರ ಹತ್ತಿರ ಇನ್ನೊಂದು ರೆಸಾರ್ಟ್ ಸಚಿವ ಸತೀಶ್ ಜಾರಕಿಹೊಳಿ ಸಂಬಂಧಿಕರ ಹೆಸರಿನಲ್ಲಿದೆ ಎಂಬ ಮಾಹಿತಿ ಇದೆ. ಇದಕ್ಕೆ ಸಂಬಂಧಿಸಿದಂತೆ ಬಿಜೆಪಿಯಿಂದ ಒಂದು ಸತ್ಯ ಶೋಧನೆ ಸಮಿತಿ ಮಾಡುತ್ತೇವೆ. ಇದನ್ನು ನಮ್ಮ ರಾಜ್ಯ ನಾಯಕರ ಗಮನಕ್ಕೆ ತಂದಿದ್ದೇವೆ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ಅಕ್ರಮಗಳ ಸರಮಾಲೆಯೇ ನಡೆಯುತ್ತಿದ್ದು, ಸಾವಿಲ್ಲದ ಮನೆಯ ಸಾಸಿವೆ ಇಲ್ಲ ಎನ್ನುವ ಹಾಗೆ ಈ ಸರ್ಕಾರದಲ್ಲಿ ಭ್ರಷ್ಟಾಚಾರ ಇಲ್ಲದ ಇಲಾಖೆಯೇ ಇಲ್ಲ. ಅಕ್ರಮ ರೆಸಾರ್ಟ್ ನಿರ್ಮಾಣದ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಿದ್ದೇವೆ. ದಾಖಲೆ ಸಮೇತ ಲೋಕಾಯುಕ್ತ ಎಸ್‌ಪಿ ಉದೇಶ್‌ಗೆ ದೂರು ಕೊಟ್ಟಿದ್ದೇವೆ. ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಪಾಲಿಕೆ ಮಾಜಿ ಸದಸ್ಯ ರಂಗಸ್ವಾಮಿ, ಮಹೇಶ್‌ರಾಜೇ ಅರಸ್ ಉಪಸ್ಥಿತರಿದ್ದರು.

ತುರ್ತು ಪರಿಸ್ಥಿತಿ ಕರಾಳ ದಿನ ಆಚರಣೆ

"ಜೂ.28ರಂದು ಬೆಳಿಗ್ಗೆ 11.30ಕ್ಕೆ ಮೈಸೂರು–ಹುಣಸೂರು ರಸ್ತೆಯಲ್ಲಿರುವ ಗೋಲ್ಡನ್ ಟೈಮ್ ಸಭಾಂಗಣದಲ್ಲಿ ತುರ್ತು ಪರಿಸ್ಥಿತಿ ಕರಾಳ ದಿನ ಆಚರಣೆ ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮಕ್ಕೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆಗಮಿಸಲಿದ್ದು, ತುರ್ತು ಪರಿಸ್ಥಿತಿ ಎನ್ನುವ ದೊಡ್ಡ ದುರಂತ ಹೇಗೆ ಹೇರಿದರು. ಎಲ್ಲಾ ವಿರೋಧ ಪಕ್ಷದ ನಾಯಕರನ್ನು ಜೈಲಿಗೆ ಹಾಕಿದ್ದು, ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡಿದ ಬಗ್ಗೆ ಜನರಿಗೆ ತಿಳಿಸಿ ಹೇಳುತ್ತೇವೆ. **–ಮೋಹನ್, ವಕ್ತಾರ, ಬಿಜೆಪಿ**

ನಾಳೆ ಪಾತಿ ಫೌಂಡೇಶನ್‌ನಿಂದ ಹಳೆ ಚಿತ್ರಗೀತೆಗಳ ಗಾಯನ, ವಿಶೇಷ ಮಕ್ಕಳಿಗೆ ಧನಸಹಾಯ, ಪ್ರತಿಭಾ ಪುರಸ್ಕಾರ



ವಿವಿಧ ಕಾರ್ಯಕ್ರಮಗಳ ಪ್ರಚಾರ ಪೋಸ್ಟರ್ ಅನ್ನು ಮೈಸೂರಿನ ಶ್ರೀರಾಂಪುರದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ಬಿಡುಗಡೆ ಮಾಡಿದರು.

ಮೈಸೂರು, ಜೂ. 24– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಜೂ.26ರಂದು ಸಂಜೆ 5 ಗಂಟೆಗೆ ಪಾತಿ ಫೌಂಡೇಶನ್ 125 ನೇ ಕಾರ್ಯಕ್ರಮದ ಅಂಗವಾಗಿ ಸಾಹಸಸಿಂಹ ವಿಷ್ಣುವರ್ಧನ್, ಪ್ರಣಯ ರಾಜ ಶ್ರೀನಾಥ್, ಅನಂತ್‌ನಾಗ್ ಅವರು ನಟಿಸಿರುವ ಚಿತ್ರದ ಹಾಡುಗಳ ಕಾರ್ಯಕ್ರಮ ಹಾಗೂ ವಿಶೇಷ ಮಕ್ಕಳಿಗೆ ಸಹಾಯಧನ ಮತ್ತು ಎಸ್‌ಎಸ್‌ಎಲ್‌ಸಿ, ಪಿಯುಸಿ ಟಾಪರ್ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮದ ಪ್ರಚಾರ ಪೋಸ್ಟರ್ ಅನ್ನು ಶ್ರೀರಾಂಪುರದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಪಾತಿ ಅವರು ನಗರಪಾಲಿಕೆ ಸದಸ್ಯ ಆದಾಗಿನಿಂದಲೂ ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಿದ್ದು, ಅಸಹಾಯಕರಿಗೆ ಸಹಾಯ ಮಾಡುತ್ತಾ ಬಂದಿರುವುದನ್ನು ಗಮನಿಸಿದ್ದೇವೆ. ಅವರ ಈ 125ನೇ ಕಾರ್ಯಕ್ರಮ ಮನೋರಂಜನೆ ಹಾಗೂ ವಿಶೇಷ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಹಾಯಧನ ನೀಡುವ ಕಾರ್ಯಕ್ರಮ ನಿಜಕ್ಕೂ ಅರ್ಥಗರ್ಭಿತವಾಗಿದೆ. ಇವರ ಕಾರ್ಯ ಹೀಗೆ ಮುಂದುವರೆಯಲಿ ಎಂದರು.

ಪಾತಿ ಫೌಂಡೇಶನ್ ಅಧ್ಯಕ್ಷ ಎಂ.ಡಿ. ಪಾರ್ಥಸಾರಥಿ ಕಾರ್ಯಕ್ರಮದ ವಿವರಗಳನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಚಲನಚಿತ್ರ ಮಂಡಳಿ ಅಧ್ಯಕ್ಷ ನರಸಿಂಹಲು, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನಕುಮಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ.ಬೈರಿ, ಹಿರಿಯ ಸಮಾಜ ಸೇವಕ ಡಾ..ಕೆ.ರಘುರಾಮ್ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ ಎಂದರು.

ಈ ವೇಳೆ ಪಾಲಿಕೆ ಮಾಜಿ ಸದಸ್ಯರಾದ ಚಂಪಕ, ಜಗದೀಶ್, ಕೇಬಲ್ ರಮೇಶ್, ಜೋಗಿ ಮಂಜು, ಸಂತೋಷ್, ರಾಜೇಶ್, ಮನೋಜ, ಹೇಮಂತ, ಅಭಿ, ಲಕ್ಷ್ಮಣ್, ಯೋಗೇಂದ್ರ ಇತರರಿದ್ದರು.

ನಾಳೆ ಸರಣಿ ವಿಶೇಷ ಉಪನ್ಯಾಸ

ಮೈಸೂರು,ಜೂ.24–ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಜೂ.26ರಂದು ಬೆಳಗ್ಗೆ 10 ಗಂಟೆಗೆ ಕರ್ನಾಟಕ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತರ ಕಚೇರಿಯಲ್ಲಿ ಹೊಯ್ಸಳ ಶಿಲ್ಪಕಲೆಯ ವಿಶ್ಲೇಷಣೆ ಮತ್ತು ಬಹು ಆಯಾಮದ ವಿಧಾನ ಕುರಿತು ಮಾಸಿಕ ಸರಣಿ ವಿಶೇಷ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ. ಮಹಾರಾಜ ಕಾಲೇಜಿನ ಪ್ರಾಚೀನ ಇತಿಹಾಸ ಹಾಗೂ ಪುರಾತತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ವಿಭಾಗದ ಪ್ರಾಧ್ಯಾಪಕರಾದ ಡಾ.ರೋಹಿತ ಈಶ್ವರ ಉಪನ್ಯಾಸ ನೀಡಲಿದ್ದಾರೆ. ಆಸಕ್ತ ವಿದ್ಯಾರ್ಥಿಗಳು/ ಇತಿಹಾಸ ಆಸಕ್ತರು/ ಸಂಶೋಧಕರು ಹಾಗೂ ಸಾರ್ವಜನಿಕರು ಉಚಿತವಾಗಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸ್ಥಿರ ದೂರವಾಣಿ ಸಂಖ್ಯೆ 0821–2424671 ಅನ್ನು ಕಚೇರಿ (ಬೆಳಗ್ಗೆ 10.00ರಿಂದ ಸಂಜೆ 5.30 ಗಂಟೆ) ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಇಲಾಖೆ ಉಪನಿರ್ದೇಶಕರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷರಿಗೆ ಅಭಿನಂದನೆ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಜಿಲ್ಲಾ ಗ್ರಾಮಾಂತರ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕುಂಬ್ರಳ್ಳಿ ಸುಬ್ಬಣ್ಣ ಅವರನ್ನು ಬಿ.ಜೆ.ಪಿ ಮುಖಂಡ ಮೈಸೂರು ಜಿಲ್ಲಾ ಗ್ರಾಮಾಂತರ ಮೀನುಗಾರರ ಪ್ರಕೋಷ್ಠ ಸಂಚಾಲಕ ಡಿ.ಮಹೇಶನಾಯಕ, ಜಿಲ್ಲಾ ಮಾಧ್ಯಮ ಪ್ರಮುಖ ದಯಾನಂದ್ ಪಾಟೀಲ, ಪ್ರಧಾನ ಕಾರ್ಯದರ್ಶಿ ಕಿರಣ್ ಜೈರಾಮೇಗೌಡ, ಕಾರ್ಯದರ್ಶಿ ಪಾಪಣ್ಣ, ಶ್ರೀನಿವಾಸಮೂರ್ತಿ ಮತ್ತು ಇತರರು ಅಭಿನಂದಿಸಿ, ಶುಭ ಕೋರಿದರು.

ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿಗೆ ಅರ್ಜಿ

ಮೈಸೂರು,ಜೂ.24– ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಪ್ರವಾಸೋದ್ಯಮ, ಆತಿಥ್ಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಆತಿಥ್ಯ ಕ್ಷೇತ್ರದ ಸಂಸ್ಥೆಗಳಾದ Food Craft Institue (FCI), Mysore ಹಾಗೂ Institute of Hotel Management (IHM) ಬೆಂಗಳೂರು ಮೂಲಕ ವಸತಿ ಸಹಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸುವ ಉದ್ದೇಶದಿಂದ ಅರ್ಹ ವ್ಯಕ್ತಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು https://karnatakatourism.org ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ https://mysurutourism.in/notification/ಮತ್ತು https://mysore.nic.in/en/notifications/ ಮೂಲಕ ಹಾಗೂ ಇ–ಮೇಲ್ visitmysurutourism @gmail.com ಇಲಾಖೆ ಸಹಾಯಕ ನಿರ್ದೇಶಕರ ಕಚೇರಿ ದೂ.ಸಂ: 0821–2422096 ಅನ್ನು ಸಂಪರ್ಕಿಸಬಹುದು.

ಚೈನ್ ಅಂಡ್ ಮಂಗಳಸೂತ್ರ ಮೇಳಕ್ಕೆ ಚಾಲನೆ



ಮೈಸೂರಿನ ಮಲಬಾರ್ ಗೋಲ್ಡ್ & ಡೈಮಂಡ್ಸ್ ಶೋರೂಂನಲ್ಲಿ ಚೈನ್ ಅಂಡ್ ಮಂಗಳಸೂತ್ರ ಮೇಳಕ್ಕೆ ಚಾಲನೆ ನೀಡಲಾಯಿತು.

ಮೈಸೂರು, ಜೂ. 24– ಮೈಸೂರಿನ ಪ್ರತಿಷ್ಠಿತ ಆಭರಣ ಸಂಸ್ಥೆಯಾದ ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಲ್ಲಿ ಆಷಾಢ ಶುಭ ಲಾಭ ಉತ್ಸವ ಆಕರ್ಷಕ ಕೊಡುಗೆಗಳೊಂದಿಗೆ ಚೈನ್ ಅಂಡ್ ಮಂಗಳಸೂತ್ರ ಮೇಳಕ್ಕೆ ಮಲಬಾರ್ ಗ್ರಾಹಕರು, ದಕ್ಷಿಣ ವಲಯ ಮುಖ್ಯಸ್ಥ ಶರಫುದ್ದೀನ್.ಪಿ ಮತ್ತು ಮೈಸೂರು ಶೋರೂಂ ಸಹಾಯಕ ಮುಖ್ಯಸ್ಥ ಮಹಮ್ಮದ್ ಅಂಶಜ್ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಜಾಗತಿಕ ಆಭರಣ ಚಿಲ್ಲರೆ ವ್ಯಾಪಾರಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ತನ್ನ ಬಹುನಿರೀಕ್ಷಿತ ಆಷಾಢ ಶುಭ ಲಾಭ್ ಉತ್ಸವವನ್ನು ಪ್ರಾರಂಭಿಸಿದೆ. ಜುಲೈ 27 ರವರೆಗೆ ನಡೆಯುವ ಈ ಅತ್ಯಾಕರ್ಷಕ ಅಭಿಯಾನವು ಗ್ರಾಹಕರಿಗೆ ವಿವಿಧ ಶ್ರೇಣಿಯ ಅತ್ಯುತ್ತಮ ಆಭರಣಗಳ ಮೇಲೆ ಆಕರ್ಷಕ ಕೊಡುಗೆಗಳನ್ನು ಒದಗಿಸುತ್ತದೆ.

ಗ್ರಾಹಕರು ಚಿನ್ನದ ಆಭರಣಗಳ ಮೇಕಿಂಗ್ ಚಾರ್ಜ್‌ನಲ್ಲಿ ಫ್ಲಾಟ್ 30% ರಿಯಾಯಿತಿ, ಸ್ಟಡ್ ಆಭರಣಗಳ ಮೇಕಿಂಗ್ ಚಾರ್ಜ್‌ನಲ್ಲಿ ಫ್ಲಾಟ್ 30% ರಿಯಾಯಿತಿ ಮತ್ತು ವಜ್ರದ ಮೌಲ್ಯದ ಮೇಲೆ 30% ವರೆಗೆ ರಿಯಾಯಿತಿ ಪಡೆಯಬಹುದು. ಈ ಆಕರ್ಷಕ ಕೊಡುಗೆಗಳು ಆಭರಣ ಪ್ರಿಯರಿಗೆ ತಮ್ಮ ನೆಚ್ಚಿನ ಆಭರಣಗಳನ್ನು ಉತ್ತಮ ಬೆಲೆಯಲ್ಲಿ ಖರೀದಿಸಲು ಅತ್ಯುತ್ತಮ ಅವಕಾಶವನ್ನು ಒದಗಿಸುತ್ತವೆ. ಕರ್ನಾಟಕದಾದ್ಯಂತ ಎಲ್ಲಾ ಅಂಗಡಿಗಳಲ್ಲಿ ಈ ಕೊಡುಗೆಯನ್ನು ಪಡೆಯಬಹುದು.

ನ್ಯಾಯಯುತ ಬೆಲೆ ಮತ್ತು ಪಾರದರ್ಶಕತೆಗೆ ನಮ್ಮ ಬದ್ಧತೆಯನ್ನು ಎತ್ತಿಹಿಡಿಯುವಾಗ ನಮ್ಮ ಮೌಲ್ಯಯುತ ಗ್ರಾಹಕರಿಗೆ ಅವರ ನೆಚ್ಚಿನ ಆಭರಣಗಳ ಮೇಲೆ ಉತ್ತಮ ಡೀಲ್‌ಗಳನ್ನು ನೀಡಲು ನಮ್ಮ ಆಷಾಢ ಅಭಿಯಾನವನ್ನು ವಿನ್ಯಾಸಗೊಳಿಸಲಾಗಿದೆ. ನಮ್ಮ ಕೊಡುಗೆಗಳು 100% ನೈಜವಾಗಿದ್ದು, ನಮ್ಮ ಗ್ರಾಹಕರು ಅತ್ಯುತ್ತಮವಾದದ್ದನ್ನು ಮಾತ್ರ ಪಡೆಯುತ್ತಾರೆ ಎಂದು ಮಲಬಾರ್ ಗೋಲ್ಡ್ & ಡೈಮಂಡ್ಸ್ ಅಧ್ಯಕ್ಷ ಎಂ.ಪಿ.ಅಹಮ್ಮದ್ ಹೇಳಿದರು.

ಫಿಶಿಯೋಥೆರಪಿಸ್ಟ್, ಆಯಾ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಜೂ.24–2025–26ನೇ ಸಾಲಿನಲ್ಲಿ ತಿ.ನರಸೀಪುರ ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಸಮನ್ವಯ ಸಂಪನ್ಮೂಲ ಕೇಂದ್ರದಲ್ಲಿ ಗೌರವ ಸಂಭಾವನೆಗೆ ಕರ್ತವ್ಯ ನಿರ್ವಹಿಸಲು ಫಿಶಿಯೋಥೆರಪಿಸ್ಟ್ ಹಾಗೂ ಆಯಾ ಕೆಲಸಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಫಿಶಿಯೋಥೆರಪಿಸ್ಟ್ ಹುದ್ದೆಗೆ ರೂ. 12000 ಹಾಗೂ ಆಯಾ ಹುದ್ದೆಗೆ 6000 ರೂ. ನಿಗದಿಪಡಿಸಲಾಗಿದೆ. ಈ ಹುದ್ದೆಗಳು ತಾತ್ಕಾಲಿಕವಾಗಿದ್ದು, 2026 ಮಾರ್ಚ್‌ವರೆಗೆ ನಿಗದಿಪಡಿಸಲಾಗಿದೆ. ಆಸಕ್ತರು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಪದನಿಮಿತ್ತ ತಾಲೂಕು ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ತಿ.ನರಸೀಪುರ, ಮೈಸೂರು ಜಿಲ್ಲೆ ಇವರಿಗೆ ಜೂ.26 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಫಿಶಿಯೋಥೆರಪಿಸ್ಟ್ ಹುದ್ದೆಗೆ ಬಿಪಿಟಿ ಅಥವಾ ಡಿಪಿಟಿ ಹೊಂದಿರಬೇಕು. ಆಯಾ ಹುದ್ದೆಗೆ ಕನಿಷ್ಠ ಎಸ್.ಎಸ್.ಎಲ್.ಸಿ ಓದಿರಬೇಕು ಎಂದು ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ತಿ.ನರಸೀಪುರ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಪದನಿಮಿತ್ತ ಯೋಜನಾ ಸಮನ್ವಯಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಕ್ತದಾನ ಶಿಬಿರದ ಪೋಸ್ಟರ್ ಬಿಡುಗಡೆ



ಕೆಂಪೇಗೌಡರ ಜಯಂತಿ ಅಂಗವಾಗಿ ಏರ್ಪಡಿಸಿರುವ ರಕ್ತದಾನದ ಪೋಸ್ಟರ್ ಅನ್ನು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಿಡುಗಡೆ ಮಾಡಿದರು.

ಮೈಸೂರು, ಜೂ. 24– ಮೈಸೂರಿನ ಚಾಮುಂಡೇಶ್ವರಿ ಬಳಗ ಹಾಗೂ ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ನಾಡಪ್ರಭು ಕೆಂಪೇಗೌಡರ 516ನೇ ಜಯಂತಿ ಅಂಗವಾಗಿ ಗುರುವಾರ 26ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ನ್ಯೂ ಸಯ್ಯಾಜಿರಾವ್ ರಸ್ತೆ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದ್ದು, ಇದರ ಪೋಸ್ಟರ್ ಅನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಿಡುಗಡೆ ಮಾಡಿದರು. ರಕ್ತದಾನ ಮಾಡಲು ಇಚ್ಛಿಸುವವರು 9902040657 ಸಂಪರ್ಕಿಸಬಹುದು.

ಈ ವೇಳೆ ಚಾಮುಂಡೇಶ್ವರಿ ಬಳಗದ ಮುಖ್ಯಸ್ಥ ನಜರ್‌ಬಾದ್ ನಟರಾಜ್, ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಬಳಗದ ಪಾಂಡವಪುರ ದಿನೇಶ್, 23ನೇ ವಾರ್ಡ್ ಮುಖಂಡ ರವಿಚಂದ್ರ, ಡಿಸಿಸಿ ಚಂದ್ರು, ಉತ್ತನಹಳ್ಳಿ ಶಿವಣ್ಣ ಇತರರಿದ್ದರು.

ಭಾರತೀಯ ಜೈನ್ ಸಂಘಟನೆಯಿಂದ ಪರಿಸರ ದಿನಾಚರಣೆ



ಭಾರತೀಯ ಜೈನ್ ಸಂಘಟನೆ ಮೈಸೂರು ಶಾಖೆಯ ಆಶ್ರಯದಲ್ಲಿ ರಾಯಲ್ ಸಿಟಿ ಲೇಔಟ್ ಪ್ರಾಂಗಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಗಿಡನೆಡುವ ಕಾರ್ಯಕ್ರಮ ನಡೆಯಿತು. ಉಪಾಧ್ಯಕ್ಷ ಅಮಿತ್ ಚೌಹಾನ್, ಮಹಿಳಾ ಘಟಕದ ಅಧ್ಯಕ್ಷೆ ಶರ್ಮಿಲಾ ಧೋಕ್ಕಾ, ಆರ್ಕಿಟೆಕ್ಟ್ ರಾಜೇಶ್ ಸಂಚೆತಿ, ಸಂಘಟನೆಯ ರಾಜ್ಯ ಮುಖ್ಯ ಕಾರ್ಯದರ್ಶಿ ಪ್ರಕಾಶ ಗುಲೇಚಾ ಮತ್ತು ರಾಯಲ್ ಸಿಟಿ ಲೇಔಟ್‌ನ ಹಿರಿಯ ಸದಸ್ಯ ಬಿಮಲ್ ಜೈನ್, ಮುಖ್ಯ ಕಾರ್ಯದರ್ಶಿ ದೀಪಕ್ ಬೋಹ್ರಾ, ಕಾರ್ಯಕ್ರಮ ನಿರ್ದೇಶಕರು ಹಾಗೂ ಉಪಾಧ್ಯಕ್ಷರಾದ ನೇಮಿಚಂದ್ ಬಡೋಲಾ, ಖಜಾಂಚಿ ಮನೋಹರ್ ಸಾಂಖಲಾ ಮತ್ತು ಮಹಿಳಾ ಘಟಕದ ಕಾರ್ಯದರ್ಶಿ ಸೀಮಾ ಬೋಹ್ರಾ, ಕುಶಲ್ ಪಾಲರೇಚಾ, ಕಾರ್ಯದರ್ಶಿ ರಾಜೇಂದ್ರ ದೇಶರಲಾ, ನವರತ್ನಮಲ್ ಪಿತಲಿಯಾ, ಗೌತಮ್ ಗಾಂಧಿ, ದಿನೇಶ್ ಬೋಹ್ರಾ, ಮಹಾವೀರ್ ಧೋಕ್ಕಾ, ರಾಜೇಶ್ ಸಿಂಗ್, ಕೈಲಾಶ್ ಭಂಡಾರಿ, ಸ್ವಾತಿ ಜೈನ್, ರೇಖಾ ಮುಠಾ, ಅನಿತಾ ಗಾಡಿಯಾ, ಸುನಿತಾ ಬಡೋಲಾ, ಸಂಗೀತಾ ಗುಲೇಚಾ ಉಪಸ್ಥಿತರಿದ್ದರು.

ಮೆಟ್ರಿಕ್ ನಂತರದ ಹಾಸ್ಟೆಲ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಜೂ.24– ನಂಜನಗೂಡು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಪಿಯುಸಿ, ಐ.ಟಿ.ಐ ಮತ್ತು ಡಿಪ್ಲೊಮಾ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ 8050770004 ಮತ್ತು 8050770005 ಸಂಪರ್ಕಿಸಬಹುದು.

ದೇಶ – ವಿದೇಶ

ಇರಾನ್ ಮೇಲೆ ಮತ್ತೆ ದಾಳಿಗೆ ಇಸ್ರೇಲ್ ಆದೇಶ: ಹಿಂದೆ ಸರಿಯುವಂತೆ ಟ್ರಂಪ್ ತಾಕೀತು




ಟೆಲ್ ಅವಿವ್: ಇಸ್ರೇಲ್ ಜೊತೆಗಿನ ಕದನ ವಿರಾಮ ಉಲ್ಲಂಘನೆಗೆ ಇರಾನ್‌ಗೆ ಬಲವಾಗಿ ಪ್ರತಿಕ್ರಿಯಿಸುವಂತೆ ದೇಶದ ಸೇನೆಗೆ ಆದೇಶಿಸಿರುವುದಾಗಿ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಹೇಳಿದ್ದಾರೆ. ಇರಾನ್‌ನಿಂದ ಇಸ್ರೇಲ್ ಕಡೆಗೆ ಕ್ಷಿಪಣಿ ಉಡಾವಣೆಯನ್ನು ಪತ್ತೆಹಚ್ಚಲಾಗಿದೆ ಎಂದು ಸೇನೆಯು ಪ್ರಕಟಿಸಿದ ನಂತರ ಈ ನಿರ್ದೇಶನ ನೀಡಲಾಯಿತು ಎಂದು ಹೇಳಿದ್ದಾರೆ. ಇಸ್ರೇಲ್ ಮತ್ತು ಇರಾನ್ ಮಧ್ಯೆ ಕದನ ವಿರಾಮ ಜಾರಿಯಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದರು. ಯುದ್ಧ ವಿರಾಮ ಘೋಷಣೆಯ ಬೆನ್ನಲ್ಲೇ ಇರಾನ್ ಅದನ್ನು ಉಲ್ಲಂಘಿಸಿದೆ ಎಂದು ಆರೋಪಿಸಿ ಇಸ್ರೇಲ್ ಮರು ಯುದ್ಧಕ್ಕೆ ಮುಂದಾಗಿದೆ. ಟೆಹರಾನ್ ಮೇಲೆ ಹೆಚ್ಚಿನ ತೀವ್ರತೆಯ ಕಾರ್ಯಾಚರಣೆಗಳನ್ನು ನಡೆಸಲು ಸೇನೆಗೆ ಈಗ ಸೂಚನೆ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಈ ಮಧ್ಯೆ ಇರಾನ್ ಮೇಲೆ ಬಾಂಬ್ ದಾಳಿ ನಡೆಸದಂತೆ ಇಸ್ರೇಲ್‌ಗೆ ತಮ್ಮ ಟ್ರುತ್ ಸೋಶಿಯಲ್ ಪೋಸ್ಟ್ ಮೂಲಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಾಕೀತು ಮಾಡಿದ್ದಾರೆ.

ಜುಲೈ 1ರಿಂದ ರೈಲು ಪ್ರಯಾಣ ದರದಲ್ಲಿ ಅಲ್ಪ ಏರಿಕೆ



ನವದೆಹಲಿ: ಭಾರತೀಯ ರೈಲ್ವೆಯು ಜುಲೈ 1ರಿಂದ ಜಾರಿಗೆ ಬರುವಂತೆ ಎಸಿ ಮತ್ತು ನಾನ್ ಎಸಿ, ಎಕ್ಸ್‌ಪ್ರೆಸ್ ಮತ್ತು ದ್ವಿತೀಯ ದರ್ಜೆಯ ರೈಲ್ವೆ ಟಿಕೆಟ್‌ಗಳ ದರದಲ್ಲಿ ಅಲ್ಪ ಏರಿಕೆ ಮಾಡಲು ಸಜ್ಜಾಗಿದೆ. ಪ್ರಸ್ತಾವನೆಯ ಪ್ರಕಾರ, ಎಸಿ ಅಲ್ಲದ ಮತ್ತು ಎಕ್ಸ್‌ಪ್ರೆಸ್ ರೈಲುಗಳ ದರದಲ್ಲಿ ಪ್ರತಿ ಕಿ.ಮೀ.ಗೆ ಕನಿಷ್ಠ 1 ಪೈಸೆ ಹೆಚ್ಚಳ ಮತ್ತು ಎಸಿ ದರ್ಜೆಯ ಟಿಕೆಟ್‌ಗಳ ದರದಲ್ಲಿ ಪ್ರತಿ ಕಿ.ಮೀ.ಗೆ 2 ಪೈಸೆ ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ. ಸಬ್–ಅರ್ಬನ್ ರೈಲು ಪ್ರಯಾಣ ದರ ಮತ್ತು ಮಾಸಿಕ ಪಾಸ್ ದರದಲ್ಲಿ ಯಾವುದೇ ಹೆಚ್ಚಳವಿಲ್ಲ. 2ನೇ ದರ್ಜೆಯ ಸಾಮಾನ್ಯ ಟಿಕೆಟ್ ದರದಲ್ಲಿ 500 ಕಿ.ಮೀವರೆಗೆ ಯಾವುದೇ ಹೆಚ್ಚಳ ಇರುವುದಿಲ್ಲ. 500 ಕಿ.ಮೀ ನಂತರ, ಎರಡನೇ ದರ್ಜೆಯ ಸಾಮಾನ್ಯ ಟಿಕೆಟ್ ದರದಲ್ಲಿ ಪ್ರತಿ ಕಿ.ಮೀ.ಗೆ ಅರ್ಧ ಪೈಸೆ ಹೆಚ್ಚಳವಾಗಲಿದೆ ಎಂದು ರೈಲ್ವೆ ಅಧಿಕಾರಿ ತಿಳಿಸಿದ್ದಾರೆ. ಪ್ರಯಾಣಿಕರಿಗೆ, ವಿಶೇಷವಾಗಿ ಸಾಮಾನ್ಯ ಪ್ರಯಾಣಿಕರಿಗೆ ಮತ್ತು ಕಡಿಮೆ ದೂರ ಪ್ರಯಾಣಿಸುವವರಿಗೆ ಹೊರೆಯಾಗದಂತೆ ಕಾರ್ಯಾಚರಣೆ ವೆಚ್ಚವನ್ನು ನಿರ್ವಹಿಸಲು ಭಾರತೀಯ ರೈಲ್ವೆಯ ನಿರಂತರ ಪ್ರಯತ್ನಗಳ ಭಾಗವಾಗಿ ಈ ಪರಿಷ್ಕರಣೆ ಮಾಡಲಾಗುತ್ತಿದೆ.

ಹಾರ್ವರ್ಡ್ ವಿವಿ ಪರ ಬಾಸ್ಟನ್‌ನ ಫೆಡರಲ್ ನ್ಯಾಯಾಧೀಶರ ತೀರ್ಪು



ಬೈರೂತ್: ಬಾಸ್ಟನ್: ವಿದೇಶಿ ವಿದ್ಯಾರ್ಥಿಗಳು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವುದನ್ನು ನಿರ್ಬಂಧಿಸುವ ಡೊನಾಲ್ಡ್ ಟ್ರಂಪ್ ಆಡಳಿತದ ನಿರ್ಧಾರಕ್ಕೆ ಬಾಸ್ಟನ್‌ನ ಫೆಡರಲ್ ನ್ಯಾಯಾಧೀಶರು ಸೋಮವಾರ ತಡೆ ನೀಡಿದ್ದಾರೆ. ಅಮೆರಿಕದ ಜಿಲ್ಲಾ ನ್ಯಾಯಾಧೀಶರಾದ ಆಯಲಿಸನ್ ಬರೋಸ್ ಅವರು ಇದಕ್ಕೆ ಸಂಬಂಧಿಸಿದ ಆದೇಶ ಹೊರಡಿಸಿದ್ದಾರೆ. ವಿದೇಶಿ ವಿದ್ಯಾರ್ಥಿಗಳನ್ನು ನಿರ್ಬಂಧಿಸುವ ಟ್ರಂಪ್ ಆಡಳಿತದ ನಿರ್ಧಾರವನ್ನು ಪ್ರಶ್ನಿಸಿ ಹಾರ್ವರ್ಡ್ ವಿ.ವಿ ಆಡಳಿತ ಮಂಡಳಿ ಬಾಸ್ಟನ್ ಫೆಡರಲ್ ನ್ಯಾಯಾಲಯದ ಮೊರೆ ಹೋಗಿತ್ತು.

ಶ್ವೇತಭವನದ ರಾಜಕೀಯ ಬೇಡಿಕೆಗಳನ್ನು ತಿರಸ್ಕರಿಸಿದ್ದಕ್ಕೆ ಕೈಗೊಂಡ ಪ್ರತೀಕಾರದ ಕ್ರಮ ಇದಾಗಿದೆ ಎಂದು ದೂರಿನಲ್ಲಿ ಆರೋಪಿಸಿತ್ತು. ಹಾರ್ವರ್ಡ್ ವಿ.ವಿ ಯಲ್ಲಿ ಹಾಲಿ ಶೈಕ್ಷಣಿಕ ವರ್ಷದಲ್ಲಿ ವಿದೇಶಗಳ 6,800ಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಮೋಸ್ಟ್ ವಾಂಟೆಡ್ ಗ್ಯಾಂಗ್‌ಸ್ಟರ್ ರೂಮಿ ವೊಹ್ರಾ ಎನ್‌ಕೌಂಟರ್



ದೆಹಲಿ: ಹಲವು ಕೊಲೆ, ಸುಲಿಗೆ ಪ್ರಕರಣಗಳಲ್ಲಿ ದೆಹಲಿ, ಹರಿಯಾಣ ಪೊಲೀಸರಿಗೆ ಬೇಕಾಗಿದ್ದ ಮೋಸ್ಟ್ ವಾಂಟೆಡ್ ಗ್ಯಾಂಗ್‌ಸ್ಟರ್ ರೂಮಿ ವೊಹ್ರಾ(30) ಎನ್‌ಕೌಂಟರ್‌ನಲ್ಲಿ ಹತನಾಗಿದ್ದಾನೆ.

ದೆಹಲಿ–ಹರಿಯಾಣ ಗಡಿಯ ಯಮುನಾನಗರ್ ಬಳಿ ಎನ್‌ಕೌಂಟರ್ ನಡೆದಿದೆ. ಗ್ಯಾಂಗ್‌ಸ್ಟರ್ ಕಾಲಾ ರಾಣಾನ ಸಹವರ್ತಿಯಾಗಿದ್ದ ರೂಮಿ ವೊಹ್ರಾ ಯಮುನಾನಗರ್, ಕುರುಕ್ಷೇತ್ರ, ದೆಹಲಿ ಸೇರಿದಂತೆ ಹಲವು ಕಡೆ ಆರು ಕೊಲೆ ಮಾಡಿದ ಪ್ರಕರಣಗಳನ್ನು ಎದುರಿಸುತ್ತಿದ್ದ. ಅಲ್ಲದೇ ಈತನ ವಿರುದ್ಧ ಶಸ್ತಾಸ್ತ್ರ ಕಾಯ್ದೆ ಪ್ರಕರಣಗಳೂ ದಾಖಲಾಗಿದ್ದವು ಎಂದು ದೆಹಲಿ ಪೊಲೀಸ್ ವಿಶೇಷ ಘಟಕದ ಕಮಿಷನರ್ ಪ್ರಮೋದ್ ಸಿಂಗ್ ಕುಶ್ವಾ ತಿಳಿಸಿದ್ದಾರೆ. ರೂಮಿ ವೊಹ್ರಾ ಯಮುನಾನಗರ ಬಳಿ ಇದ್ದಾನೆ ಎಂಬ ಸುಳಿವು ಆಧರಿಸಿ ಆತನ ಬಂಧನಕ್ಕೆ ಹರಿಯಾಣ ಪೊಲೀಸ್ ಹಾಗೂ ದೆಹಲಿ ಪೊಲೀಸ್ ಜಂಟಿಯಾಗಿ ಕಾರ್ಯಾಚರಣೆಗೆ ಇಳಿದಿದ್ದವು. ಈ ವೇಳೆ ಆತ ಪೊಲೀಸರ ಮೇಲೆ ಗುಂಡು ಹಾರಿಸಿ ತಪ್ಪಿಸಿಕೊಳ್ಳಲು ನೋಡಿದ್ದ. ಪ್ರತಿ ದಾಳಿಯಲ್ಲಿ ಆತ ಹತ್ಯೆಯಾಗಿದ್ದಾನೆ ಎಂದು ಅವರು ವಿವರಿಸಿದ್ದಾರೆ.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 75 ಪೈಸೆ ಜಿಗಿತ

ಮುಂಬೈ, ಜೂ.24– ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನ ತೀವ್ರತೆ ಕಡಿಮೆಯಾಗುವ ಭರವಸೆ ಮೂಡಿರುವ ಪರಿಣಾಮವಾಗಿ, ಡಾಲರ್ ಮೌಲ್ಯ ಮತ್ತು ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಕಡಿಮೆಯಾಗಿದೆ. ಇದರಿಂದಾಗಿ, ಮಂಗಳವಾರ ನಡೆದ ವಹಿವಾಟಿನಲ್ಲಿ ಭಾರತದ ರೂಪಾಯಿ ಮೌಲ್ಯ 75 ಪೈಸೆ ಏರಿಕೆಯಾಗಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 86.03 ಆಗಿದೆ

ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆ ಸಹ ರೂಪಾಯಿ ಮೌಲ್ಯ ಹೆಚ್ಚಳವಾಗಲು ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 3.20ರಷ್ಟು ಇಳಿಕೆಯಾಗಿದ್ದು, ಪ್ರತೀ ಬ್ಯಾರೆಲ್‌ಗೆ 69.13 ಡಾಲರ್ ಆಗಿದೆ. ಸೋಮವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 23 ಪೈಸೆ ಇಳಿಕೆಯಾಗಿತ್ತು.

ಸೂಚ್ಯಂಕ ಏರಿಕೆ: ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 158 ಅಂಶ ಏರಿಕೆಯಾಗಿ, 82,055ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ನಡುವೆ 1,121 ಅಂಶ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 72 ಅಂಶ ಹೆಚ್ಚಳವಾಗಿ, 25,044ಕ್ಕೆ ಕೊನೆಗೊಂಡಿತು. ಆರಂಭಿಕ ವಹಿವಾಟಿನಲ್ಲಿ ದೇಶದ ಷೇರು ಸೂಚ್ಯಂಕಗಳು ಏರಿಕೆ ಕಂಡಿದ್ದವು. ಆದರೆ, ಇರಾನ್ ಮತ್ತು ಇಸ್ರೇಲ್ ನಡುವೆ ಕದನ ವಿರಾಮ ಉಲ್ಲಂಘನೆ ಆಗಿದೆ ಎಂಬ ವರದಿಗಳಿಂದಾಗಿ ಹೂಡಿಕೆದಾರರು ಲಾಭ ಗಳಿಕೆಗಾಗಿ ಷೇರುಗಳನ್ನು ಮಾರಾಟಕ್ಕೆ ಮುಂದಾದರು.

ಮೈಸೂರು ಮಿತ್ರ

ಕನಿಷ್ಟ ವೇತನಕ್ಕೆ ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರ ಸಂಘ ಪ್ರತಿಭಟನೆ



ಕನಿಷ್ಟ ವೇತನಕ್ಕೆ ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಘಟಕ ಪ್ರತಿಭಟನೆ ನಡೆಸಿತು.

ಮಡಿಕೇರಿ, ಜೂ.24– ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ವೈಜ್ಞಾನಿಕವಾದ ಕನಿಷ್ಟ ವೇತನವನ್ನು ನಿಗದಿಪಡಿಸಿ ಜಾರಿಗೊಳಿಸಬೇಕೆಂದು ಆಗ್ರಹಿಸಿ, ಕಾರ್ಮಿಕ ಕಾನೂನುಗಳ ತಿದ್ದುಪಡಿಯನ್ನು ವಿರೋಧಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಪಿ.ಆರ್.ಭರತ್ ನೇತೃತ್ವದಲ್ಲಿ ಸಂಘಟನೆಯ ಪದಾಧಿಕಾರಿಗಳು ಮತ್ತು ಸದಸ್ಯರು, ಘೋಷಣೆ ಕೂಗುತ್ತಾ ಪ್ರತಿಭಟನೆ ನಡೆಸಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು. ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ ರಾಜ್ಯಾದ್ಯಂತ ಮುಷ್ಕರ ಹಮ್ಮಿಕೊಳ್ಳಲಾಗಿದೆ. ಹಲವಾರು ವರ್ಷಗಳಿಂದ ಗ್ರಾಮ ಪಂಚಾಯಿತಿಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಟ ವೇತನ ಪಾವತಿ ಯಾಗುತ್ತಿಲ್ಲ. ಪ್ರಸ್ತುತ ಪಂಚಾಯಿತಿಗಳಲ್ಲಿ ನೌಕರರು 'ಜೀತದಾಳು' ರೀತಿ ಕಾರ್ಯನಿರ್ವಹಿಸುತ್ತಿರುವುದಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಕನಿಷ್ಟ ವೇತನಕ್ಕೆ ಆಗ್ರಹ: ನ್ಯಾಯಾಲಯದ ಸೂಚನೆಗಳಂತೆ ಗ್ರಾ.ಪಂ.ಗಳ ಕರ ವಸೂಲಿಗಾರ, ಗುಮಾಸ್ತ, ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ಕನಿಷ್ಟ 38 ಸಾವಿರ ರೂ., ವಾಟರ್‌ಮ್ಯಾನ್, ಪಂಪ್ ಆಪರೇಟರ್ ಮತ್ತು ಮೆಕ್ಯಾನಿಕ್ ಹುದ್ದೆಗಳನ್ನು ನಿರ್ವಹಿಸುವವರಿಗೆ 33 ಸಾವಿರ ರೂ., ಅಟೆಂಡರ್, ಜವಾನರಿಗೆ 28,750 ರೂ., ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವವರಿಗೆ 25 ಸಾವಿರ ರೂ. ಕನಿಷ್ಠ ವೇತನವನ್ನು ನಿಗದಿಪಡಿಸ ಬೇಕೆಂದು ಭರತ್ ಆಗ್ರಹಿಸಿದರು. ಗ್ರಾ. ಪಂ.ಗಳಲ್ಲಿ ದುಡಿಯುವ ಸಿಬ್ಬಂದಿಗಳಿಗೆ ಸೇವಾ ಹಿರಿತನದ ಮಾನ್ಯತೆ ನೀಡಿ ಮೂಲ ವೇತನಕ್ಕೆ ಶೇ.2ರಷ್ಟು ಹೆಚ್ಚುವರಿ ಭತ್ಯೆಯನ್ನು ಪ್ರತಿ ವರ್ಷ ನೀಡಬೇಕೆಂದು ಒತ್ತಾಯಿಸಿದರು. ಸಂಘಟನೆಯ ಪ್ರಮುಖರು ಜಿಲ್ಲಾ ಕಾರ್ಮಿಕ ಅಧಿಕಾರಿ ಕಾವೇರಿ ಮೂಲಕ ಕಾರ್ಮಿಕ ಸಚಿವರು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಮನವಿಯನ್ನು ಕಳಿಸಿದರು.

ಪ್ರತಿಭಟನೆಯಲ್ಲಿ ಗ್ರಾಮ ಪಂಚಾಯಿತಿ ನೌಕರರ ಸಂಘದ ಜಿಲ್ಲಾ ಉಪಾಧ್ಯಕ್ಷರುಗಳಾದ ಮಹದೇವ್, ಸಿ.ವಿ.ದಿಲೀಪ್, ಸದಸ್ಯರುಗಳಾದ ಟಿ.ಕೆ.ಮೂರ್ತಿ, ಮಹಲಿಂಗ, ಎಂ.ಎಂ.ಸೌಮ್ಯ, ಎಂ.ಎಸ್.ಸೌಮ್ಯ, ಶಿವಭಾಗ್ಯ, ಕೆ.ಬಿ.ಸತೀಶ್ ಸೇರಿದಂತೆ ಜಿಲ್ಲೆಯ ವಿವಿಧೆಡೆಗಳಲ್ಲಿನ ಪಂಚಾಯಿತಿ ನೌಕರರು ಪಾಲ್ಗೊಂಡಿದ್ದರು.

ಜಿಲ್ಲಾ ಜಾಗೃತಿ ಉಸ್ತುವಾರಿ ಸಮಿತಿ ಸಭೆ



ಮಡಿಕೇರಿಯಲ್ಲಿ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆ ನಡೆಯಿತು.

ಮಡಿಕೇರಿ, ಜೂ.24– ಅನುಸೂಚಿತ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮ ರೀತಿಯ ರಚಿಸಲಾಗಿರುವ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯು ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಎಚ್.ಎಸ್.ಮುತ್ತಪ್ಪ ಮಾತನಾಡಿ, ಹೊದ್ದೂರು, ಹೊದವಾಡದ ಕಾವೇರಿ ನದಿ ಪಾತ್ರದ ಪ್ರವಾಹ ಪೀಡಿತ ಪ್ರದೇಶದಲ್ಲಿ ವಾಸ ಮಾಡುತ್ತಿರುವ ಪರಿಶಿಷ್ಟರಿಗೆ ಶಾಶ್ವತ ನೆಲೆ ಕಲ್ಪಿಸಬೇಕು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಕುಟುಂಬಗಳಿಗೆ ನಿವೇಶನ ಕಲ್ಪಿಸುವುದರ ಜೊತೆಗೆ ಮನೆ ನಿರ್ಮಿಸಿಕೊಡುವಂತಾಗಬೇಕು ಎಂದು ಹೇಳಿದಾಗ, ಆ ಪ್ರದೇಶದಲ್ಲಿನ ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್ ಉತ್ತರಿಸಿದರು.

ಮತ್ತೊಬ್ಬ ಸದಸ್ಯ ಪಿ.ಪಿ.ಸುಕುಮಾರ್ ಹಾಗೂ ಜಾಯ್ಸ್ ಮೆನೇಜಸ್ ಮಾತನಾಡಿ, ಬಾಳೆಗುಂಡಿ ವಾಲ್ನೂರು ತ್ಯಾಗತ್ತೂರು ವಿವಿಧ ಹಾಡಿಗಳಲ್ಲಿ ವಾಸಿ ಸುವ ಪರಿಶಿಷ್ಟ ವರ್ಗದ ಜನರು ಆಧಾರ್ ಕಾರ್ಡ್ ಇಲ್ಲದೆ ಪಡಿತರ ಚೀಟಿ ಪಡೆಯಲು ಸಾಧ್ಯವಾಗಿಲ್ಲ, ಆದ್ದರಿಂದ ಆಧಾರ್ ಇಲ್ಲದ ಕುಟುಂಬಗಳನ್ನು ಗುರ್ತಿಸಿ ಆಧಾರ್ ಕಾರ್ಡ್ ಮಾಡಿಸುವಂತಾಗಬೇಕು ಎಂದರು. ಹಾಗೆಯೇ ಉನ್ನತ ವ್ಯಾಸಂಗ ಮಾಡಿದ ಪೌರಕಾರ್ಮಿಕರ ಮಕ್ಕಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸುವಂತಾಗಬೇಕು ಎಂದು ಅವರು ತಿಳಿಸಿದರು.

ಸುಂಟಿಕೊಪ್ಪ ಹೋಬಳಿ ಕೇಂದ್ರದಲ್ಲಿ ಪೌರಕಾರ್ಮಿಕರಿಗೆ ಸ್ವಂತ ನಿವೇಶನ ಇಲ್ಲದೆ ಗುಡಿಸಿಲಿನಲ್ಲಿ ವಾಸ ಮಾಡುತ್ತಿದ್ದು, ಇವರಿಗೆ ಜಾಗ ಕಾಯ್ದಿರಿಸಿ ಮನೆ ನಿರ್ಮಿಸಿಕೊಡುವಂತಾಗಬೇಕು ಎಂದು ರಂಗಸ್ವಾಮಿ ಹೇಳಿದಾಗ ಅಲ್ಲಿ ಸರ್ಕಾರಿ ಭೂಮಿ ಸಿಗುವುದು ಕಷ್ಟವಾಗಿದ್ದು, ಹತ್ತಿರದಲ್ಲಿ ಪೈಸಾರಿ ಜಾಗ ಇದ್ದಲ್ಲಿ ಗುರುತಿಸುವಂತೆ ತಹಶೀಲ್ದಾರರಿಗೆ ಜಿಲ್ಲಾಧಿಕಾರಿ ನಿರ್ದೇಶನ ನೀಡಿದರು.

ಪರಿಶಿಷ್ಟರಿಗಾಗಿ ಸರ್ಕಾರದಿಂದ ಹಲವು ಸೌಲಭ್ಯಗಳಿದ್ದು, ಅವುಗಳನ್ನು ತಲುಪಿಸುವಂತಾಗಬೇಕು. ಸರ್ಕಾರದಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಅರ್ಹರಿಗೆ ಸವಲತ್ತು ತಲುಪಿಸುವಂತಾಗಬೇಕು ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ಸೂಚಿಸಿದರು.

ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಬಾರಿಕೆ ದಿನೇಶ್ ಕುಮಾರ್, ಉಪವಿಭಾಗಾಧಿಕಾರಿ ವಿನಾಯಕ ನರ್ವಡೆ, ಸಮಿತಿ ಸದಸ್ಯರಾದ ಪರಮೇಶ್, ವಿಜಯ ಕುಮಾರ್, ಪುಟ್ಟಮ್ಮ, ನಗರಾಭಿವೃದ್ಧಿ ಯೋಜನಾ ಶಾಖೆಯ ಯೋಜನಾ ನಿರ್ದೇಶಕ ಬಿ. ಬಸಪ್ಪ, ತಹಶೀಲ್ದಾರ್ ಪ್ರವೀಣ್‌ಕುಮಾರ್, ಕೃಷ್ಣಮೂರ್ತಿ, ಕಿರಣ್ ಗೌರಯ್ಯ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿಗಳಾದ ಅಪ್ಪಣ್ಣ, ಪರಮೇಶ, ಪುರಸಭೆ ಮುಖ್ಯಾಧಿಕಾರಿಗಳಾದ ಗಿರೀಶ್, ನಾಚಪ್ಪ, ಸತೀಶ್ ಮೊದಲಾದವರಿದ್ದರು.


ಪೊಲೀಸ್ ಕ್ವಾಟ್ರರ್ಸ್ ಮನೆಗಳಲ್ಲಿ ಚಿನ್ನಾಭರಣ ದೋಚಿದ ಖದೀಮರು

ಮಡಿಕೇರಿ, ಜೂ.24– ಜನರು ತಮ್ಮ ಮನೆಯಲ್ಲಿ ಕಳ್ಳತನ ನಡೆದಾಗ ಪೊಲೀಸ್ ಠಾಣೆ ಮೆಟ್ಟಿಲೇರಿ ದೂರು ಕೊಡುವುದನ್ನು ನೋಡಿದ್ದೇವೆ. ಆದರೆ ಇಲ್ಲಿ ಕಳ್ಳರು ಪೊಲೀಸರ ಮನೆಯನ್ನೇ ಟಾರ್ಗೆಟ್ ಮಾಡಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ದೋಚುವ ಮೂಲಕ ಪೋಲೀಸರ ಕಾರ್ಯ ವೈಖರಿಗೆ ಸವಾಲೊಡ್ಡಿದ್ದಾರೆ.

ಮೂರು ದಿನಗಳ ಹಿಂದೆ ನಗರದ ಪೊಲೀಸ್ ಕ್ವಾಟ್ರರ್ಸ್‌ನಲ್ಲಿರುವ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಮನೆಗೆ ನುಗ್ಗಿರುವ ಕಳ್ಳರು ಬೆಲೆ ಬಾಳುವ ವಸ್ತುಗಳನ್ನು ನಗದು, ಚಿನ್ನಾಭರಣ ದೋಚಿ ಪರಾರಿಯಾಗಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೋಲೀಸರು ಕಳ್ಳರ ತೀವ್ರ ಶೋಧನೆಯಲ್ಲಿ ತೊಡಗಿದ್ದಾರೆ. ಸಂಪಾಜೆ, ಸುಳ್ಯ ಭಾಗದ ಕಡೆ ಪರಾರಿಯಾಗಿರಬಹುದೆಂದು ಪೊಲೀಸರು ಆ ಪ್ರದೇಶಗಳಲ್ಲಿ ತೀವ್ರ ಹುಡುಕಾಟ ನಡೆಸುತ್ತಿದ್ದಾರೆ, ಸಂಪಾಜೆ, ಸುಳ್ಯ ಪಟ್ಟಣಗಳಲ್ಲಿರುವ ಸಿಸಿಟಿವಿ ಫುಟೇಜ್‌ಗಳನ್ನು ತೆಗೆದುಕೊಂಡು ಪೋಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

ಕಳ್ಳರ ತೀವ್ರ ಶೋಧನೆಯಲ್ಲಿ ತೊಡಗಿದ್ದು, ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸುವುದಾಗಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಮೈಸೂರು ಮಿತ್ರನಿಗೆ ತಿಳಿಸಿದರು.

ವಿ.ಪೇಟೆ ಪುರಸಭೆ ಕಚೇರಿಯ ಮೇಲ್ಚಾವಣಿಯ ಹೆಂಚು ಕುಸಿತ



ಮಡಿಕೇರಿ, ಜೂ.24– ನಿರಂತರವಾಗಿ ಸುರಿಯುತ್ತಿರುವ ಮಳೆಗೆ ವಿರಾಜಪೇಟೆ ಪುರಸಭೆ ಕಚೇರಿಯ ಮೇಲ್ಚಾವಣಿಯ ಹೆಂಚು ಬಿದ್ದು, ಅದೃಷ್ಟವಶಾತ್ ಇಬ್ಬರು ಸಿಬ್ಬಂದಿಗಳು ಪ್ರಾಣಾಪಾಯದಿಂದ ಪಾರಾದ ಘಟನೆ ನಡೆದಿದೆ.

ಪುರಸಭೆ ಕಚೇರಿ ಕಟ್ಟಡ ದುರಸ್ಥಿ ಕಾಣದೇ ಹಲವು ಸಮಯಗಳೇ ಕಳೆದಿದ್ದು, ಸುರಿಯುತ್ತಿರುವ ಮಳೆಯಿಂದ ಪುರಸಭೆಯ ಕಚೇರಿ ಕಟ್ಟಡದ ಹೆಂಚುಗಳು ಜಾರುತ್ತಿವೆ. ಕಟ್ಟಡದ ಮೇಲ್ಚಾವಣಿ ಕೆಳಗೆ ಅಳವಡಿಸಿದ ಶೀಟ್‌ಗಳು ಕೂಡ ಮಳೆ ನೀರಿನ ತೇವಾಂಶದಿಂದ ನೆನೆದು ಹೋಗಿದೆ. ಇಂದು ಕಚೇರಿ ಅವಧಿಯಲ್ಲೇ ಮೇಲ್ಚಾವಣಿಯ ಹೆಂಚು ಕಳಚಿ ಕೆಳಗೆ ಬಿದ್ದಿದ್ದು, ಅಲ್ಲಿದ್ದ ಇಬ್ಬರು ಸಿಬ್ಬಂದಿಗಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಘಟನೆ ನಡೆದ ಬಳಿಕ ಕಟ್ಟಡದ ಮೇಲ್ಚಾವಣಿಗೆ ಪೌರ ಕಾರ್ಮಿಕರು ಟಾರ್ಪಾಲ್ ಹೊದಿಕೆ ಹಾಸುವ ಮೂಲಕ ತಾತ್ಕಾಲಿಕ ದುರಸ್ಥಿ ಕಾರ್ಯ ಮಾಡಲಾಗಿದೆ.

ನಾಪೋಕ್ಲು: ಮಳೆ ಬಿರುಸಿಗೆ ಹಾರಿಹೋದ ಮನೆಯ ಶೀಟ್‌ಗಳು



ಬಾವಲಿ ಗ್ರಾಮದ ಪಾಂಡಾಂಡ ಕುಟುಂಬಸ್ಥರ ಐನ್ ಮನೆ ಬಿರುಸಿನ ಮಳೆಯಿಂದಾಗಿ ಪೂರ್ಣ ಹಾನಿಯಾಗಿದೆ.

ಪಾಂಡಾಂಡ ಕುಟುಂಬಸ್ಥರ ಐನ್ ಮನೆಗೆ ಪೂರ್ಣ ಹಾನಿ

ನಾಪೋಕ್ಲು, ಜೂ.24–ಹೋಬಳಿ ವ್ಯಾಪ್ತಿಯಲ್ಲಿ ಬಿರುಸಿನ ಮಳೆಯೊಂದಿಗೆ ಬಲವಾದ ಗಾಳಿಯೂ ಬೀಸಿ ಜನಜೀವನ ಅಸ್ತವ್ಯಸ್ತಗೊಂಡಿದೆ. ರಭಸದ ಗಾಳಿಯಿಂದ ಹಲವೆಡೆ ಮನೆ, ಶೆಡ್‌ಗಳಿಗೆ ಹಾನಿಯಾಗಿದೆ. ಮನೆಗೆ ಹಾಸಿದ್ದ ಶೀಟ್‌ಗಳು ಹಾರಿ ಹೋಗಿ ನಷ್ಟ ಸಂಭವಿಸಿದೆ.

ಕರಡ ಗ್ರಾಮದ ಟಿ.ಡಿ ಚಿಣ್ಣಪ್ಪ ಎಂಬವರ ವಾಸದ ಮನೆಯ ಪಕ್ಕದಲ್ಲಿದ್ದ ಶೌಚಾಲಯ ಕುಸಿದು ಬಿದ್ದು ನಷ್ಟ ಸಂಭವಿಸಿದೆ. ಕೊಳಕೇರಿ ಗ್ರಾಮದ ತಟ್ಟಂಡ ವಿಮಲಾರ ಮನೆಯ ಮೇಲ್ಚಾವಣಿಗೆ ಹಾನಿಯಾಗಿದೆ. ಬಾವಲಿ ಗ್ರಾಮದ ಪಾಂಡಾಂಡ ಕುಟುಂಬಸ್ಥರ ಐನ್ ಮನೆ ಕುಸಿದು ಬಿದ್ದು ಪೂರ್ಣ ಹಾನಿಯಾಗಿರುತ್ತದೆ. ಐನ್ ಮನೆಯಲ್ಲಿ ಯಾರು ವಾಸ ಇಲ್ಲದಿದ್ದುದರಿಂದ ಸಮಸ್ಯೆ ಉಂಟಾಗಿಲ್ಲ. ಸ್ಥಳಕ್ಕೆ ಕಂದಾಯ ಪರಿವೀಕ್ಷಕ ರವಿಕುಮಾರ್ ಹಾಗೂ ಗ್ರಾಮಲೆಕ್ಕಿಗರು, ಸಿಬ್ಬಂದಿಗಳು ತೆರಳಿ ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದರು. 2 ದಿನಗಳಿಂದ ಬಿರುಸುಗೊಂಡ ಮಳೆಯಿಂದಾಗಿ ಕಾವೇರಿ ನದಿ, ತೊರೆಗಳು ತುಂಬಿ ಹರಿಯುತ್ತಿವೆ. ಇದರಿಂದಾಗಿ ಹೋಬಳಿ ವ್ಯಾಪ್ತಿಯಲ್ಲಿ ನದಿ ದಡದಲ್ಲಿರುವ ಗದ್ದೆ ತೋಟಗಳು ಮುಳುಗಡೆಯಾಗಿ ಸಮಸ್ಯೆ ಎದುರಾಗಿದೆ. ಇಲ್ಲಿಗೆ ಸಮೀಪದ ಕಾವೇರಿ ನದಿ ಪಾತ್ರದಲ್ಲಿರುವ ಚೆರಿಯಪರಂಬುವಿನಲ್ಲಿ ಮಳೆಗಾಲದಲ್ಲಿ ಮುಳುಗಡೆಯಾಗುತ್ತಿರುವುದರಿಂದಾಗಿ ಕಂದಾಯ ಇಲಾಖೆಯ ಸೂಕ್ತ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ.

ಕಣ್ಣಿನ ತಪಾಸಣಾ ಶಿಬಿರ



ವಿರಾಜಪೇಟೆಯ ಕೊಡವ ಸಮಾಜ ಹಾಗೂ ಗೋಣಿಕೊಪ್ಪ ಲೋಪಾಮುದ್ರ ದೃಷ್ಟಿ ಕಣ್ಣಿನ ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಸಮಾಜದ ಆವರಣದಲ್ಲಿ 'ಕಣ್ಣಿನ ತಪಾಸಣೆ ಶಿಬಿರ'ವನ್ನು ಬೆಳಿಗ್ಗೆ 9.30ರಿಂದ 5 ಗಂಟೆವರೆಗೆ ಆಯೋಜಿಸಲಾಗಿತ್ತು. ಸುತ್ತಮುತ್ತಲಿನ ಗ್ರಾಮಗಳ ಜನರು ಕಣ್ಣಿನ ತಪಾಸಣೆ ಮಾಡಿಸಿಕೊಳ್ಳುತ್ತಿರುವುದು ಕಂಡು ಬಂದಿತು ಕೊಡವ ಸಮಾಜದ ಅಧ್ಯಕ್ಷ ಕುಂಬೆರ ಮನುಕುಮಾರ್, ಸಹ ಕಾರ್ಯದರ್ಶಿ ಮಳೇಟಿರ ಶ್ರೀನಿವಾಸ್ ಮತ್ತು ಆಡಳಿತ ಮಂಡಳಿ ಸದಸ್ಯರು. ಲೋಪಾಮುದ್ರ ಕಣ್ಣಿನ ಆಸ್ಪತ್ರೆಯ ವೈದ್ಯರಾದ ಡಾ. ಸೌಮ್ಯ ಗಣೇಶ್ ನಾಣಯ್ಯರ ನೇತೃತ್ವದಲ್ಲಿ ಎಂ.ಕೆ.ಹರ್ಶಿತ್, ರವಿಕುಮಾರ್ ಮತ್ತು ಸಿಬ್ಬಂದಿಗಳು ಹಾಜರಿದ್ದರು. ಕಣ್ಣಿನ ತಪಾಸಣೆಯಲ್ಲಿ ನೂರಕ್ಕೂ ಹೆಚ್ಚು ಮಂದಿ ಶಿಬಿರದ ಪ್ರಯೋಜನವನ್ನು ಪಡೆದುಕೊಂಡರು.

ಹೆಚ್ಚುವರಿ ಬಸ್ ಬಿಡಲು ಆಗ್ರಹಿಸಿ ಹೊನ್ನೂರು ಗ್ರಾಮಸ್ಥರ ಪ್ರತಿಭಟನೆ



ತಾಲೂಕಿನ ಹೊನ್ನೂರು ಗ್ರಾಮದಲ್ಲಿ ಶಾಲೆಯ ಅವಧಿಯಲ್ಲಿ ಹೆಚ್ಚುವರಿ ಬಸ್ ಬಿಡಬೇಕು ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಸೋಮವಾರ ಬಸ್ ತಡೆದು ಪ್ರತಿಭಟಿಸಿದರು.

ಯಳಂದೂರು, ಜೂ24 (ವಿನಾಗರಾಜು)– ತಾಲೂಕಿನ ಹೊನ್ನೂರು ಗ್ರಾಮದಲ್ಲಿ ಶಾಲೆ ಹಾಗೂ ಕಾಲೇಜಿಗೆ ಹೋಗುವ ಸಮಯಕ್ಕೆ ಹೆಚ್ಚುವರಿ ಬಸ್ ಬಿಡಬೇಕೆಂದು ಆಗ್ರಹಿಸಿ ಬಸ್ ತಡೆದು ವಿದ್ಯಾರ್ಥಿಗಳು ಪ್ರತಿಭಟಿಸಿದ ಘಟನೆ ನಡೆಯಿತು.

ಬೆಳಿಗ್ಗೆ ಸಂಜೆ ಕೊಳ್ಳೇಗಾಲ ಮೂಲಕ ಕಿನಕಹಳ್ಳಿ, ಬಸವಾಪುರ, ಕೆಸ್ತೂರು, ಮಲ್ಲಿಗೆಹಳ್ಳಿ ಮೂಲಕ ಬೆಳಗ್ಗೆ 8.40 ಹೊನ್ನೂರು ಗ್ರಾಮಕ್ಕೆ ಆಗಮಿಸುವ ಕೆಎಸ್‌ಆರ್‌ಟಿಸಿ ಬಸ್ ಯಳಂದೂರಿಗೆ ತೆರಳುತ್ತದೆ. ಇಲ್ಲಿಂದ 200ಕ್ಕೂ ಹೆಚ್ಚು ಶಾಲೆ, ಕಾಲೇಜು ವಿದ್ಯಾರ್ಥಿಗಳು, ಕೂಲಿ ಕಾರ್ಮಿಕರು ಸೇರಿದಂತೆ ಸಾಕಷ್ಟು ಜನರು ಕಾಯುತ್ತಿರುತ್ತಾರೆ, ಆದರೆ ಈ ಹಿಂದಿನ ಗ್ರಾಮಗಳಲ್ಲೇ ಸಾಕಷ್ಟು ಪ್ರಯಾಣಿಕರಿದ್ದು, ಮತ್ತೆ ಹೊನ್ನೂರಿನಲ್ಲಿ ಈ ಬಸ್‌ಗೆ ಹೋಗಲು ಸಾಧ್ಯವಾಗುತ್ತಿಲ್ಲ, ಡೋರ್‌ನಲ್ಲೇ ಜೋತುಬಿದ್ದು ಪ್ರಾಣಭಯದಲ್ಲೇ ಹೋಗುವ ಅನಿವಾರ್ಯತೆ ನಿತ್ಯದ ಸಮಸ್ಯೆಯಾಗಿದೆ. ಹಾಗಾಗಿ ಈ ಮಾರ್ಗವಾಗಿ ಕೂಡಲೇ ಮತ್ತೊಂದು ಬಸ್‌ನ್ನು ಬೆಳಗ್ಗೆ ಸಮಯದಲ್ಲಿ ಕಿನಕಹಳ್ಳಿ, ಕೆಸ್ತೂರು, ಹೊನ್ನೂರು ಮೂಲಕ ಯಳಂದೂರಿಗೆ ಹೋಗುವ ವ್ಯವಸ್ಥೆಯನ್ನು ಮಾಡಬೇಕೆಂದು ಆಗ್ರಹಿಸಿ ಕೆಲ ಕಾಲ ಬಸ್ ತಡೆದು ಪ್ರತಿಭಟಿಸಿದರು. ಈ ಬಗ್ಗೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಕ್ರಮ ವಹಿಸುವ ಭರವಸೆ ನೀಡಿದ ಹಿನ್ನಲೆಯಲ್ಲಿ ಪ್ರತಿಭಟನೆಯನ್ನು ಕೈ ಬಿಡಲಾಯಿತು.

ಮನು, ಕಿಶೋರ್, ಮಹೇಶ್, ಆಕಾಶ್, ಮನೋಜ್, ಮಹದೇವ ಪ್ರಸಾದ್, ಅರ್ಜುನ್, ಸಚಿನ್, ಸಂತೋಷ್ ಮೊದಲಾದವರು ಹಾಜರಿದ್ದರು.

ಅಡುಗೆ ಸಿಬ್ಬಂದಿ ದಲಿತ ಮಹಿಳೆ ಎಂಬ ಕಾರಣಕ್ಕೆ

ಮಕ್ಕಳ ಟಿಸಿ ತೆಗೆದುಕೊಳ್ಳುತ್ತಿರುವ ಆಲೂರು ಹೊಮ್ಮದ ಪೋಷಕರು

ಚಾಮರಾಜನಗರ, ಜೂ.24– ಶಾಲೆಯಲ್ಲಿ ಬಿಸಿಯೂಟದ ಮುಖ್ಯ ಅಡುಗೆ ಸಿಬ್ಬಂದಿಯಾಗಿ ದಲಿತ ಮಹಿಳೆ ಕಾರ್ಯ ನಿರ್ವಹಿಸಲು ಆಡಳಿತ ವರ್ಗ ಸಹಕರಿಸುತ್ತಿದ್ದಾರೆ ಎಂಬ ಕಾರಣಕ್ಕಾಗಿ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸದೇ ಟಿಸಿ ತೆಗೆದುಕೊಳ್ಳುತ್ತಿರುವ ವಿಚಿತ್ರ ಪ್ರಸಂಗ ತಾಲೂಕು ಆಲೂರು ಹೊಮ್ಮ ಗ್ರಾಮದಲ್ಲಿ ನಡೆದಿದೆ.

ಶಾಲೆಯಲ್ಲಿ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಅಡುಗೆ ಸಿಬ್ಬಂದಿಗಳಲ್ಲಿ ವೀರಶೈವ ಸಮುದಾಯಕ್ಕೆ ಸೇರಿದ ಮಹಿಳೆಯನ್ನು ತೆಗೆದುಹಾಕಿ ದಲಿತ ಮಹಿಳೆಯನ್ನು ಉಳಿಸಿಕೊಂಡಿರುವ ಶಾಲಾ ಆಡಳಿತ ವರ್ಗದ ನೀತಿಯನ್ನು ವಿರೋಧಿಸಿ ಪೋಷಕರು ಈ ನಿರ್ಧಾರಕ್ಕೆ ಬಂದಿದ್ದಾರೆ.

ಹೊಮ್ಮ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1 ರಿಂದ 7ನೇ ತರಗತಿಯವರೆಗೆ ಒಟ್ಟು 21 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ಈವರೆಗೆ ಇಬ್ಬರು ಅಡುಗೆ ಸಿಬ್ಬಂದಿಗಳಿದ್ದರು. ಇದರಲ್ಲಿ ಓರ್ವರು ಲಿಂಗಾಯತ ಮಹಿಳೆಯಾಗಿದ್ದು, ಇನ್ನೋರ್ವರು ದಲಿತ ಮಹಿಳೆ ಇದ್ದರು. ನಿಯಮದ ಪ್ರಕಾರ ಒಂದು ಶಾಲೆಯಲ್ಲಿ 25ಕ್ಕಿಂತ ಹೆಚ್ಚು ಮಕ್ಕಳಿದ್ದರೆ ಇಬ್ಬರು ಅಡುಗೆಯವರನ್ನು, ಅದಕ್ಕಿಂತ ಕಡಿಮೆ ಮಕ್ಕಳಿದ್ದರೆ ಒಬ್ಬರು ಅಡುಗೆಯವರನ್ನು ನೇಮಿಸಬೇಕಾಗಿದೆ.

ಈ ಶೈಕ್ಷಣಿಕ ವರ್ಷದಲ್ಲಿ ಹೊಮ್ಮ ಶಾಲೆಯಲ್ಲಿ ಮಕ್ಕಳ ಸಂಖ್ಯೆ 21ಕ್ಕೆ ಕುಸಿತವಾದ ಕಾರಣ ಇಬ್ಬರು ಅಡುಗೆಯವರಲ್ಲಿ ರೋಸ್ಟರ್ ನಿಯಮದ ಪ್ರಕಾರ ಲಿಂಗಾಯತ ಮಹಿಳೆಯನ್ನು ಬಿಡುಗಡೆ ಮಾಡಿ, 27 ವರ್ಷಗಳಿಂದ ಅಡುಗೆ ಸಹಾಯಕರಾಗಿ ಕೆಲಸ ಮಾಡುತ್ತಿರುವ ನಂಜಮ್ಮ ಎಂಬುವರನ್ನು ಅಲ್ಲಿಯೇ ಉಳಿಸಿಕೊಳ್ಳಲಾಗಿತ್ತು ಈ ಬೆಳವಣಿಗೆ ನಂತರ 21 ಮಕ್ಕಳ ಪೈಕಿ 12 ಮಂದಿ ಪೋಷಕರು ಟಿಸಿ ತೆಗೆದುಕೊಂಡು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲಿಸುತ್ತಿದ್ದಾರೆ. ಇನ್ನು 8 ಪೋಷಕರು ಟಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಓರ್ವ ವಿದ್ಯಾರ್ಥಿ ಮಾತ್ರ ಈಗ ಶಾಲೆಗೆ ಬರುತ್ತಿದ್ದಾನೆ.

ಬಿಸಿಯೂಟ ಅಡುಗೆ ಸಿಬ್ಬಂದಿ ದಲಿತರು ಎಂಬ ಕಾರಣಕ್ಕೇ ಪೋಷಕರು, ಈ ಶಾಲೆಯಿಂದ ತಮ್ಮ ಮಕ್ಕಳನ್ನು ಬಿಡಿಸಿ ಬೇರೆ ಶಾಲೆಗಳಿಗೆ ಸೇರಿಸಿದ್ದಾರೆ ಎಂದು ಮಲ್ಲಯ್ಯ 'ಮೈಸೂರು ಮಿತ್ರ' ನಿಗೆ ಹೇಳಿದರು. ಈ ಶಾಲೆಯಲ್ಲಿ ಕೇವಲ ಇಬ್ಬರು ಶಿಕ್ಷಕರಿದ್ದಾರೆ. ಪಾಠ ಪ್ರವಚನ ಸರಿಯಾಗಿ ನಡೆಯುತ್ತಿಲ್ಲ. ಈ ಮುಂಚೆ ಇದ್ದ ಇಬರೇ ಶಿಕ್ಷಕರು ಪರಸ್ಪರ ಪದೇ ಪದೇ ಜಗಳವಾಡಿಕೊಳ್ಳುತ್ತಿದ್ದರು. ಇದು ನಮ್ಮ ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬರುತ್ತಿದೆ. ಹಾಗಾಗಿ ನಾವು ನಮ್ಮ ಮಕ್ಕಳನ್ನು ಬೇರೆ ಕಡೆ ದಾಖಲಿಸುತ್ತಿದ್ದೇವೆ ಎಂದು ಪೋಷಕರು ಹೇಳುತ್ತಿದ್ದಾರೆ.

ಜಾತಿ ಕಾರಣವಲ್ಲ : ಶಾಲೆಯಿಂದ ಟಿಸಿ ತೆಗೆದುಕೊಂಡಿರುವವರಲ್ಲಿ ದಲಿತ ಸಮುದಾಯದವರೂ ಇದ್ದಾರೆ ಎಂದು ತಿಳಿಸಿದ್ದಾರೆ. ಶಾಲೆಯಲ್ಲಿ ಏರ್ಪಟ್ಟಿದ್ದ ಗೊಂದಲದ ಹಿನ್ನೆಲೆಯಲ್ಲಿ ಪೊಲೀಸ್ ಅಧಿಕಾರಿಗಳು ಸಭೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿದ್ದಾರೆ. ಮಕ್ಕಳು ಬೇರೆ ಶಾಲೆಗಳಿಗೆ ಹೋಗಲು ಅಡುಗೆಯವರ ಜಾತಿ ಕಾರಣವಲ್ಲ ಎಂಬುದು ತಿಳಿದು ಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಪ್ರತಿಕ್ರಿಯಿಸಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಪೋಷಕರನ್ನು ಕರೆಸಿ ವಿಚಾರಿಸಿದಾಗ, ಶಾಲೆಯಲ್ಲಿ ನಮ್ಮ ಮಕ್ಕಳಿಗೆ ತೃಪ್ತಿಕರ ಕಲಿಕೆ ದೊರಕುತ್ತಿಲ್ಲ ಹಾಗಾಗಿ ಬೇರೆ ಶಾಲೆಗಳಿಗೆ ಸೇರಿಸಿದ್ದೇವೆ ಎಂದು ಹೇಳಿದ್ದಾರೆ. ಶಾಲೆಗೆ ಅಗತ್ಯವಾದ ಎಲ್ಲ ಸವಲತ್ತು ನೀಡಲು ಇಲಾಖೆ ಸಿದ್ಧವಿದೆ. ಹೆಚ್ಚಿನ ಶಿಕ್ಷಕರು ಬೇಕೆಂದರೆ ನೇಮಿಸುತ್ತೇವೆ. ಸೌಲಭ್ಯಗಳ ಕೊರತೆ ಇದ್ದರೆ ಸರಿಪಡಿಸುತ್ತೇವೆ ಇಲ್ಲಿ ಜಾತಿಯ ಸಮಸ್ಯೆ ಬಂದಿಲ್ಲವೆಂದು ಡಿಡಿಪಿಐ ರಾಮಚಂದ್ರರಾಜೇ ಅರಸ್ ಸ್ಪಷ್ಟಪಡಿಸಿದ್ದಾರೆ.

ಯರಿಯೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಅವಿರೋಧ ಆಯ್ಕೆ



ತಾಲೂಕಿನ ಯರಿಯೂರು ಗ್ರಾಪಂ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ಚಿನ್ನಸ್ವಾಮಿರವರಿಗೆ ಗ್ರಾಪಂ ಅಧ್ಯಕ್ಷೆ ಲಾವಣ್ಯಕುಮಾರ್ ಸಹ ಸದಸ್ಯರು ಅಭಿನಂದಿಸಿದರು. ಜಿ ಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್ ಇದ್ದರು.

ಯಳಂದೂರು, ಜೂ. 24 (ವಿನಾಗರಾಜು)– ಯರಿಯೂರು ಗ್ರಾಪಂ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಚಿನ್ನಸ್ವಾಮಿ ಅವಿರೋಧವಾಗಿ ಆಯ್ಕೆಯಾದರು.

ಸಾಮಾನ್ಯ ಸ್ಥಾನಕ್ಕೆ ಮೀಸಲಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ನಾರಾಯಣಸ್ವಾಮಿ ರಾಜೀನಾಮೆ ನೀಡಿದ್ದ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ 18 ಮಂದಿ ಸದಸ್ಯರ ಪೈಕಿ ಚಿನ್ನಸ್ವಾಮಿ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಲಾಯಿತು.

ನೂತನ ಉಪಾಧ್ಯಕ್ಷ ಚಿನ್ನಸ್ವಾಮಿ ಮಾತನಾಡಿ, ನಮ್ಮ ಪಂಚಾಯಿತಿ ತಾಲೂಕಿನ ಪ್ರತಿಷ್ಠಿತ ಪಂಚಾಯಿತಿಗಳಲ್ಲಿ ಒಂದಾಗಿದೆ. ಯರಿಯೂರು, ಚಾಮಲಾಪುರ ಹಾಗೂ ಗಣಿಗನೂರು ಗ್ರಾಮಗಳನ್ನೊಳಗೊಂಡ ದೊಡ್ಡ ಪಂಚಾಯಿತಿಯಾಗಿದೆ. ಇಲ್ಲಿನ ಮೂಲ ಸಮಸ್ಯೆಗಳ ನಿವಾರಣೆಗೆ ನಾನು ಪ್ರಥಮ ಆದ್ಯತೆಯನ್ನು ನೀಡುತ್ತೇನೆ. ಇಲ್ಲಿನ ರಸ್ತೆ, ಚರಂಡಿ, ಬೀದಿ ದೀಪ ನಿರ್ವಹಣೆಗೆ ಪ್ರಥಮ ಆದ್ಯತೆಯನ್ನು ನೀಡುತ್ತೇನೆ. ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಸಾರ್ವಜನಿಕರ ದೂರುಗಳಿಗೆ ಸ್ಪಂದಿಸುತ್ತೇನೆ ನರೇಗಾ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡು ಪಂಚಾಯಿತಿಯ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಯತ್ನಿಸುತ್ತೇನೆ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್ ಗ್ರಾಪಂ ಅಧ್ಯಕ್ಷೆ ಲಾವಣ್ಯ ಕುಮಾರ್ ಸದಸ್ಯರಾದ ಆರ್.ನಾರಾಯಣ ಸ್ವಾಮಿ, ಮಹೇಶ್, ಶೈಲಜಾ, ದೊಡ್ಡಮ್ಮ, ಮಹದೇವಯ್ಯ, ವೈ.ಎಂ. ಪ್ರವೀಣ್ ಕುಮಾರ್, ಕಪ್ಪಣ್ಣ, ಎನ್. ಆಶಾ, ಪಿ. ಮಹದೇಶ, ಪದ್ಮಾ, ಸಿ. ರಮೇಶ, ಜಿ.ಸಿ. ರಾಜೇಶ, ಕೆಂಪಮ್ಮ ರತ್ನಮ್ಮ, ಶಾಂತಿ, ಚಂದ್ರಮ್ಮ, ಜಯಣ್ಣ, ಮಹೇಶ್, ನಾರಾಯಣ, ವೈ.ಬಿ. ಮಹದೇವಸ್ವಾಮಿ ಮತ್ತಿತರರು ಇದ್ದರು.

ಯುವಜನಾಂಗ ದುಶ್ಚಟಗಳಿಗೆ ಬಲಿಯಾಗದೆ ಭವಿಷ್ಯ ರೂಪಿಸಿಕೊಳ್ಳಿ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ



ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಸಹಯೋಗದಲ್ಲಿ ನಡೆದ ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆ ಕಾರ್ಯಕ್ರಮವನ್ನು ಎಸ್ಪಿ ಡಾ. ಬಿ.ಟಿ. ಕವಿತಾ ಉದ್ಘಾಟಿಸಿದರು.

ಚಾಮರಾಜನಗರ, ಜೂ. 24– ಯುವ ಜನಾಂಗ ಮಾದಕ ವ್ಯಸನಗಳಿಗೆ ದಾಸರಾಗಿ ತಮ್ಮ ಅಮೂಲ್ಯವಾದ ಜೀವನವನ್ನ ಹಾಳು ಮಾಡಿಕೊಳ್ಳಬೇಡಿ, ಭವಿಷ್ಯದ ಕಡೆ ಹೆಚ್ಚು ನಿಗಾ ವಹಿಸಿ, ಉನ್ನತ ಹುದ್ದೆಗಳನ್ನು ಪಡೆದುಕೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ತಿಳಿಸಿದ್ದಾರೆ.

ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸಿಇಎನ್ ಅಪರಾಧ ಪೊಲೀಸ್ ಠಾಣೆಯ ಸಹಯೋಗದಲ್ಲಿ ನಡೆದ ಅಂತರರಾಷ್ಟ್ರೀಯ ಮಾದಕ ವ್ಯಸನ ತಡೆ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮಾದಕ ವ್ಯಸನಕ್ಕೆ 20 ರಿಂದ 30 ವರ್ಷದೊಳಗಿನವರು ದಾಸರಾಗುತ್ತಿರುವುದು ಕಳವಳಕಾರಿಯಾಗಿದೆ.ವಿದ್ಯಾಭ್ಯಾಸದ ಸಮಯದಲ್ಲಿ ಇಂಥ ದುಶ್ಚಟಗಳಿಗೆ ಬಲಿಯಾದರೆ ನಿಮ್ಮ ಜೀವನವು ಹಾಳಾಗುವ ಜೊತೆಗೆ ಇಡೀ ಕುಟುಂಬವು ಸರ್ವನಾಶವಾಗುತ್ತದೆ ಎಂದು ಬುದ್ಧಿಮಾತು ಹೇಳಿದರು. ಇಂಥ ಸಂದರ್ಭಗಳು ಸೃಷ್ಟಿಯಾದರೆ ತಕ್ಷಣ ಪೊಲೀಸರ ಗಮನಕ್ಕೆ ತನ್ನಿ, ತಾವು ಪಾರಾಗುವ ಜೊತೆಗೆ ನಿಮ್ಮ ಸ್ನೇಹಿತರನ್ನು ಈ ದುಶ್ಚಟದಿಂದ ದೂರವಿಡಲು ಸಹಕಾರಿಯಾಗುತ್ತದೆ. ಎಂದರು.

ಮಾದಕ ವಸ್ತುಗಳ ಸೇವನೆ ಮತ್ತು ಸಾಗಾಣಿಕೆ ದೊಡ್ಡ ಅಪರಾಧವಾಗಿದ್ದು, ಯುವ ಜನಾಂಗವನ್ನು ದಾರಿತಪ್ಪಿಸುವ ಇಂಥ ಮಾದಕ ವಸ್ತುಗಳ ಚಟಕ್ಕೆ ಬಿದ್ದವರನ್ನು ಮತ್ತು ಪ್ರೋತ್ಸಾಹ ನೀಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವ ಸಂಬಂಧ ಕಠಿಣ ಕಾಯಿದೆಯನ್ನು ರೂಪಿಸಿದ್ದು, ಈ ಬಗ್ಗೆ ವಿದ್ಯಾರ್ಥಿಗಳಾದ ತಾವು ಹೆಚ್ಚಿನ ಜಾಗೃತಿ ವಹಿಸಬೇಕು ಎಂದು ತಿಳಿಸಿದರು.

ಪ್ರಾಂಶುಪಾಲ ಎಚ್.ಜಿ. ಲೋಕೇಶ್ ಅಧ್ಯಕ್ಷತೆ ವಹಿಸಿದ್ದು, ವಿದ್ಯಾರ್ಥಿಗಳು ಮಾದಕ ವಸ್ತುಗಳ ಸೇವನೆ ಮತ್ತು ಸಾಗಣಿಕೆ ಅಪರಾಧವಾಗಿದೆ. ಇಂಥ ದುಶ್ಚಟಗಳಿಗೆ ಬಲಿಯಾಗಿ, ಜೀವನ ಹಾಳು ಮಾಡಿಕೊಳ್ಳಬೇಡಿ. ವಿದ್ಯಾರ್ಥಿಗಳು ವ್ಯಾಸಂಗ ಕಡೆ ಹೆಚ್ಚು ಗಮನ ಕೊಟ್ಟು, ಕಾಲಹರಣ ಮಾಡದೇ ಉನ್ನತ ಹುದ್ದೆಗಳನ್ನು ಆಲಂಕರಿಸಿದರೆ, ಉತ್ತಮ ಸಮಾಜ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು. ಡಿವೈಎಸ್ಪಿ ಲಕ್ಷ್ಮಯ್ಯ, ಪಟ್ಟಣ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸಾಗರ್, ಸಂಯೋಜಕ ಶಿವಪ್ರಸಾದ್, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮದ್ದೂರಿನಲ್ಲಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಶಾಸಕರಿಂದ ಗುದ್ದಲಿಪೂಜೆ



ಶಾಸಕ ಎ.ಆರ್.ಕೃಷ್ಣಮೂರ್ತಿ ಗುದ್ದಲಿ ಪೂಜೆ ಮಾಡಿದಾಗ, ಹೆಚ್.ವಿ.ಚಂದ್ರು, ತಾಲೂಕು ಅಧ್ಯಕ್ಷ ಪ್ರಭುಪ್ರಸಾದ್, ಕೊಳ್ಳೇಗಾಲ ಬ್ಲಾಕ್ ಕಾಂಗ್ರೆಸ್ ತೋಂಟೇಶ್, ಇಂಜಿನಿಯರ್ ಚಿಕ್ಕಲಿಂಗಯ್ಯರವರುಗಳು ಹಾಜರಿದ್ದರು.

ಚಾಮರಾಜನಗರ, ಜೂ. 24– ಜಿಲ್ಲೆಯ ಯಳಂದೂರು ತಾಲೂಕಿನ ಮದ್ದೂರಿನಲ್ಲಿ 50 ಲಕ್ಷ ರೂ.ವೆಚ್ಚದ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಗುದ್ದಲಿಪೂಜೆ ನೆರವೇರಿಸಿದರು.

ಗ್ರಾಮದಲ್ಲಿ ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ 25 ಲಕ್ಷ ರೂ. ಪರಿಶಿಷ್ಟ ಜಾತಿಯ ಬೀದಿಯಲ್ಲಿ ಸಿಮೆಂಟ್ ರಸ್ತೆ, ಚರಂಡಿ ನಿರ್ಮಾಣಕ್ಕೆ 25 ಲಕ್ಷ ರೂ ಮಂಜೂರಾಗಿದ್ದು, ಇಂದು ಎರಡು ಕಾಮಗಾರಿಗಳಿಗೂ ಗುದ್ದಲಿ ಪೂಜೆ ಮಾಡಲಾಗಿದೆ ಎಂದರು.

ಸಕ್ಷಮ ಪ್ರಾಧಿಕಾರದಲ್ಲಿ ಕೋಚಿಂಗ್ ಸೆಂಟರ್ ನೊಂದಣಿ ಕಡ್ಡಾಯ

ಚಾಮರಾಜನಗರ, ಜೂ. 24– ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಕೋಚಿಂಗ್ ಸೆಂಟರ್ ನಡೆಸಲು ಹಾಗೂ ಈಗಾಗಲೇ ನಡೆಸುತ್ತಿರುವ ಕೋಚಿಂಗ್ ಸೆಂಟರ್ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಸಂಸ್ಥೆಯನ್ನು ಕಡ್ಡಾಯವಾಗಿ ನೊಂದಾಯಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ತಿಳಿಸಿದೆ.

ನೋಂದಾಯಿಸಿಕೊಂಡಿರುವ ಬಗ್ಗೆ ಸಂಬಂಧಿಸಿದ ದಾಖಲೆಯೊಂದಿಗೆ ಮಾಹಿತಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಗೆ ಸಲ್ಲಿಸಬೇಕು. ಮಾಹಿತಿಗಾಗಿ ದಿ ಕರ್ನಾಟಕ ಟ್ಯುಟೋರಿಯಲ್ ಇನ್ಸಿಟ್ಯೂಷನ್ಸ್ (ನೊಂದಣಿ ಮತ್ತು ನಿಯಂತ್ರಣ) ನಿಯಮಗಳು 2001 ಮಾರ್ಗಸೂಚಿಯಲ್ಲಿ ಪಡೆಯಬಹುದು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರಾದ ಪುಟ್ಟಗೌರಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರ ಚುನಾವಣೆ ; ಮತದಾರರೊಬ್ಬರಿಗೆ ದೃಢೀಕೃತ ಗುರುತಿನ ಪ್ರತಿ ನೀಡಲು ಸತಾಯಿಸಿದ ಆರೋಪ

ಬ್ಯಾಂಕ್ ಸಿಇಓ ತರಾಟೆಗೆ ತೆಗೆದುಕೊಂಡ ಶಾಸಕ ಜಿ.ಡಿ.ಹರೀಶ್‌ಗೌಡ

- ಪಟ್ಟುಹಿಡಿದು ಸಿಇಓ ಕೊಠಡಿಯಲ್ಲಿ ಸತತ ನಾಲ್ಕು ಗಂಟೆಗಳ ಕಾಲ ಕಾದು ಗುರುತಿನ ಚೀಟಿ ಕೊಡಿಸಿದ ಶಾಸಕರು
- ಬ್ಯಾಂಕ್‌ನ ಮಾಜಿ ಅಧ್ಯಕ್ಷರೂ ಆದ ಜಿ.ಡಿ.ಹರೀಶ್‌ಗೌಡ ಹಾಲಿ ಚುನಾವಣೆಯಲ್ಲಿ ನಿರ್ದೇಶಕ ಸ್ಥಾನದ ಸ್ಪರ್ಧಿ ಕೂಡ

ಮೈಸೂರು,ಜೂ.24(ಪಿಎಂ)– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆ ಸಂಬಂಧ ಮತದಾರರೊಬ್ಬರ ಗುರುತಿನ ಚೀಟಿಯ ದೃಢೀಕೃತ ಪ್ರತಿ ನೀಡಲು ಸತಾಯಿಸಲಾಗುತ್ತಿದೆ ಎಂದು ಆರೋಪಿಸಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಓ) ಆರ್.ಜೆ. ಕಾಂತರಾಜು ಅವರನ್ನು ಚುನಾವಣಾ ಕಣದಲ್ಲಿರುವ ಅಭ್ಯರ್ಥಿಯೂ ಆದ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ತರಾಟೆಗೆ ತೆಗೆದುಕೊಂಡರು.

ಮೈಸೂರಿನ ನೆಹರು ವೃತ್ತದಲ್ಲಿರುವ ಬ್ಯಾಂಕಿನ ಸಿಇಓ ಕಚೇರಿಗೆ ಮಂಗಳವಾರ ಮಧ್ಯಾಹ್ನ ಭೇಟಿ ನೀಡಿದ ಜಿ.ಡಿ.ಹರೀಶ್‌ಗೌಡ, ಅವರನ್ನು ತರಾಟೆಗೆ ತೆಗೆದುಕೊಂಡರಲ್ಲದೇ ಸತತ ನಾಲ್ಕು ಗಂಟೆಗಳ ಕಾಲ ಪಟ್ಟು ಹಿಡಿದು ಅಲ್ಲೇ ಕುಳಿತು ಗುರುತಿನ ಚೀಟಿಯನ್ನು ಕೊಡಿಸಿದರು.

ಗುರುತಿನ ಚೀಟಿ ಕಳೆದುಕೊಂಡ ಚಾಮರಾಜನಗರ ಜಿಲ್ಲೆಯ ಪುಣಜನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಗುರುನಾಯ್ಕ ಹಾಗೂ ಚಾಮರಾಜನಗರ ತಾಲೂಕು ಕ್ಷೇತ್ರದ ಬಿಜೆಪಿ ಬೆಂಬಲಿತ ಅಭ್ಯರ್ಥಿ ವೃಷಬೇಂದ್ರಪ್ಪ ಅವರೊಂದಿಗೆ ಬಂದ ಹರೀಶ್‌ಗೌಡ, ಗುರುತಿನ ಚೀಟಿ ಕೊಡಲೇಬೇಕೆಂದು ಪಟ್ಟುಹಿಡಿದು ಕುಳಿತರು.

ಅಲ್ಲದೆ, ಸಿಇಓ ಅವರ ವರ್ತನೆಗೆ ಶಾಸಕರು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಸಿಇಓ, ಐಡಿ ಕಾರ್ಡ್, ಪಿಆರ್‌ಓ ಪ್ರತಿ, ಆರ್‌ಓ ಕಾಪಿ ಮೂರು ಪ್ರತಿಗಳ ವ್ಯವಸ್ಥೆ ಇದೆ. ಎಲ್ಲವನ್ನೂ ಚುನಾವಣಾಧಿಕಾರಿ ಕಚೇರಿಗೆ ಕಳುಹಿಸಲಾಗಿದೆ ಎಂದರು.



ಎಂಸಿಡಿಸಿಸಿ ಬ್ಯಾಂಕ್‌ನ ಸಿಇಓ ಅವರನ್ನು ಶಾಸಕ ಜಿ.ಡಿ.ಹರೀಶ್‌ಗೌಡರು ತರಾಟೆಗೆ ತೆಗೆದುಕೊಂಡಿದ್ದ ಸಂದರ್ಭ.

ಬಳಿಕ ಹರೀಶ್‌ಗೌಡ ಮಾತನಾಡಿ, ಡೆಲಿಗೇಟ್ ಹಾಗೂ ಸಂಘದ ಕಾರ್ಯದರ್ಶಿ ಬಂದು ಕಳೆದು ಹೋಗಿದೆ ಎಂದು ಹೇಳಿದ ಮೇಲೂ ಮತ್ತೊಂದು ಗುರುತಿನ ಚೀಟಿ ಕೊಟ್ಟು ಮತದಾನಕ್ಕೆ ಅವಕಾಶ ಮಾಡಿಕೊಡಲು ಸಮಸ್ಯೆ ಏನು? ಐಡಿ ಕಾರ್ಡ್ ಕಳೆದಿರುವ ಸಮಸ್ಯೆಯಲ್ಲ ಇದು. ಇಲ್ಲಿ ಸಮಸ್ಯೆಯೇ ಬೇರೆ ಇದೆ. ಪಾರದರ್ಶಕವಾಗಿ ಚುನಾವಣೆ ನಡೆಸುವುದು ನಿಮ್ಮ ಕರ್ತವ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೊಂದು ರೀತಿಯಲ್ಲಿ ಐಡಿ ಕಾರ್ಡ್ ಕಿತ್ತುಕೊಳ್ಳುವುದೇ ಆಗಿದೆ. ಪಾರದರ್ಶಕವಾಗಿ ಚುನಾವಣೆ ನಡೆಯಲು ಅಡ್ಡಿಪಡಿಸುವ ಪ್ರಯತ್ನ ನಡೆಯುತ್ತಿದೆ. ಯಾರಿಗೂ ಅನ್ಯಾಯವಾಗದಂತೆ ಪಾರದರ್ಶಕ ಚುನಾವಣೆ ನಡೆಯಬೇಕು. ಒಬ್ಬ ಮತದಾರನೂ ಮತದಾನದಿಂದ ವಂಚಿತರಾಗಬಾರದು. ಅವರು ಯಾರಿಗೆ ಬೇಕಾದರೂ ಮತದಾನ ಮಾಡಲು ಸ್ವತಂತ್ರರು. ನಾಳೆಯೂ ನಿಮ್ಮ ಮುಂದೆ ಇಂತಹ ಸಮಸ್ಯೆಗಳು ಬರುವ ಸಾಧ್ಯತೆ ಇದೆ. ಅಂತಹ ಸಂದರ್ಭದಲ್ಲಿ ತಡ ಮಾಡದೇ ಐಡಿ ಕಾರ್ಡ್ ನೀಡುವ ವ್ಯವಸ್ಥೆ ಮಾಡಬೇಕು. ಸರ್ಕಾರದಿಂದ ಒತ್ತಡ ಇದೆಯೋ, ಇನ್ನೊಬ್ಬರಿಂದ ಒತ್ತಡ ಇದೆಯೋ ನನಗೆ ಗೊತ್ತಿಲ್ಲ. ಆದರೆ ಯಾವುದೇ ಒತ್ತಡಕ್ಕೂ ಮಣಿಯದೇ ಪಾರದರ್ಶಕವಾಗಿ ಚುನಾವಣೆ ನಡೆಸಬೇಕೆಂಬುದು ನಮ್ಮ ಮನವಿ. ಕಾನೂನುಬದ್ಧವಾಗಿ ದೊರೆಯಬೇಕಿರುವ ಹಕ್ಕು ಕಲ್ಪಿಸಿಕೊಡಿ ಎಂದು ತಿಳಿಸಿದರು.

ಅರ್ಧ ತಾಸು ಅಂದ್ರು, ಆಗಿದ್ದು 4 ಗಂಟೆ: ಈ ವೇಳೆ ದಾಖಲೆಗಳನ್ನು ಮತ್ತೊಮ್ಮೆ ಪಡೆದುಕೊಂಡ ಸಿಇಓ, ರಿಟರ್ನಿಂಗ್ ಅಧಿಕಾರಿ ಕಚೇರಿಯಲ್ಲಿದ್ದ ಮತ್ತೊಂದು ಪ್ರತಿಯಲ್ಲಿ ಜೆರಾಕ್ಸ್ ಮಾಡಿಕೊಂಡು ತರಲು ಕಳುಹಿಸಿ ಅರ್ಧ ಗಂಟೆ ಸಮಯ ಕೇಳಿದರು. ಆಗ ಹರೀಶ್ ಗೌಡ ಮತ್ತು ವೃಷಬೇಂದ್ರಪ್ಪ ಅವರು ನಮಗೆ ಗುರುತಿನ ಚೀಟಿ ಸಿಗುವ ತನಕ ಇಲ್ಲಿಯೇ ಕುಳಿತಿರುತ್ತೇವೆ ಎಂದು ಪಟ್ಟುಹಿಡಿದರು. ನಂತರದ ಅರ್ಧ ತಾಸಿಗೆ ಬದಲು ಸುಮಾರು 4 ಗಂಟೆಗಳ ಸಮಯ ತೆಗೆದುಕೊಂಡು ಸಿಇಓ, ದೃಢೀಕೃತ ಪ್ರತಿಯನ್ನು ಕೊನೆಗೂ ಚುನಾವಣಾಧಿಕಾರಿ ಕಚೇರಿಯಿಂದ ತರಿಸಿಕೊಟ್ಟರು.

ನಾಳೆ ಚುನಾವಣೆ

ಮೈಸೂರು,ಜೂ.24(ಪಿಎಂ)– ಎಂಸಿಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿಯ 12 ನಿರ್ದೇಶಕರ ಸ್ಥಾನಗಳಿಗೆ ಜೂ.26ರಂದು ನಗರದ ನಂಜರಾಜ ಬಹದ್ದೂರ್ ಛತ್ರದಲ್ಲಿ ಚುನಾವಣೆ ನಡೆಯಲಿದೆ. ಒಟ್ಟು 29 ಮಂದಿ ಕಣದಲ್ಲಿದ್ದು, ಒಟ್ಟು 37 ಮಂದಿ ನಾಮಪತ್ರ ಸಲ್ಲಿಸಿದ್ದರು.

ಯಳಂದೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ವೈ.ಎಂ. ಜಯರಾಂ ಅವಿರೋಧ ಆಯ್ಕೆಯಾಗಿದ್ದಾರೆ. ಅಂದು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ಡೆಲಿಗೇಟ್ ಆಗಿರುವ ಸದಸ್ಯರು ಮತದಾನ ಮಾಡಲಿದ್ದಾರೆ. ಮತದಾನದ ಬಳಿಕ ಸದರಿ ಛತ್ರದಲ್ಲೇ ಮತ ಎಣಿಕೆಯ ಪ್ರಕ್ರಿಯೆ ನಡೆಯಲಿದ್ದು, ಫಲಿತಾಂಶ ಹೊರಬೀಳಲು ಅಂದು ರಾತ್ರಿ ಸುಮಾರು 10 ಗಂಟೆಯಾಗಬಹುದು ಎನ್ನಲಾಗುತ್ತಿದೆ.

ಪಾರದರ್ಶಕ ಚುನಾವಣೆ ನಡೆಸಲು ಸಿಇಓ ಅವರಲ್ಲಿ ಕೋರಿದ್ದೇನೆ

ಮೈಸೂರು,ಜೂ.24(ಪಿಎಂ)– ಸಹಕಾರ ಸಂಘದ ಪ್ರತಿನಿಧಿಗಳ ಮತದಾನದ ಹಕ್ಕನ್ನು ಕಸಿಯುವ ಕೆಲಸ ಎಲ್ಲೋ ಒಂದು ಕಡೆ ಆಗುತ್ತಿದೆ ಎಂದು ಆರೋಪಿಸಿದ ಶಾಸಕರೂ ಆದ ಸದರಿ ಬ್ಯಾಂಕಿನ ಮಾಜಿ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ, ಯಾರದ್ದೇ ಒತ್ತಡ ಇದ್ದರೂ ಅವುಗಳನ್ನು ಬದಿಗಿಟ್ಟು ಪಾರದರ್ಶಕವಾಗಿ ಚುನಾವಣೆ ನಡೆಸುವಂತೆ ಎಂಸಿಡಿಸಿಸಿ ಬ್ಯಾಂಕಿನ ಸಿಇಓ ಆರ್.ಜೆ.ಕಾಂತರಾಜು ಅವರಲ್ಲಿ ಮನವಿ ಮಾಡಿರುವುದಾಗಿ ತಿಳಿಸಿದರು.

ಗುರುತಿನ ಚೀಟಿಯ ದೃಢೀಕೃತ ಪ್ರತಿ ಪಡೆದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಗುರುನಾಯ್ಕ ಅವರ ಗುರುತಿನ ಚೀಟಿ ಕಳೆದು ಹೋಗಿತ್ತು. ಅದರ ದೃಢೀಕೃತ ಪ್ರತಿ ನೀಡಬೇಕೆಂದು ಕೋರಿ ಕಳೆದ ಮೂರು ದಿನಗಳಿಂದ ಬ್ಯಾಂಕಿಗೆ ಮತ್ತು ಚುನಾವಣಾ ಅಧಿಕಾರಿಗಳ ಬಳಿಗೆ ಓಡಾಡುತ್ತಿದ್ದರು. ಆದರೆ ಪ್ರಯೋಜನ ಆಗಿರಲಿಲ್ಲ. ಹಲವಾರು ದಿನಗಳಿಂದ ಅಧಿಕಾರಿಗಳ ಮೇಲೆ ಏನು ಒತ್ತಡವಿದೆಯೋ ಗೊತ್ತಿಲ್ಲ ಎಂದರು.

ಸರ್ಕಾರವಿದೆ ಎಂಬ ಕಾರಣಕ್ಕೆ ಅಧಿಕಾರಿಗಳನ್ನು ಉಪಯೋಗಿಸಿಕೊಂಡು ಚುನಾವಣೆ ವ್ಯವಸ್ಥೆಗೆ ಧಕ್ಕೆ ತರುವಂತಹ ಕೆಲಸ ಮಾಡಬಾರದು ಎಂಬುದು ನನ್ನ ಮನವಿ. ಚುನಾವಣೆಯಲ್ಲಿ ಸೋಲು–ಗೆಲುವು ಎಲ್ಲವನ್ನೂ ಸಹ ಸ್ವೀಕರಿಸುವ ಮನೋಭಾವವನ್ನು ಪ್ರತಿಯೊಬ್ಬರು ಹೊಂದಿರಬೇಕು. ಇಂದು ಮಧ್ಯಾಹ್ನದಿಂದ ನಾಲ್ಕು ಗಂಟೆಗಳ ಕಾಲ ಬ್ಯಾಂಕಿನ ಸಿಇಓ ಅವರ ಕೊಠಡಿಯಲ್ಲಿ ಕುಳಿತಿದ್ದೆವು. ವ್ಯವಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ನಾವೆಲ್ಲರೂ ಗಮನಿಸಬಹುದು. ಸಹಕಾರ ಸಂಘದ ಸದಸ್ಯರು ಆಯ್ಕೆ ಮಾಡಿ ಕಳುಹಿಸಿರುವ ಪ್ರತಿನಿಧಿಯ ಹಕ್ಕನ್ನು ಕಸಿದುಕೊಳ್ಳುವ ಕೆಲಸವನ್ನು ಮಾಡಬೇಡಿ ಎಂದು ಕಿಡಿಕಾರಿದರು.

ನಾನು ಒಬ್ಬ ಸಹಕಾರಿಯಾಗಿ ಕಳೆದ 11 ವರ್ಷಗಳಿಂದ ಎಂಸಿಡಿಸಿಸಿ ಬ್ಯಾಂಕ್‌ನ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ಐದು ವರ್ಷಗಳ ಕಾಲ ಬ್ಯಾಂಕ್‌ನ ಅಧ್ಯಕ್ಷನಾಗಿ ಕೆಲಸ ಮಾಡಿದ್ದು, ಎರಡು ವರ್ಷಗಳ ಕಾಲ ಅಪೆಕ್ಸ್ ಬ್ಯಾಂಕ್‌ನ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ ಎಂದರು.

ಎಂಸಿಡಿಸಿಸಿ ಬ್ಯಾಂಕಿನ ಅಧ್ಯಕ್ಷನಾಗಿ ನನ್ನ ಆಡಳಿತಾವಧಿಯಲ್ಲಿ ರೈತರಿಗೆ ಸಾಲ ಸೌಲಭ್ಯವನ್ನು ಪ್ರಾಮಾಣಿಕವಾಗಿ ತಲುಪಿಸುವ ಕೆಲಸವನ್ನು ಮಾಡಿದ್ದೇನೆ. ಐದು ವರ್ಷಗಳಲ್ಲಿ ಎರಡು ವರ್ಷ ಕೋವಿಡ್ ಇದ್ದರೂ ಸಹ ಡಿಪಾಸಿಟ್ 370 ಕೋಟಿ ರೂ. ಇತ್ತು ಅದನ್ನು 1 ಸಾವಿರ ಕೋಟಿಗೆ ತಲುಪಿಸುವ ಕೆಲಸವನ್ನು ಮಾಡಿದ್ದೇನೆ. ಸಾಲ ವಿತರಣೆಯನ್ನು 600 ಕೋಟಿ ರೂ.ನಿಂದ 1,600 ಕೋಟಿ ರೂ.ವರೆಗೆ ಏರಿಕೆ ಮಾಡಿದ್ದೇವೆ. ಎರಡು ಜಿಲ್ಲೆಗಳಿಗೆ ಸಮಾನವಾಗಿ ಸಾಲ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಸಹಕಾರ ಕ್ಷೇತ್ರಕ್ಕೆ ರಾಜಕೀಯ ಪ್ರವೇಶ ಆಗಕೂಡದು

ಬ್ಯಾಂಕ್ ಚುನಾವಣೆ ನಡೆಯಲು ಕಾರಣ ನಾನು ; ಜಿ.ಡಿ.ಹರೀಶ್‌ಗೌಡ

ಮೈಸೂರು,ಜೂ.24(ಪಿಎಂ)– ಎಂಸಿಡಿಸಿಸಿ ಬ್ಯಾಂಕ್ ಚುನಾವಣೆ ನಿಗದಿಯಾಗಿ ಅವರೆಲ್ಲರೂ ಸ್ಪರ್ಧೆ ಮಾಡಿದ್ದಾರೆ ಎಂದರೆ ಅದಕ್ಕೆ ಕಾರಣ ನಾನು ಎಂದು ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ಚುನಾವಣೆ ನಡೆಸಬೇಕೆಂದು ಒಂದೂವರೆ ವರ್ಷ ಕೋರ್ಟ್‌ನಲ್ಲಿ ಹೋರಾಟ ಮಾಡಬೇಕಾಯಿತು. ನನ್ನ ಈ ಹೋರಾಟದ ಫಲವಾಗಿ ಇಂದು ಚುನಾವಣೆ ನಿಗದಿಯಾಗಿ ಎಲ್ಲರೂ ಸ್ಪರ್ಧೆ ಮಾಡಲು ಸಾಧ್ಯವಾಗಿದೆ. ಇಲ್ಲವಾಗಿದ್ದರೆ ಈ ಚುನಾವಣೆ ಇನ್ನು ಎರಡು ವರ್ಷ ಆಗುತ್ತಿತ್ತು ಎಂದರು.

ಸಹಕಾರ ಕ್ಷೇತ್ರಕ್ಕೆ ರಾಜಕೀಯದ ನೇರ ಪ್ರವೇಶ ಆಗುತ್ತಿದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ರಾಜಕಾರಣ ಸಹಕಾರ ಕ್ಷೇತ್ರವನ್ನು ಪ್ರವೇಶ ಮಾಡಬಾರದು. ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಇರುವಂತಹ ಕ್ಷೇತ್ರ ಇದು. ಇದರಲ್ಲಿ ಸೇವೆ ಸಲ್ಲಿಸುವುದು ಪುಣ್ಯ ಮಾಡುವುದಕ್ಕೆ ಸಮ. ರಾಜಕೀಯ ವ್ಯವಸ್ಥೆ ಏನಾದರೂ ಇರಲಿ. ಸಹಕಾರಿ ಸಂಸ್ಥೆಗಳು ರಾಜಕೀಯಕ್ಕೆ ಬಲಿಯಾಗಬಾರದು. ನನ್ನ ಅಧಿಕಾರದ ಅವಧಿ ಬಳಿಕ ಒಂದೂವರೆ ವರ್ಷದ ಅವಧಿಯಲ್ಲಿ ಒಂದೇ ಒಂದು ಸೊಸೈಟಿ ಸಂಬಂಧ ಹೊಸ ಸಾಲ ನೀಡಲು ಸಾಧ್ಯವಾಗಿಲ್ಲ ಎಂದು ಹೇಳಿದರು.

ಬ್ಯಾಂಕಿನ 275 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರಿಗೆ ಹೊಸ ಸಾಲ ಕೊಡಲು ಸಾಧ್ಯವಾಗಿಲ್ಲ. ಕೇವಲ 45 ಸಾವಿರ ರೈತರಿಗೆ ಸಾಲ ಕೊಡುತ್ತಿದ್ದರು. ನನ್ನ ಅವಧಿಯಲ್ಲಿ ಒಂದು ಲಕ್ಷ ರೈತರಿಗೆ ಸಾಲವನ್ನು ಕೊಟ್ಟಿದ್ದೇನೆ. ಬ್ಯಾಂಕಿನ ಅಧ್ಯಕ್ಷನಾಗಿ ನನ್ನ ಕೆಲಸವನ್ನು ಎರಡು ಜಿಲ್ಲೆಗಳ ರೈತರು ಹಾಗೂ ಸಹಕಾರಿಗಳು ಗಮನಿಸಿದ್ದಾರೆ. ಯಾರು ಎಷ್ಟೇ ಆಮಿಷಗಳನ್ನು ಒಡ್ಡಬಹುದು. ಆದರೆ ಎಲ್ಲಾ ಸಹಕಾರಿಗಳು ನಮ್ಮ ಪರವಿದ್ದಾರೆ ಎಂಬ ವಿಶ್ವಾಸ ಹೊಂದಿದ್ದೇವೆ ಎಂದು ತಿಳಿಸಿದರು.

ಚುನಾವಣೆ ಫಲಿತಾಂಶ ಏನಾಗುತ್ತದೋ ನಮಗೆ ಗೊತ್ತಿಲ್ಲ. ನಮಗೆ ಸಹಕಾರ ಬ್ಯಾಂಕ್ ಉಳಿಯಬೇಕು. ಐದು ವರ್ಷಗಳಲ್ಲಿ ನಾವು ಮಾಡಿದ ಕೆಲಸಗಳು ನಮ್ಮ ಕೈಹಿಡಿಯುವ ವಿಶ್ವಾಸವಿದೆ. ನನ್ನ ಐದು ವರ್ಷದ ಆಡಳಿತದ ಅವಧಿಯಲ್ಲಿ ನಮ್ಮ ನಿರ್ದೇಶಕರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗ ನನ್ನ ಜೊತೆಗೆ ಬೆನ್ನೆಲುಬಾಗಿ ನಿಂತಿದ್ದರಿಂದ ಸಾಧನೆ ಸಾಧ್ಯವಾಯಿತು. ಸಹಕಾರಿಗಳು ಸೇವೆ ಮಾಡಲು ಅವಕಾಶ ಮಾಡಿಕೊಟ್ಟರೆ ಸೇವೆ ಸಲ್ಲಿಸುತ್ತೇವೆ. ಯಾರು ಕೆಲಸ ಕಾರ್ಯ ಮಾಡಿದ್ದಾರೆ ಎಂಬುದು ನಮ್ಮ ಸಹಕಾರಿಗಳಿಗೆ ಗೊತ್ತಿದೆ ಎಂದರು.

ಸ್ಪರ್ಧೆಯಲ್ಲಿ ವೈಯಕ್ತಿಕ ಹಿತಾಸಕ್ತಿ ಇಲ್ಲ: ಸಹಕಾರಿಗಳಿಗೆ ಸರ್ಕಾರದಿಂದ ಬರುವ ಸವಲತ್ತು ಕಲ್ಪಿಸಬೇಕು ಹಾಗೂ ಬ್ಯಾಂಕಿನಿಂದ ಅತಿ ಹೆಚ್ಚು ಸಾಲ ಕೊಡಬೇಕೆಂಬ ಉದ್ದೇಶದಿಂದ ಚುನಾವಣೆಗೆ ಸ್ಪರ್ಧೆ ಮಾಡಿದ್ದೇವೆಯೇ ಹೊರತು ಇದರಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲ. ನಾವು ಇಂತಿಷ್ಟೇ ಸ್ಥಾನದಲ್ಲಿ ಗೆಲ್ಲುತ್ತೇವೆ ಎಂಬುದು ನನಗೆ ಗೊತ್ತಿಲ್ಲ. ನಾವು ಮಾಡಿದ ಕೆಲಸ ನಮ್ಮ ಕೈಹಿಡಿಯುತ್ತವೆ. ಯಾರು ನಿಮ್ಮ ಸೇವೆ ಮಾಡುತ್ತಾರೆ ಹಾಗೂ ಬ್ಯಾಂಕ್ ಉಳಿಸುತ್ತಾರೆ ಎಂಬುದನ್ನು ಗಮನಿಸಿ ಸೂಕ್ತವಾಗಿ ಆಯ್ಕೆ ಮಾಡುವಂತೆ ಮತದಾರರಲ್ಲಿ ಮನವಿ ಮಾಡುತ್ತೇವೆ ಎಂದು ಹೇಳಿದರು.

ಡ್ರಗ್ಸ್ ಪ್ರಕರಣದಲ್ಲಿ ತಮಿಳು ನಟ ಶ್ರೀಕಾಂತ್ ಬಂಧನ

ಚೆನ್ನೈ, ಜೂ.24– ಮಾದಕ ದ್ರವ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ತಮಿಳು ನಟ ಶ್ರೀಕಾಂತ್ ಅವರನ್ನು ಸೋಮವಾರ ಗ್ರೇಟರ್ ಚೆನ್ನೈ ಪೊಲೀಸರು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಮತ್ತೊಂದು ಡ್ರಗ್ಸ್ ಪ್ರಕರಣದ ಆರೋಪಿಗಳು ನೀಡಿದ ಹೇಳಿಕೆಯ ಆಧಾರದ ಮೇಲೆ ನಟ ಶ್ರೀಕಾಂತ್ ಅವರನ್ನು ಇಂದು ಬೆಳಗ್ಗೆ ವಿಚಾರಣೆಗೆ ಒಳಪಡಿಸಲಾಯಿತು. ಒಂದು ವಾರದ ಹಿಂದೆ, ನುಂಗಂಬಾಕ್ಕಂ ಪೊಲೀಸರು ಘಾನಾ ಮೂಲದ ಜಾನ್ ಎಂಬ ವ್ಯಕ್ತಿಯನ್ನು ಬಂಧಿಸಿ, ಅವರಿಂದ 11 ಗ್ರಾಂ ಕೊಕೇನ್ ವಶಪಡಿಸಿಕೊಂಡಿದ್ದರು.

ಶ್ರೀಕಾಂತ್ ಅವರ ಬಂಧನವು ಈ ಕೊಕೇನ್ ಪ್ರಕರಣಕ್ಕೆ ಸಂಬಂಧಿಸಿದೆ ಮತ್ತು ನಟ ಅವರಿಂದ ಮಾದಕ ದ್ರವ್ಯ ಖರೀದಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆದರೆ ಈ ಬಗ್ಗೆ ಪೊಲೀಸರು ಇನ್ನೂ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ.

2002ರಲ್ಲಿ ರೋಜಾ ಕೂಟಂ ಸಿನಿಮಾ ಮೂಲಕ ತಮಿಳು ಚಿತ್ರರಂಗ ಪ್ರವೇಶಿಸಿದ ಶ್ರೀಕಾಂತ್ ಅವರು, ಏಪ್ರಿಲ್ ಮಾಧಿಲ್ (2002), ಪಾರ್ಥಿಬನ್ ಕಣವು (2003), ಒರು ನಾಲ್ ಒರು ಕಣವು (2005), ಪೂ (2008), ಮತ್ತು ನನ್ಬನ್ (2012) ಸೇರಿದಂತೆ ಅನೇಕ ಯಶಸ್ವಿ ಚಿತ್ರಗಳಲ್ಲಿ ನಟಿಸಿದ್ದಾರೆ.

ಹುಟ್ಟುಹಬ್ಬದ ಶುಭಾಶಯ



ಮೈಸೂರು ದೇವರಾಜ ಮಾರ್ಕೆಟ್ ಯುವ ಬ್ರಿಗೇಡ್ ಅಧ್ಯಕ್ಷರಾದ ಬಿ.ಸಂದೀಪ್ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಶಾಸಕರಾದ ಕೆ.ಹರೀಶ್ ಗೌಡ ಅವರು ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಸಂದೀಪ್ ಅವರ ಅಪಾರ ಅಭಿಮಾನಿಗಳು, ಹಿತೈಷಿಗಳು, ಸ್ನೇಹಿತರು ಸಹ ಆತ್ಮೀಯವಾಗಿ ಅಭಿನಂದಿಸಿದರು

ಯೂನಿವರ್ಸಲ್ ಡೆವಲಪರ್ಸ್ ಕಂಪನಿಯಿಂದ ವಂಚನೆ: ಸಿಸಿಬಿಗೆ ಮಾಹಿತಿ ನೀಡಲು ಮನವಿ

ಮೈಸೂರು, ಜೂ.24– ಮೈಸೂರು ದಟ್ಟಗಳ್ಳಿಯ ಕನಕದಾಸ ರಸ್ತೆಯಲ್ಲಿರುವ ಯೂನಿವರ್ಸಲ್ ಡೆವಲಪರ್ಸ್ ಕಂಪನಿಯಿಂದ ಮೋಸ ಹೋದ ಸಾರ್ವಜನಿಕರು, ಸಂಬಂಧಿಸಿದ ದಾಖಲೆಗಳೊಂದಿಗೆ ಸಿಸಿಬಿ ಘಟಕಕ್ಕೆ ಮಾಹಿತಿ ನೀಡುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಪ್ರಕಟಣೆ ತಿಳಿಸಿದೆ.

ಯೂನಿವರ್ಸಲ್ ಡೆವಲಪರ್ಸ್ ಕಂಪನಿಯವರು ಟ್ರೇಡಿಂಗ್ ಮಾಡಿ ಲಾಭಾಂಶ ಕೊಡಿಸುವುದಾಗಿ ನಂಬಿಸಿ, 200ಕ್ಕೂ ಅಧಿಕ ಸಾರ್ವಜನಿಕರಿಂದ ಹಣ ಪಡೆದು ಮೋಸ ಮಾಡಿರುವ ಬಗ್ಗೆ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸದರಿ ಪ್ರಕರಣ ಸಿಸಿಬಿ ಘಟಕದಲ್ಲಿ ತನಿಖೆಯಲ್ಲಿದೆ. ಹಾಗಾಗಿ ಯಾರಾದರೂ ಈ ಕಂಪನಿಯಿಂದ ಮೋಸ ಹೋಗಿದ್ದಲ್ಲಿ, ಪೂರಕ ದಾಖಲಾತಿಗಳೊಂದಿಗೆ ಮೈಸೂರು ನಗರ ಸಿಸಿಬಿ ಘಟಕದ ಸಂಘಟಿತ ಅಪರಾಧ ಮತ್ತು ರೌಡಿ ಪ್ರತಿಬಂಧಕ ದಳದ ಪೊಲೀಸ್ ಇನ್ಸ್‌ಪೆಕ್ಟರ್ ಅವರನ್ನು ಭೇಟಿ ಮಾಡಿ, ದೂರು ಸಲ್ಲಿಸಲು ಕೋರಲಾಗಿದೆ.

ಸ್ಪಾನಲ್ಲಿ ವೇಶ್ಯಾವಾಟಿಕೆ: ಮಹಿಳೆ ಪೊಲೀಸ್ ವಶಕ್ಕೆ

ಮೈಸೂರು, ಜೂ.24– ಪ್ರವಾಸಿ ತಾಣವಾದ ಮೈಸೂರು ಮೃಗಾಲಯದ ಸಮೀಪವೇ ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಮಹಿಳೆಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಗರ ಸಿಸಿಬಿ ಪೊಲೀಸರು, ಖಚಿತ ಮಾಹಿತಿ ಮೇರೆಗೆ ನಜರ್‌ಬಾದ್ ಪೊಲೀಸ್ ಠಾಣಾ ವ್ಯಾಪ್ತಿಯ ಮೃಗಾಲಯ ರಸ್ತೆಯಲ್ಲಿರುವ ಬ್ಯೂಟಿ ಜೋನ್ ಅಂಡ್ ಸ್ಪಾ ಮೇಲೆ ದಾಳಿ ನಡೆಸಿದಾಗ ಅಲ್ಲಿ ವೇಶ್ಯಾವಾಟಿಕೆ ನಡೆಸುತ್ತಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಸ್ಪಾ ನಡೆಸುತ್ತಿದ್ದ ಮಹಿಳೆಯನ್ನು ವಶಕ್ಕೆ ಪಡೆದು, ಮೂವರು ಯುವತಿಯರನ್ನು ರಕ್ಷಿಸಲಾಗಿದೆ. ಈ ಸಂಬಂಧ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯ ಬಾಲನ್ಯಾಯ ಮಂಡಳಿ ಅಧ್ಯಕ್ಷರಾಗಿ ನಿವೃತ್ತ ನ್ಯಾಯಮೂರ್ತಿ ಪಿ.ಕೃಷ್ಣಭಟ್ ನೇಮಕ



ಮೈಸೂರು, ಜೂ.24(ಎಸ್‌ಪಿಎನ್)– ಕರ್ನಾಟಕ ರಾಜ್ಯ ಬಾಲನ್ಯಾಯ ಮಂಡಳಿಯ ಅಧ್ಯಕ್ಷರಾಗಿ ನಿವೃತ್ತ ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಆದೇಶಿಸಿದೆ. ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ನಿಯಮ, 87ರನ್ವಯ ಮಂಡಳಿಗೆ ಸದಸ್ಯ ಕಾರ್ಯದರ್ಶಿಯಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕರು, ಸದಸ್ಯರಾಗಿ ಬೆಂಗಳೂರಿನ (ಎಸ್‌ಪಿಎಡಿ) ಸೊಸೈಟಿ ಫಾರ್ ಪೀಪಲ್ಸ್ ಆಕ್ಷನ್ ಫಾರ್ ಡೆವಲೆಪ್‌ಮೆಂಟ್ ಬಿ.ವಿಜಯಕುಮಾರ್, ನಿಮ್ಹಾನ್ಸ್‌ನ ಡಿಪಾರ್ಟ್‌ಮೆಂಟ್ ಆಫ್ ಚೈಲ್ಡ್ ಅಂಡ್ ಅಡೋಲೆಸೆಂಟ್ ಸೈಕಿಯಾಟ್ರಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಎಂ.ರಾಜೇಂದ್ರ, ಎನ್‌ಎಲ್‌ಎಸ್‌ಐಯುನ ಕಾನೂನು ಸಹಾಯಕ ಪ್ರಾಧ್ಯಾಪಕಿ ಡಾ.ಮಧುಬಂತಿ ಸಂಧ್ಯಾ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಾ.ಕೆ.ಟಿ.ತಿಪ್ಪೇಸ್ವಾಮಿ ಅವರನ್ನು ನೇಮಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧೀನ ಕಾರ್ಯದರ್ಶಿ–3 ಆರ್.ಲತಾ ಸೋಮವಾರ ಆದೇಶಿಸಿದ್ದಾರೆ

ಬೆಂಗಳೂರು ಸೇರಿ ರಾಜ್ಯದ ಹಲವೆಡೆ ಲೋಕಾಯುಕ್ತ ದಾಳಿ, ಶೋಧ

ಬೆಂಗಳೂರು: ಭ್ರಷ್ಟ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ದಾಳಿ ಮುಂದುವರಿದಿದೆ. ಮಂಗಳವಾರ ಬೆಳಗ್ಗೆ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಕಡೆಗಳಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಅಧಿಕಾರಿಗಳ ಮನೆ, ಕಚೇರಿಗಳಲ್ಲಿ ಶೋಧ ಮುಂದುವರಿಸಿದ್ದಾರೆ.

ಪ್ರಕಾಶ್ ಎಇ, (ಬಿಬಿಎಂಪಿ, ಗೋವಿಂದರಾಜನಗರ, ಬೆಂಗಳೂರು), ಡಾ. ಎಸ್. ಪ್ರದೀಪ್, (ಅಸೋಸಿಯೇಟ್ ರಿಸರ್ಚ್ ಡೈರೆಕ್ಟರ್, ಅರ್ಗ್ಯಾನಿಕ್ ಫಾರ್ಮಿಂಗ್ ಶಿವಮೊಗ್ಗ), ಲತಾಮಣಿ (ಲೆಕ್ಕಾಧಿಕಾರಿ, ಪಟ್ಟಣ ಪುರಸಭೆ, ಚಿಕ್ಕಮಗಳೂರು).

ಕೆ.ಜಿ. ಅಮರನಾಥ್ (ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಆನೇಕಲ್).

ಧ್ರುವರಾಜ್ (ಪಟ್ಟಣ ಪೊಲೀಸ್ ನಿರೀಕ್ಷಕ, ಗದಗ), ಅಶೋಕ್ ವಸಂದ್ (ಎಂಜಿನಿಯರ್, ಮಲಪ್ರಭಾ ಯೋಜನೆ, ಧಾರವಾಡ), ಮಲ್ಲಿಕಾರ್ಜುನ ಅಲಿಪುರ (ಮಾಜಿ ಎಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕಲಬುರ್ಗಿ), ರಾಮಚಂದ್ರ (ಪಿಡಿಒ, ಕಲಬುರ್ಗಿ), ಗದಗ ಶಹರ ಠಾಣೆ ಸಿಪಿಐ ಡಿಬಿ ಪಾಟೀಲ್.

ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕುಸಿತ; ಬಿಇಓ, ಬಿಆರ್‌ಸಿ, ಡಿಡಿಪಿಐ ಸೇರಿ ಇತರರಿಗೆ ಜಿಪಂ ನೋಟಿಸ್


ಸೂಕ್ತ ಸಮಜಾಯಿಷಿ ನೀಡದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ಶಿಫಾರಸ್ಸು; ಜಿಪಂ ಸಿಇಓ ಎಚ್ಚರಿಕೆ

ಮೈಸೂರು, ಜೂ.24(ಎಸ್‌ಪಿಎನ್)–2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಸರ್ಕಾರಿ, ಅನುದಾನಿತ, ಅನುದಾನರಹಿತ ಶಾಲೆಗಳಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ಹಿನ್ನೆಲೆಯಲ್ಲಿ ಬಿಇಓ, ಬಿಆರ್‌ಸಿ ಹಾಗೂ ಡಿಡಿಪಿಐ (ಆಡಳಿತ), ಡಿಡಿಪಿಐ(ಅಭಿವೃದ್ಧಿ) ಸೇರಿದಂತೆ ಇತರರಿಗೆ ಕಾರಣ ಕೇಳಿ ಮೈಸೂರು ಜಿಲ್ಲಾ ಪಂಚಾಯತ್ ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ಫಲಿತಾಂಶ ಹಿನ್ನಡೆಗೆ ಸರಿಯಾದ ಸಮರ್ಥನೆ ನೀಡದ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು ಎಂಬ ಅಂಶವನ್ನು ಉಲ್ಲೇಖಿಸಿ ಸುತ್ತೋಲೆ ಹೊರಡಿಸಲಾಗಿದೆ ಎಂದು ಸಿಇಓ ಎಸ್.ಯುಕೇಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಈಗಾಗಲೇ ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಮೈಸೂರು ಜಿಲ್ಲೆಯ 178 ಶಾಲೆಯ ಮುಖ್ಯಶಿಕ್ಷಕರಿಗೆ ಡಿಡಿಪಿಐ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರು ಜಿಲ್ಲೆ ಕಳೆದ ಬಾರಿ 7ನೇ ಸ್ಥಾನದಲ್ಲಿತ್ತು. ಈ ಬಾರಿ 15ನೇ ಸ್ಥಾನ ಪಡೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿ ಶಾಲಾ ಫಲಿತಾಂಶ ವೃದ್ಧಿಸಲು ಶಿಕ್ಷಣ ಇಲಾಖೆ ರೂಪಿಸಿದ್ದ 50 ಅಂಶಗಳ ಕಾರ್ಯಕ್ರಮ ಪ್ರಯೋಜನವಾಗಿಲ್ಲ. ಅಲ್ಲದೆ, ಬಿಇಓ ಹಂತದಲ್ಲಿ ಫಲಿತಾಂಶ ವೃದ್ಧಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂಬ ಮಾತು ಶಿಕ್ಷಕರ ವಲಯದಿಂದಲೇ ಕೇಳಿಬಂದಿತ್ತು.

2024–25ನೇ ಎಸ್‌ಎಸ್‌ಎಲ್‌ಸಿ ಟಾಪ್ ಐದರೊಳಗೆ ಬರಬೇಕೆಂಬ ಮೈಸೂರು ಜಿಲ್ಲಾ ಪಂಚಾಯತ್ ಕನಸು ನುಚ್ಚು ನೂರಾಗಿದೆ. ಹೀಗಾಗಿ ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಕುಸಿಯಲು ಏನು ಕಾರಣ ಎಂದು ತಿಳಿದುಕೊಳ್ಳಲು ಶಿಕ್ಷಣ ಇಲಾಖೆ ಇದೀಗ ಕಡಿಮೆ ಫಲಿತಾಂಶ ಪಡೆದಿರುವ ಶಾಲೆಗಳಿಗೆ ನೋಟಿಸ್ ನೀಡಿದ್ದು, ಲಿಖಿತ ಸಮಜಾಯಿಷಿ ಕೊಡಲು ಸೂಚಿಸಲಾಗಿದೆ.



> ಮೈಸೂರು ಜಿಲ್ಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಡಿಮೆ ಫಲಿತಾಂಶ ಬಂದಿರುವ ಹಿನ್ನೆಲೆಯಲ್ಲಿ ಡಿಡಿಪಿಐ (ಅಭಿವೃದ್ಧಿ ಮತ್ತು ಆಡಳಿತ), ಬಿಇಓ, ಬಿಆರ್‌ಸಿಗಳಿಗೆ ಸೂಕ್ತ ಕಾರಣ ನೀಡುವ ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.
> -ಎಸ್.ಯುಕೇಶ್ ಕುಮಾರ್,
> ಸಿಇಓ, ಮೈಸೂರು ಜಿಲ್ಲಾ ಪಂಚಾಯತ್

ಮೈಸೂರು ಉತ್ತರ ವಲಯದಲ್ಲೇ 57 ಶಾಲೆಗಳು!: ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲೂಕಿನ 24 ಸರ್ಕಾರಿ ಶಾಲೆ, ಅನುದಾನಿತ 5, ಅನುದಾನ ರಹಿತ 5 ಸೇರಿದಂತೆ ಒಟ್ಟು 34 ಶಾಲೆಗಳು. ಹುಣಸೂರಿನ 24 ಸರ್ಕಾರಿ ಶಾಲೆ, ಅನುದಾನಿತ 5, ಅನುದಾನಿತ ರಹಿತ 7 ಸೇರಿದಂತೆ ಒಟ್ಟು 36, ಕೆ.ಆರ್.ನಗರ ಸರ್ಕಾರಿ ಶಾಲೆ 13, ಅನುದಾನಿತ 7, ಅನುದಾನ ರಹಿತ 5 ಶಾಲೆ ಸೇರಿದಂತೆ ಒಟ್ಟು 25 ಶಾಲೆಗಳು. ಮೈಸೂರು ಉತ್ತರದ ಸರ್ಕಾರಿ ಶಾಲೆ 7, ಅನುದಾನಿತ 19, ಅನುದಾನಿತ ರಹಿತ 31 ಸೇರಿದಂತೆ ಒಟ್ಟು 57 ಶಾಲೆಗಳು.

110 ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಫಲಿತಾಂಶ: ಮೈಸೂರು ದಕ್ಷಿಣ ವಲಯದ ಸರ್ಕಾರಿ ಶಾಲೆ 4, ಅನುದಾನಿತ 9, ಅನುದಾನಿತ ರಹಿತ 7 ಸೇರಿದಂತೆ ಒಟ್ಟು 20 ಶಾಲೆಗಳು. ನಂಜನಗೂಡಿನ ಸರ್ಕಾರಿ ಶಾಲೆ 10, ಅನುದಾನಿತ 8, ಅನುದಾನ ರಹಿತ 3 ಸೇರಿದಂತೆ ಒಟ್ಟು 21 ಶಾಲೆಗಳು. ಪಿರಿಯಾಪಟ್ಟಣ ಸರ್ಕಾರಿ ಶಾಲೆ 14, ಅನುದಾನಿತ 3, ಅನುದಾನ ರಹಿತ 4 ಸೇರಿ ಒಟ್ಟು 21 ಶಾಲೆಗಳು. ಮೈಸೂರು ತಾಲೂಕಿನ ಸರ್ಕಾರಿ ಶಾಲೆ 8, ಅನುದಾನಿತ 2, ಅನುದಾನ ರಹಿತ 4 ಸೇರಿದಂತೆ ಒಟ್ಟು 14 ಶಾಲೆಗಳು. ತಿ.ನರಸೀಪುರದ ಸರ್ಕಾರಿ ಶಾಲೆ 6, ಅನುದಾನಿತ 10 , ಅನುದಾನ ರಹಿತ 8 ಸೇರಿ ಒಟ್ಟು 24 ಶಾಲೆಗಳು. ಮೈಸೂರು ಜಿಲ್ಲೆಯ ಸರ್ಕಾರಿ ಶಾಲೆ 110, ಅನುದಾನಿತ 68, ಅನುದಾನ ರಹಿತ 74 ಸೇರಿ ಒಟ್ಟು 252 ಶಾಲೆಗಳಲ್ಲಿ ಶೇ.60ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವುದು ಚಿಂತನೆಗೆ ತಳ್ಳಿದೆ.

ಸುತ್ತೋಲೆಯಲ್ಲಿ ಏನಿತ್ತು: ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಗುಣಾತ್ಮಕ ಫಲಿತಾಂಶಕ್ಕಾಗಿ ವರ್ಷದ ಆರಂಭದಲ್ಲಿಯೇ ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಗುರುತಿಸಿ, ವಿವಿಧ ಯೋಜನೆಗಳನ್ನು ಶಾಲಾ ಹಂತದಲ್ಲಿ ಅನುಷ್ಠಾನಗೊಳಿಸಲು ತಿಳಿಸಲಾಗಿತ್ತು. ಆದರೂ, ಸರ್ಕಾರಿ, ಅನುದಾನಿತ ಶಾಲೆಗಳಲ್ಲಿನ ಫಲಿತಾಂಶ ಶೇ. 60ಕ್ಕಿಂತ ಕಡಿಮೆಯಾಗಿದೆ. ಇಂತಹ ಶಾಲೆ ಮತ್ತು ವಿಷಯವಾರು ಶಿಕ್ಷಕರನ್ನು ಗುರುತಿಸಿ, ವರದಿ ಸಲ್ಲಿಸುವಂತೆ ಎಲ್ಲ ಜಿಲ್ಲಾ ಡಿಡಿಪಿಐಗಳಿಗೆ, ಶಾಲಾ ಶಿಕ್ಷಣ ಇಲಾಖೆ ಆಯುಕ್ತರು ಸೂಚಿಸಿದ್ದಾರೆ.

ಸರ್ಕಾರಿ ಅನುದಾನಿತ ಶಾಲೆಗಳಲ್ಲಿ ಶೇ. 60ಕ್ಕಿಂತ ಕಡಿಮೆ ಫಲಿತಾಂಶ ಬಂದಿರುವ ವಿಷಯ ಶಿಕ್ಷಕರನ್ನು ಗುರುತಿಸಿ ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯಬೇಕು. ಇದಲ್ಲದೆ, ವಿಷಯ ಶಿಕ್ಷಕರು ನಿರಂತರವಾಗಿ ಮೂರು ವರ್ಷಗಳಲ್ಲಿ ಶೇ. 60ಕ್ಕಿಂತ ಕಡಿಮೆ ಫಲಿತಾಂಶ ನೀಡಿದರೆ, ಅಂತಹ ಶಿಕ್ಷರ ವೇತನಾನುದಾನಕ್ಕೆ ತಡೆಹಿಡಿಯಬೇಕು. ಐದು ವರ್ಷಗಳಲ್ಲಿ ಅನುದಾನಿತ ಶಾಲೆಗಳಲ್ಲಿ ಶೇ. 50ರಷ್ಟು ವಿದ್ಯಾರ್ಥಿಗಳು ಅನುತ್ತೀರ್ಣರಾದರೆ, ಶಾಲೆಗೆ ನೀಡುವ ವೇತನಾನುದಾನ ತಡೆಯುವಂತೆ ಆದೇಶದಲ್ಲಿ ತಿಳಿಸಲಾಗಿದೆ. ಪ್ರತಿ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಪ್ರಕಟಗೊಂಡ ನಂತರ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಫಲಿತಾಂಶವನ್ನು ಪರಿಶೀಲಿಸಿ ಸಂಬಂಧಪಟ್ಟ ಶಿಕ್ಷಕರು ಮತ್ತು ಶಾಲೆಗಳ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಬೇಕು. ತಾವು ಕೈಗೊಂಡ ಕ್ರಮಗಳ ಬಗ್ಗೆ ಸಕ್ಷಮ ಪ್ರಾಧಿಕಾರದ ಆಯುಕ್ತರಿಗೆ ವರದಿ ಸಲ್ಲಿಸುವಂತೆ ಆದೇಶದಲ್ಲಿ ಆಯುಕ್ತರು ತಿಳಿಸಿದ್ದಾರೆ.

ಶಿಕ್ಷಕರ ಕೊರತೆ ನೀಗಿಸಿ: ಗುಣಮಟ್ಟ ಶಿಕ್ಷಣ ನೀಡಲು ಸರ್ಕಾರಿ ಶಾಲಾ ಶಿಕ್ಷಕರಿಗೆ ಕೋಟಿಕೋಟಿ ವೆಚ್ಚದಲ್ಲಿ ಪ್ರತಿವರ್ಷ ತರಬೇತಿ ನೀಡಲಾಗುತ್ತಿದೆ. ಆದರೆ, ಆ ತರಬೇತಿ ಪ್ರಕಾರ ಸರ್ಕಾರಿ ಶಾಲಾ ವಿದ್ಯಾರ್ಥಿಗಳ ಜ್ಞಾನದ ಮಟ್ಟ ಹೆಚ್ಚಿಸಲು ಸಾಧ್ಯವಾಗಿಲ್ಲ. ಪ್ರಾಥಮಿಕ ಹಂತದಲ್ಲಿ ವಿಷಯ ಶಿಕ್ಷಕರ ನೇಮಕವಾಗಿಲ್ಲ. ಕಾಯಂ ಶಿಕ್ಷಕರ ಕೊರತೆ ಸೇರಿದಂತೆ ಹಲವು ಸಮಸ್ಯೆಗಳಿಂದಾಗಿ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಏರಿಕೆ ಕಾಣುತ್ತಿಲ್ಲ ಎಂಬುದು ಶಿಕ್ಷಕರ ವಲಯದಲ್ಲಿ ಈ ಮಾತು ಕೇಳಿ ಬರುತ್ತಿದೆ. ಅಲ್ಲದೆ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ವಿಲೀನಗೊಳಿಸಿ, ಅಲ್ಲಿನ ಶಿಕ್ಷಕರನ್ನು ಪಾಠ–ಪ್ರವಚನಗಳಿಗೆ ಬಳಸಿಕೊಳ್ಳಲು ಸರ್ಕಾರ ಬೇಗ ನಿರ್ಧಾರ ಕೈಗೊಂಡು ಶಿಕ್ಷಕರ ಕೊರತೆ ನೀಗಿಸಲು ಕ್ರಮ ಕೈಗೊಳ್ಳಬೇಕು ಎನ್ನುತ್ತಾರೆ ಬಹುತೇಕ ಶಿಕ್ಷಕರು.

ಮೈಸೂರು ಮಿತ್ರ

ಯಶಸ್ಸು ಗಳಿಸಲು ಬಸವಣ್ಣನವರ ತತ್ವ ಸಿದ್ಧಾಂತ ಅಳವಡಿಸಿಕೊಳ್ಳಿ


ಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಲಹೆ

ಸರಗೂರು, ಜೂ.24– ಸಾಮಾಜಿಕವಾಗಿ ಅನೇಕ ಕಾಂತ್ರಿ ಕಹಳೆ ಮೊಳಗಿಸುವ ಮೂಲಕ ಸಮಾನತೆ ತರಲು ಪ್ರಯತ್ನಿಸಿದವರಲ್ಲಿ ಬಸವಣ್ಣ ಮೊದಲಿಗರು ಎಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವೀರಶೈವ ಲಿಂಗಾಯತ ಸಮಾಜದ ನಿವೇಶನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು ಘಟಕದಿಂದ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರ ಜಯಂತಿ ಹಾಗೂ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಯಶಸ್ಸು ಗಳಿಸಲು ಬಸವಣ್ಣನವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು. ಮಹಾತ್ಮರನ್ನು ಸ್ಮರಿಸುವ ಮೂಲಕ ಜೀವನದಲ್ಲಿ ಸಾರ್ಥಕತೆ ಕಾಣಬೇಕು. ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಿ ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಸರ್ಕಾರ ಆಡಳಿತ ದೃಷ್ಟಿಯಿಂದ ಹೆಚ್.ಡಿ.ಕೋಟೆ ಮತ್ತು ಸರಗೂರು ಎಂದು ವಿಭಾಗಿಸಿರಬಹುದು. ಆದರೆ ಭಾವನಾತ್ಮಕವಾಗಿ ನಾವೆಲ್ಲಾ ಒಂದೇ ಎಂದು ಸಾರಲು ಒಟ್ಟಾಗಿ ನಡೆಸುತ್ತಿರುವ ಈ ಕಾರ್ಯಕ್ರಮ ಸಾಕ್ಷಿ ಎಂದರು.

ಸಂಸದ ಯದುವೀರ್ ಮಾತನಾಡಿ, ರಾಜ್ಯದಲ್ಲಿ ಹುಟ್ಟಿ ಸಮಾಜದ ಪರಿವರ್ತನೆಗೆ ಶ್ರಮಿಸಿದ ಬಸವಣ್ಣನವರ ಭೋದನೆಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು. ಜಯಂತಿ ಕಾರ್ಯಕ್ರಮಕ್ಕೆ ದಾರಿಯುದ್ದಕ್ಕೂ ಹೆಸರಿರುವ ಫ್ಲೆಕ್ಸ್‌ಗಳಲ್ಲಿ ಅಳವಡಿಸಿರುವ ಬಸವಣ್ಣನವರ ವಚನಗಳು ಕಾರ್ಯಕ್ರಮಕ್ಕೆ ಸೂಕ್ತವಾಗಿದೆ. ಸಮಾಜದ ಪರಿವರ್ತನೆಗಾಗಿ ಹೋರಾಡಿದ ಉದಾರ ಚಿಂತನೆಯ ಸಾಂಸ್ಕೃತಿಕ ನಾಯಕ ಬಸವಣ್ಣನವರು ಬಸವನ ಬಾಗೇವಾಡಿಯಲ್ಲಿ ಜನಿಸಿ ಶಾಂತ ವಾತಾವರಣದಲ್ಲಿ ಬೆಳೆದು ರಾಜ ಬಿಜ್ಜಳನ ಆಸ್ಥಾನದಲ್ಲಿ ಕಾಯಕ ಮಾಡುತ್ತಾ ಆದರ್ಶ ಪೂರಕವಾದ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು. ಸಮ ಸಮಾಜಕ್ಕೆ ವಚನಗಳನ್ನು ನೀಡಿದ ಅವರ ಭೋದನೆಗಳು ಇಂದಿಗೂ ಪ್ರಸ್ತುತ. ಬಸವ ಭವನ ನಿರ್ಮಾಣಕ್ಕೆ ಸಂಸದರ ನಿಧಿಯಿಂದ ಅನುದಾನ ನೀಡುವ ಭರವಸೆ ನೀಡಿದರು.

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಮಹದೇವ ಬಿದರಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲೇ ಸಾಮಾಜಿಕ ಕ್ರಾಂತಿ ಮಾಡಿದವರು. ಶರಣರ ಯೋಚನೆಯಂತೆ ಸಮಾನತೆ, ಮಾನವೀಯ ದೃಷ್ಟಿಕೋನ ಸಮಾಜದಲ್ಲಿರಬೇಕು. ತಾಲೂಕು ಅಧ್ಯಕ್ಷ ವೀರಭದ್ರಪ್ಪ, ಮಾಜಿ ಅಧ್ಯಕ್ಷ ಡಿ.ಜಿ.ಶಿವರಾಜು ಅವರು ಸಮುದಾಯ ಒಗ್ಗೂಡಿಸಿ ಸರಗೂರಿನಲ್ಲಿ ಬಸವ ಭವನ ನಿರ್ಮಾಣಕ್ಕೆ ನಿವೇಶನ ಖರೀದಿಸಿರುವುದು ಸಂತಸ ತಂದಿದೆ. ನಮ್ಮಗಳ ಸಂಪೂರ್ಣ ಸಹಕಾರ ನೀಡಲಾಗುವುದು ಎಂದರು.


ಸರಗೂರಿನಲ್ಲಿ ನಡೆದ ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಶಾಸಕರಾದ ಗಣೇಶ್ ಪ್ರಸಾದ್, ಜಿ.ಟಿ.ದೇವೇಗೌಡ ಮಾತನಾಡಿದರು. ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಸೋಮಹಳ್ಳಿ ವೀರಸಿಂಹಾಸನ ಶಿಲಾ ಮಠದ ಸಿದ್ದಮಲ್ಲ ಸ್ವಾಮೀಜಿ, ಗಾವಡಗೆರೆ ಗುರುಲಿಂಗ ಜಂಗಮದೇವರ ಮಠದ ನಟರಾಜ ಸ್ವಾಮೀಜಿ ಆಶೀರ್ವಚನ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನಾ ಪಟ್ಟಣದ ಕೆಇಬಿ ಕಚೇರಿ ಮುಂಭಾಗದಿಂದ ಬಸವೇಶ್ವರರ ಪುತ್ಥಳಿಯನ್ನು ಬೆಳ್ಳಿರಥದಲ್ಲಿ ಪ್ರತಿಷ್ಠಾಪಿಸಿ ಶರಣರ ವಚನಗಳು, ಅಲಂಕೃತ ಸ್ಥಬ್ಧ ಚಿತ್ರಗಳು, ಭಜನಾಮೇಳ, ವೀರಗಾಸೆ ಕುಣಿತ, ಡೊಳ್ಳುಕುಣಿತ, ಮಂಗಳ ವಾದ್ಯ, ಚಂಡೆ, ಮದ್ದಳೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ವೇದಿಕೆವರೆಗೆ ಮೆರವಣಿಗೆ ಮಾಡಲಾಯಿತು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಬಿಡುಗಲು ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಹಂಚೀಪುರದ ತೋಂಟದಾರ್ಯ ಸ್ವಾಮೀಜಿ, ಮಾಜಿ ಸಚಿವ ಎಂ.ಶಿವಣ್ಣ ಜೆಡಿಎಸ್ ಮುಖಂಡ ಜಯಪ್ರಕಾಶ್, ಎಸ್.ಎಸ್.ಪ್ರಭುಸ್ವಾಮಿ, ಸ್ನೇಹ ಸ್ತ್ರೀ ಸಮಾಜದ ಅಧ್ಯಕ್ಷೆ ಸುಧಾ, ತಹಸೀಲ್ದಾರ್ ಮೋಹನಕುಮಾರಿ, ಉದ್ಯಮಿ ಯು.ಎಸ್.ಶೇಖರ್, ವೀರಶೈವ ಲಿಂಗಾಯತ ಮಹಾಸಭಾ ಮಾಜಿ ಅಧ್ಯಕ್ಷ ಡಿ.ಜಿ.ಶಿವರಾಜು, ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಬಸವರಾಜು, ಬಸವ ಬಳಗದ ಜಿಲ್ಲಾಧ್ಯಕ್ಷ ಬಿ.ಕೆ.ನಾಗರಾಜು, ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್, ಹೆಚ್.ಡಿ.ಕೋಟೆ ಅಧ್ಯಕ್ಷ ರುದ್ರಪ್ಪ ಮಾಜಿ ಅಧ್ಯಕ್ಷ ಬಸವರಾಜು, ಸಿಪಿಐ ಪ್ರಸನ್ನ ಕುಮಾರ್, ಎಸ್‌ಐ ಕಿರಣ್, ವೀರಶೈವ ಲಿಂಗಾಯತ ಮಹಾಸಭಾ ಕಾರ್ಯಾಧ್ಯಕ್ಷ ಸಿ.ಕೆ.ಗಿರೀಶ್, ಕಾರ್ಯದರ್ಶಿ ಗುರುಸ್ವಾಮಿ, ಬಸವರಾಜು, ಜಯಕುಮಾರ್, ಬಸವ ಬಳಗದ ಅಧ್ಯಕ್ಷ ಗಣಪತಿ, ಡಿ.ಸಿ.ಸಿದ್ದಪ್ಪ, ಹೆಚ್.ಸಿ.ಮಹದೇವಸ್ವಾಮಿ, ಮಂಜುಳಾ, ಪಿ.ನಂದೀಶ್, ಜಿಲ್ಲಾ ಮಹಿಳಾಧ್ಯಕ್ಷೆ ಧನ್ಯ, ಮಹಿಳಾ ಘಟಕದ ಅಧ್ಯಕ್ಷೆ ಜ್ಯೋತಿ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಮುಖಂಡ ಎಂ.ಎನ್. ಅಣ್ಣಯ್ಯ ಸ್ವಾಮಿ, ಎಸ್.ಎನ್.ಮೋಹನ್ ಕುಮಾರ್, ಗಿರೀಶ್, ಎಂ.ಕೆಂಡಗಣ್ಣಸ್ವಾಮಿ, ಸಿದ್ದಪ್ಪ, ಮಂಜುನಾಥ್, ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕ, ಮಹಿಳಾ ಘಟಕ ಸದಸ್ಯರು ಮತ್ತು ಸಮುದಾಯದ ಬಂಧುಗಳು ಆಗಮಿಸಿದ್ದರು.

> ಬಸವಣ್ಣನವರು ಅಂದು ನೀಡಿದ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ. ಅವರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಕ್ಷೇತ್ರದ ಅಭಿವೃದ್ಧಿಗಾಗಿ ದುಡಿಯುತ್ತಿದ್ದೇನೆ. ಜನಸೇವಕನಾಗಿ ಕೆಲಸ ಮಾಡುತ್ತಿದ್ದೇನೆ ಹೊರತು ನಾನೂ ಎಂದಿಗೂ ರಾಜಕೀಯ ಮಾಡಿಲ್ಲ. ಯಾವುದೇ ಟೀಕೆ ಟಿಪ್ಪಣಿಗೆ ಕಿವಿಕೊಡದೆ ಎಲ್ಲಾ ಸಮುದಾಯ ಭವನಗಳಿಗೆ ಅನುದಾನ ನೀಡಿದ್ದೇನೆ. ಬಸವ ಭವನಕ್ಕೂ 25 ಲಕ್ಷ ಅನುದಾನ ನೀಡಿದ್ದೇನೆ. ಸರ್ಕಾರದ ಗಮನಕ್ಕೆ ತಂದು 3 ಕೋಟಿ ಅನುದಾನ ಕೊಡಿಸಲು ಪ್ರಯತ್ನಿಸುತ್ತೇನೆ.
>
> – ಅನಿಲ್, ಶಾಸಕ

ಕಿರಗಸೂರು ಗ್ರಾಪಂಗೆ ನಾಗರತ್ನಮ್ಮ ಅಧ್ಯಕ್ಷೆ


ಕಿರಗಸೂರು ಗ್ರಾಪಂ ನೂತನ ಅಧ್ಯಕ್ಷೆ ನಾಗರತ್ನಮ್ಮ ಅವರನ್ನು ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಜೂ.24– ತಾಲೂಕಿನ ಕಿರಗಸೂರು ಗ್ರಾಪಂ ನೂತನ ಅಧ್ಯಕ್ಷೆಯಾಗಿ ನಾಗರತ್ನಮ್ಮ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಸಿ.ನಿಂಗರಾಜು ಅಧಿಕಾರಾವಧಿ ಪೂರೈಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಮಂಗಳವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ನಾಗರತ್ನಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕಾವೇರಿ ನೀರಾವರಿ ನಿಗಮದ ಎಇಇ ಮಂಜುನಾಥ್ ಪ್ರಕಟಿಸಿದರು. ಸಹಾಯಕರಾಗಿ ಧರಣೇಶ್ ಕಾರ್ಯ ನಿರ್ವಹಿಸಿದರು.

ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಚಿನ್ನತಾಯಮ್ಮ, ನಿಕಟಪೂರ್ವ ಅಧ್ಯಕ್ಷ ಸಿ.ನಿಂಗರಾಜು, ಸದಸ್ಯರಾದ ಭಾಗ್ಯ, ಶಿವರಾಜು, ನಾಗರಾಜು, ಚಂದ್ರಮ್ಮ, ಜ್ಯೋತಿ ಕಾಂತರಾಜು, ಗಿರಿಜಮ್ಮ, ಎಂ.ಮಹೇಶ್, ರಾಜೇಶ್ವರಿ, ಮಂಗಳಮ್ಮ, ಪಿ.ನಾಗರಾಜು, ಸರೋಜಮ್ಮ, ಬಿ.ಮಹದೇವಸ್ವಾಮಿ, ಆರ್.ಗಿರೀಶ್, ಕಾಮಿನಿ ಹಾಜರಿದ್ದು ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಕಸಬಾ ಪಿಎಸಿಎಸ್ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ಗ್ರಾಪಂನಲ್ಲಿ ಅವಿರೋಧ ಆಯ್ಕೆ ಮಾಡುವ ಮೂಲಕ ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಲಾಗಿದೆ. ಕಳೆದ 3 ಅವಧಿಗೂ ಗ್ರಾಪಂ ವರಿಷ್ಠರ ಆಯ್ಕೆಯನ್ನು ಅವಿರೋಧವಾಗಿ ಆಯ್ಕೆ ಮಾಡಲಾಗುತ್ತಾ ಬರುತ್ತಿದೆ. ನೂತನ ಅಧ್ಯಕ್ಷರಿಗೆ ಗ್ರಾಪಂನ ಎಲ್ಲಾ ಸದಸ್ಯರು ಸಹಕಾರ ನೀಡುವ ಮೂಲಕ ಅವರು ಉತ್ತಮ ಆಡಳಿತ ನಡೆಸಲು ಅವಕಾಶ ಮಾಡಿಕೊಡಬೇಕಿದೆ ಎಂದರು.

ಮಾಜಿ ಸದಸ್ಯ ಬೋರ್‌ವೆಲ್ ಪರಶಿವ ಮಾತನಾಡಿದರು. ಈ ವೇಳೆ ಡೈರಿ ಅಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷ ಏಳುಮಲೆ ಮಂಜು, ಫೈನಾನ್ಸ್ ಕಾಂತರಾಜು, ಗ್ರಾಪಂ ಮಾಜಿ ಅಧ್ಯಕ್ಷರಾದ ಪ್ರಕಾಶ್, ರವಿ, ಪುಟ್ಟಯ್ಯ, ಡಿಎಲ್ ಮಹದೇವಪ್ಪ ಸೋಮಣ್ಣ, ನಾಗೇಂದ್ರ ಪ್ರಸಾದ್, ವೆಂಕಟೇಶ್, ರವಿ, ವಸಂತ, ಗಿರೀಶ್, ರಾಜಶೇಖರ್, ಗ್ರಾಪಂ ಕಾರ್ಯದರ್ಶಿ ಮೀನಾಕ್ಷಿ ಸೇರಿದಂತೆ ಮುಖಂಡರು, ಯಜಮಾನರು, ಗ್ರಾಮಸ್ಥರು ಹಾಜರಿದ್ದರು.

> ಗ್ರಾಪಂನ ಎಲ್ಲಾ ವಾರ್ಡ್‌ಗಳಲ್ಲಿ ಕುಡಿಯುವ ನೀರು, ಬೀದಿ ದೀಪ, ರಸ್ತೆ ಮತ್ತು ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಾಗುವುದು. ಜೊತೆಗೆ ಹೆಚ್ಚಿನ ಅನುದಾನಕ್ಕೆ ಸಚಿವರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸದರಿಗೆ ಬೇಡಿಕೆ ಸಲ್ಲಿಸಲಾಗುವುದು. ಸರ್ಕಾರದಿಂದ ಬರುವ ಅನುದಾನವನ್ನು ಗ್ರಾಪಂ ವ್ಯಾಪ್ತಿಗೊಳಪಡುವ ಎಲ್ಲಾ ಗ್ರಾಮಗಳಿಗೆ ಸಮನಾಗಿ ಹಂಚಿಕೆ ಮಾಡಿ ಗ್ರಾಮಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತದೆ. ಇದಕ್ಕೆ ಸರ್ವ ಸದಸ್ಯರು ಸಹಕರಿಸಬೇಕು.
>
> – ನಾಗರತ್ನಮ್ಮ, ನೂತನ ಅಧ್ಯಕ್ಷೆ

ಹೆಚ್.ಡಿ.ಕೋಟೆಯಲ್ಲಿ 72 ಸಿಕಲ್ ಸೆಲ್ ಪ್ರಕರಣ

ಸಿಕಲ್ ಸೆಲ್ ಜಿಲ್ಲಾ ನೋಡಲ್ ಅಧಿಕಾರಿ ಡಾ.ಜಯಂತ್

ಹೆಚ್.ಡಿ.ಕೋಟೆ, ಜೂ.24– ರಾಜ್ಯದ 150 ಸಿಕಲ್‌ಸೆಲ್ ಪ್ರಕರಣಗಳ ಪೈಕಿ ತಾಲೂಕಿನಲ್ಲಿ 72 ಪ್ರಕರಣಗಳಿವೆ ಎಂದು ಸಿಕಲ್ ಸೆಲ್‌ನ ಜಿಲ್ಲಾ ನೋಡಲ್ ಅಧಿಕಾರಿ ಡಾ.ಜಯಂತ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮತ್ತು ತಾಲೂಕು ಆರೋಗ್ಯ ಕೇಂದ್ರದ ವತಿಯಿಂದ ನಡೆದ ವಿಶ್ವ ಸಿಕಲ್ ಸೆಲ್ ದಿನ ಉದ್ಘಾಟಿಸಿ ಮಾತನಾಡಿದ ಅವರು ಹೆಚ್.ಡಿ.ಕೋಟೆಯಲ್ಲಿ 72, ಹುಣಸೂರಲ್ಲಿ 15 ಹಾಗೂ ನಂಜನಗೂಡಲ್ಲಿ 3 ಪ್ರಕರಣಗಳು ಕಾಣಿಸಿಕೊಂಡಿದ್ದು ಇವರಿಗೆ ಆರೋಗ್ಯ ಇಲಾಖೆ ಯಿಂದ ಸೂಕ್ತ ಚಿಕಿತ್ಸೆ ನೀಡ ಲಾಗುತ್ತಿದೆ ಎಂದರು.

ತಜ್ಞ ವೈದ್ಯೆ ದೀಪಾ ಭಟ್ ಮಾತನಾಡಿ, ಸಿಕಲ್ ಸೆಲ್ ಕಾಯಿಲೆ ಹಲವು ವರ್ಷಗಳಿಂದ ಇದ್ದರೂ, 2022ರಿಂದೀಚೆಗೆ ಸಿಕಲ್ ಸೆಲ್ ಅನಿಮೀಯಾ ಕಾಯಿಲೆ ತಡೆಗಟ್ಟಲು ಅಭಿಯಾನ ಆರಂಭಿಸಲಾಗಿದೆ. ಈ ಕಾಯಿಲೆ ಆದಿವಾಸಿಗಳಲ್ಲಿ ಅಲ್ಲದೇ ಚಾಮರಾಜನಗರದ ವೀರಶೈವ ಸಮಾಜದವರಲ್ಲಿ, ಹೆಚ್.ಡಿ.ಕೋಟೆ ತಾಲೂಕಿನ ಹ್ಯಾಂಡ್‌ಪೋಸ್ಟ್ ಹಾಗೂ ಉದ್ಬೂರಿನಲ್ಲಿ ಮುಸ್ಲಿಂ ಸಮುದಾಯದವರಿಗೆ ಕಾಣಿಸಿಕೊಂಡಿದೆ ಎಂದರು.


ಕಾರ್ಯಕ್ರಮವನ್ನು ಡಾ.ಜಯಂತ್ ಉದ್ಘಾಟಿಸಿದರು.

ಮುಂದಿನ ದಿನಗಳಲ್ಲಿ ಸಾರ್ವಜನಿಕರು ಕಡ್ಡಾಯವಾಗಿ ಸಿಕಲ್ ಸೆಲ್ ತಪಾಸಣೆ ಮಾಡಿಸಿಕೊಳ್ಳಬೇಕು. ಒಂದು ವೇಳೆ ಕಾಯಿಲೆ ಕಂಡು ಬಂದಲ್ಲಿ ಸೂಕ್ತ ಚಿಕಿತ್ಸೆ ದೊರೆಯಲಿದ್ದು, ಅದರ ಪ್ರಯೋಜನ ಪಡೆದುಕೊಳ್ಳುವಂತೆ ಕರೆ ನೀಡಿದರು. ಒಂದು ವೇಳೆ ಈ ಕಾಯಿಲೆ ಕಾಣಿಸಿಕೊಂಡರೆ ಶೇ.40 ರಷ್ಟು ಅಂಗವಿಕಲತೆ ಎಂದು ಗುರುತಿಸಲಾಗುವುದು ಎಂದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ತಾಪಂ ಇಓ ಧರಣೇಶ್, ಟಿಹೆಚ್‌ಓ ಡಾ.ರವಿಕುಮಾರ್, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಮಧುಕುಮಾರ್, ಕರ್ನಾಟಕ ವನ್ಯಜೀವಿ ಮಂಡಳಿ ಸದಸ್ಯ ಚಿಕ್ಕಣ್ಣ, ಲ್ಯಾಂಪ್ಸ್ ಅಧ್ಯಕ್ಷ ಕಾಳಕಲ್ಕರ್, ಗ್ರಾಪಂ ಅಧ್ಯಕ್ಷ ಶೈಲೇಂದ್ರ, ಸದಸ್ಯ ಅಯ್ಯಪ್ಪ, ರತ್ನಮ್ಮ, ಬಸವರಾಜು, ಕೆ.ಆರ್.ಆಸ್ಪತ್ರೆ ಹೆಚ್‌ಓಡಿ ಶರತ್, ಟ್ರೈಬಲ್ ಅಧಿಕಾರಿ ಮಹೇಶ್, ನಾಗರಾಜು, ರವಿರಾಜ್ ಇದ್ದರು.

ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್‌ಗೆ

ಎಂಎಲ್‌ಸಿ ಡಿ.ತಿಮ್ಮಯ್ಯ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ



ನಂಜನಗೂಡು, ಜೂ.24– ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ಅವರಿಗೆ ವಿಧಾನಪರಿಷತ್ ಸದಸ್ಯ ಡಿ.ತಿಮ್ಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಕಾಂಗ್ರೆಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹಾಗೂ ಮಾಜಿ ಪುರಸಭಾ ಉಪಾಧ್ಯಕ್ಷ ದೇವರಾಜು ತಿಳಿಸಿದರು.

ನಗರದ ಅಶೋಕಪುರಂ ಬಡಾವಣೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಳ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷ ಭಾಸ್ಕರ್ ಪ್ರಸಾದ್ ಅವರು ಡಾ.ಡಿ.ತಿಮ್ಮಯ್ಯ ಅವರನ್ನು ಪೇಮೆಂಟ್ ಗಿರಾಕಿ ಎಂದು ಹೇಳಿಕೆ ನೀಡಿ ಸಣ್ಣತನ ಪ್ರದರ್ಶಿಸಿದ್ದಾರೆ. ಡಾ.ತಿಮ್ಮಯ್ಯ ಅವರು ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯಲ್ಲಿ ಅಭಿವೃದ್ಧಿಗಾಗಿ, ಅಲ್ಲದೇ ನಮ್ಮ ಜನಾಂಗದ ಶ್ರೇಯೋಭಿವೃದ್ಧಿಗಾಗಿ ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಜೊತೆಗೆ ಒಳ ಮೀಸಲಾತಿ ಹೋರಾಟಕ್ಕಾಗಿ ಧ್ವನಿ ಎತ್ತಿದವರಲ್ಲಿ ಮೊದಲಿಗರು. ಅಂತಹವರ ಬಗ್ಗೆ ಹೇಳಿಕೆ ನೀಡುವಾಗ ಭಾಸ್ಕರ್ ಪ್ರಸಾದ್ ತಿಳಿದು ಮಾತನಾಡು ವುದು ಒಳ್ಳೆಯದು. ಭಾಸ್ಕರ್ ಪ್ರಸಾದ್ ಅವರು ವಿರೋಧ ಪಕ್ಷದ ಮುಖಂಡರ ಬಳಿ ಪೇಮೆಂಟ್ ಪಡೆದು ಹೋರಾಟ ಮಾಡುತ್ತಿರುವುದಲ್ಲದೇ ಹೋರಾಟದ ದಿಕ್ಕು ತಪ್ಪಿಸುವ ಹೇಳಿಕೆ ನೀಡಿದ್ದಾರೆ. ಅವರು ಇದೇ ಚಾಳಿ ಮುಂದು ವರಿಸಿದ್ದಲ್ಲಿ ಅವರ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ವೇಳೆ ಮುಖಂಡರಾದ ಮೋಹನ, ಸಿದ್ದಪ್ಪ ಉಪಸ್ಥಿತರಿದ್ದರು.

ಡಾ.ಫ.ಗು.ಹಳಕಟ್ಟಿಯವರ ಜನ್ಮ ದಿನಾಚರಣೆ

ಮೈಸೂರು, ಜೂ.24– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಾ.ಫ.ಗು.ಹಳಕಟ್ಟಿಯವರ ಜನ್ಮದಿನ ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆಯನ್ನು ಜು.2 ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗ ಮಂದಿರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸಿಎಂ ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪುರಸಭೆಯಲ್ಲಿ ಅನುದಾನ ಬಳಕೆ ಬಗ್ಗೆ ಗಮನ ಹರಿಸಿ

ನಾಮ ನಿರ್ದೇಶಿತ ಸದಸ್ಯರಿಗೆ ಉಸ್ತುವಾರಿ ಸಚಿವರ ಸಲಹೆ

ತಿ.ನರಸೀಪುರ, ಜೂ.24– ಪುರಸಭೆಯಲ್ಲಿ ಸರ್ಕಾರದ ಅನುದಾನ ಸಮರ್ಪಕವಾಗಿ ಬಳಕೆಯಾಗುತ್ತಿದೆಯಾ ಎಂಬ ಬಗ್ಗೆ ತಮಗೆ ಮಾಹಿತಿ ನೀಡಬೇಕು ಎಂದು ನೂತನ ನಾಮ ನಿರ್ದೇಶನ ಸದಸ್ಯರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಪುರಸಭೆಗೆ ನಾಮ ನಿರ್ದೇಶನಗೊಂಡ ಸಬಿಲ್ ಖಾನ್ ಮತ್ತು ಎಂ.ನಾಗರಾಜು(ಜೋಗಿ) ಅವರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ತಿ.ನರಸೀಪುರದಲ್ಲಿ ಏನೇನು ಅಭಿವೃದ್ಧಿ ಕೆಲಸಗಳಾಗಬೇಕು. ಯಾವ ಕೆಲಸಗಳು ಅರ್ಧಕ್ಕೆ ನಿಂತಿವೆ. ಯಾವುದಕ್ಕೆ ಅನುದಾನದ ಕೊರತೆ ಇದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ಕಲೆ ಹಾಕಿ ನನ್ನ ಗಮನಕ್ಕೆ ತಂದರೆ ಅವುಗಳ ಅಭಿವೃದ್ಧಿಗೆ ಬೇಕಾದ ಅನುದಾನವನ್ನು ಸರ್ಕಾರದಿಂದ ಮಂಜೂರು ಮಾಡಿಸಿ ಕೊಡುತ್ತೇನೆ. ನಾಮ ನಿರ್ದೇಸಿತ ಸದಸ್ಯರು ಯಾವ ರೀತಿ ಕಾರ್ಯ ನಿರ್ವಹಿಸಬೇಕು. ಎಲ್ಲಾ ಸದಸ್ಯರೊಂದಿಗೆ ಹೇಗಿರಬೇಕು ಎಂಬುದರ ಬಗ್ಗೆ ತಿಳಿ ಹೇಳಿದರು.

ಇದರೊಂದಿಗೆ ಬಡ ಜನರ ಕಲ್ಯಾಣಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಿದೆಯೇ ಎಂಬುದರ ಬಗ್ಗೆ ಗಮನ ಹರಿಸುವುದರೊಂದಿಗೆ ಫಲಾನುಭವಿಗಳೊಂದಿಗೆ ನಿರಂತರ ಸಂಪರ್ಕ ಹೊಂದಬೇಕು. ಸರ್ಕಾರದಿಂದ ಅವರಿಗೆ ಆಗಬೇಕಾಗಿರುವ ಕೆಲಸ ಕಾರ್ಯಗಳನ್ನು ಮಾಡಿಸಿಕೊಡಬೇಕು ಎಂದು ನೂತನ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟರು.


ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಲಾಯಿತು.

ನೂತನ ಸದಸ್ಯ ಸಬಿಲ್ ಖಾನ್ ಮಾತನಾಡಿ, ಸರ್ಕಾರದಿಂದ ತಮ್ಮನ್ನು ನಾಮ ನಿರ್ದೇಶನ ಮಾಡಿರುವುದು ಸಂತಸ ತಂದಿದೆ. ನಾವು ಕಳೆದ 30 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ದುಡಿದು ಮಹದೇವಪ್ಪ ಹಾಗೂ ಸುನಿಲ್ ಬೋಸ್ ಅವರ ಕೈ ಬಲಪಡಿಸುವ ಕೆಲಸ ಮಾಡುತ್ತಿದ್ದೇನೆ. ಇನ್ನು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೆ ಸಹಕರಿಸುತ್ತೇನೆ ಎಂದರು.

ಪುರಸಭಾ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸೈಯದ್ ಅಹಮ್ಮದ್, ತ್ರಿಪುರ ಸುಂದರ ಅಮ್ಮನವರ ದೇವಾಲಯದ ಪಾರು ಪತ್ತೇದಾರ್ ಎಂ.ಬಿ.ಸಾಗರ್, ಸವಿತಾ ಸಮಾಜದ ಅಧ್ಯಕ್ಷ ನಾಗೇಂದ್ರ, ಇಮ್ರಾನ್, ಅಮ್ಜದ್ ಪಾಷ, ಜೆಫ್ರಿ, ಸೆಕಿಬ್, ಆಪ್ತ ಸಹಾಯಕ ಶ್ರೀನಿವಾಸ್ ಸಿದ್ದರಾಜು ಇತರರು ಈ ವೇಳೆ ಉಪಸ್ಥಿತರಿದ್ದರು.

ತಂಬಾಕು ಹದ ಮಾಡುವ ಬ್ಯಾರನ್ ಬೆಂಕಿಗಾಹುತಿ

ಬೆಟ್ಟದಪುರ, ಜೂ.24– ತಂಬಾಕು ಹದ ಮಾಡುವ ಬ್ಯಾರನ್‌ಗೆ ಬೆಂಕಿ ಬಿದ್ದು ಸಂಪೂರ್ಣ ಸುಟ್ಟು ಹೋಗಿರುವ ಘಟನೆ ಇಲ್ಲಿಗೆ ಸಮೀಪದ ಕೊಣಸೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಜಯಣ್ಣ ಅವರಿಗೆ ಸೇರಿದ ಬ್ಯಾರನ್ ಬೆಂಕಿಗೆ ಆಹುತಿಯಾಗಿರುವುದು. ಸೋಮವಾರ ತಂಬಾಕು ಹದ ಮಾಡುವ ವೇಳೆ ಆಕಸ್ಮಿಕವಾಗಿ ಬೆಂಕಿ ಬಿದ್ದು ಸಂಪೂರ್ಣವಾಗಿ ಸುಟ್ಟು ಹೋಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಿರಿಯಾಪಟ್ಟಣ ಅಗ್ನಿಶಾಮಕ ಠಾಣೆ ಅಧಿಕಾರಿಗಳು ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಘಟನೆಯಲ್ಲಿ ತಂಬಾಕು ಸೊಪ್ಪು, ಬ್ಯಾರನ್ ಮರಗಳು, ಹಂಚುಗಳು ನಾಶವಾಗಿ 3 ಲಕ್ಷ ರೂ. ನಷ್ಟ ಸಂಭವಿಸಿದೆ ಎನ್ನಲಾಗಿದೆ. ಹೀಗಾಗಿ ತಂಬಾಕು ಮಂಡಳಿ, ಸರ್ಕಾರ ರೈತನ ನೆರವಿಗೆ ಧಾವಿಸಬೇಕು. ಅಲ್ಲದೇ ಸೂಕ್ತ ಪರಿಹಾರ ನೀಡಬೇಕು ಎಂದು ರೈತ ಮುಖಂಡ, ತಾಪಂ ಮಾಜಿ ಉಪಾಧ್ಯಕ್ಷ ಯೋಗಣ್ಣ, ತಾಲೂಕು ರೈತ ಸಂಘದ ಅಧ್ಯಕ್ಷ ಆನಂದ್ ಹಾಗೂ ವೀರಪ್ಪ, ಶಿವಣ್ಣ ಸೇರಿದಂತೆ ಇನ್ನಿತರರು ಆಗ್ರಹಿಸಿದ್ದಾರೆ.



ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಕೈ ಬಿಡಬೇಕೆಂದು ಒತ್ತಾಯಿಸಿ

ಕೆಎಸ್‌ಐಸಿ ಕಾರ್ಮಿಕರ ಮೌನ ಪ್ರತಿಭಟನೆ, ಮನವಿ ಸಲ್ಲಿಕೆ

ತಿ.ನರಸೀಪುರ, ಜೂ.24– ಪಟ್ಟಣದ ಕೆಎಸ್‌ಐಸಿ ನೂಲು ತೆಗೆಯುವ ಘಟಕದ ಆವರಣದಲ್ಲಿ ಮುಖ್ಯಮಂತ್ರಿಗಳು ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಕೈ ಬಿಡಬೇಕೆಂದು ಒತ್ತಾಯಿಸಿ ಕೆಎಸ್‌ಐಸಿ ಕಾರ್ಮಿಕರು ಪಟ್ಟಣದಲ್ಲಿ ಮೌನ ಮೆರವಣಿಗೆ ನಡೆಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಪಟ್ಟಣದ ಕೆಎಸ್‌ಐಸಿ ಫ್ಯಾಕ್ಟರಿಯಿಂದ ಮೆರವಣಿಗೆಯಲ್ಲಿ ಸಾಗಿದ ನೂರಾರು ಅರೆಗುತ್ತಿಗೆ, ಗುತ್ತಿಗೆ ನೌಕರರು ಖಾಸಗಿ ಬಸ್ ನಿಲ್ದಾಣ, ಕಾಲೇಜು ರಸ್ತೆ ಮೂಲಕ ಸಂಚರಿಸಿ ತಾಲೂಕು ಕಚೇರಿಯಲ್ಲಿ ಜಮಾವಣೆಗೊಂಡರು.

ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವಾಸದಲ್ಲಿ ಕೆಎಸ್‌ಐಸಿ ವ್ಯವಸ್ಥಾಪಕ ಉಪ ನಿರ್ದೇಶಕರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ತಿ.ನರಸೀಪುರ ತಾಲೂಕಿನಲ್ಲಿ ಕ್ರೀಡಾಂಗಣ ನಿರ್ಮಿಸುವ ಕುರಿತು ರೇಷ್ಮೆ ಇಲಾಖೆಯಿಂದ ಕ್ರೀಡಾ ಇಲಾಖೆಗೆ ಭೂಮಿ ಹಸ್ತಾಂತರಿಸಲು ಚರ್ಚೆ ನಡೆದ ಹಿನ್ನೆಲೆಯಲ್ಲಿ ಆತಂಕಗೊಂಡ ನೂಲು ತೆಗೆಯುವ ಘಟಕದ ಕಾರ್ಮಿಕರು ಕೆಎಸ್‌ಐಸಿ ನೂಲು ತೆಗೆಯುವ ಘಟಕದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಕೈ ಬಿಡುವಂತೆ ಒತ್ತಾಯಿಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಕಾರ್ಖಾನೆಯ ಕಾರ್ಮಿಕ ಸಂಘಟನೆ ಮುಖಂಡ ಮಂಜಪ್ಪ ಮಾತನಾಡಿ, ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ ಸರ್ಕಾರಿ ಸ್ವಾಮ್ಯಕ್ಕೆ ಸೇರಿದ ರೇಷ್ಮೆ ನೂಲು ತೆಗೆಯುವ ಏಕೈಕ ಕಾರ್ಖಾನೆಯಾಗಿದ್ದು, ಈ ಕಾರ್ಖಾನೆಯನ್ನು ಸುತ್ತಮುತ್ತಲಿನ ಹಳ್ಳಿಯ 250ಕ್ಕೂ ಹೆಚ್ಚು ಕುಟುಂಬಗಳು ಅವಲಂಬಿಸಿವೆ. ಅಲ್ಲದೇ ಹೆಚ್ಚಾಗಿ ಅಹಿಂದ ವರ್ಗದವರೇ ಇಲ್ಲಿ ಕೆಲಸ ನಿರ್ವಸುತ್ತಿದ್ದಾರೆ. ಆದರೆ ಈಗ ಸಂಸ್ಥೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಕಾರ್ಮಿಕರಿಗೆ ತೊಂದರೆಯಾಗಲಿದೆ. ಸಂಸ್ಥೆ ಆವರಣದಲ್ಲಿ ಕೆಲ ಕಟ್ಟಡಗಳನ್ನು ಹೊರತುಪಡಿಸಿ ಸಂಸ್ಥೆಯನ್ನು ವಿಸ್ತಾರಗೊಳಿಸುವ ಹಿನ್ನೆಲೆಯಲ್ಲಿ ಹೆಚ್ಚುವರಿಯಾಗಿ ರೀಲಿಂಗ್ ಘಟಕಗಳು ಮತ್ತು ಬಾಯ್ಲರ್‌ಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ. ಇದರಿಂದ ಸ್ಥಳೀಯವಾಗಿ ಹೆಚ್ಚುವರಿ 300 ಜನರಿಗೆ ಉದ್ಯೋಗಾವಕಾಶ ದೊರಕಲಿದೆ. ಕ್ರೀಡಾಂಗಣ ನಿರ್ಮಾಣ ಮಾಡುವ ಪ್ರಸ್ತಾವನೆ ಬಡ ಕಾರ್ಮಿಕರ ಭವಿಷ್ಯದ ಮೇಲೆ ಬರೆ ಎಳೆದಂತಾಗುತ್ತದೆ. ಹಾಗಾಗಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆಯನ್ನು ಮುಖ್ಯಮಂತ್ರಿಗಳು ಕೈಬಿಟ್ಟು ಕಾರ್ಖಾನೆಯನ್ನು ಮೇಲ್ದರ್ಜೆಗೇರಿಸಿ ವರುಣ ಕ್ಷೇತ್ರದ ಬಡ ಮಧ್ಯಮ ವರ್ಗದ ನಿರುದ್ಯೋಗಿಗಳಿಗೆ ಹೆಚ್ಚಿನ ಉದ್ಯೋಗಾವಕಾಶಕ್ಕೆ ದಾರಿ ಮಾಡಿಕೊಡಬೇಕೆಂದು ಮನವಿ ಮಾಡಿದರು.


ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಕೈ ಬಿಡಬೇಕೆಂದು ಒತ್ತಾಯಿಸಿ ಕೆಎಸ್‌ಐಸಿ ಕಾರ್ಮಿಕರು ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್‌ಗೆ ಮನವಿ ಸಲ್ಲಿಸಿದರು.

ಕಾರ್ಮಿಕ ಸಂಘಟನೆಯ ಮತ್ತೊಬ್ಬ ಮುಖಂಡ ಪ್ರದೀಪ್ ಮಾತನಾಡಿ, 1912ರಲ್ಲಿ ಪ್ರಾರಂಭವಾದ ಕೆಎಸ್‌ಐಸಿಗೆ ತನ್ನದೇ ಆದ ಇತಿಹಾಸವಿದೆ. ಇಲ್ಲಿ ಪರ್ಮನೆಂಟ್ ಹಾಗೂ ಹೊರಗುತ್ತಿಗೆ ಕಾರ್ಮಿಕರು ಕರ್ತವ್ಯ ನಿರ್ವಹಿಸುತ್ತಿದ್ದೇವೆ. ಈಗ ಮತ್ತೆ ಕಾರ್ಖಾನೆಗೆ ಹೆಚ್ಚುವರಿಯಾಗಿ 4 ನೂಲು ತೆಗೆಯುವ ಮಿಷನ್‌ಗಳು ಬರಲಿದ್ದು ಉತ್ಪಾದನೆ ಹೆಚ್ಚಾಗಿ, ಮತ್ತಷ್ಟು ಕಾರ್ಮಿಕರಿಗೆ ಉದ್ಯೋಗ ದೊರಕಲಿದೆ. ಕಾರ್ಖಾನೆಯು ಮುಖ್ಯಂತ್ರಿ ಸಿದ್ದರಾಮಯ್ಯರ ಸ್ವಕ್ಷೇತ್ರ ವರುಣ ಕ್ಷೇತ್ರದಲ್ಲಿದೆ. ಅಲ್ಲದೇ ಹೆಚ್ಚು ಮಂದಿ ಕಾರ್ಮಿಕರು ಅಹಿಂದ ವರ್ಗಕ್ಕೆ ಸೇರಿದವರಾಗಿದ್ದು, ಸಿದ್ದರಾಮಯ್ಯ ಅವರು ಸಹ ಅಹಿಂದ ವರ್ಗಕ್ಕೆ ಸೇರಿರುವುದರಿಂದ ಕಾರ್ಖಾನೆ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆ ಕೈ ಬಿಡಬೇಕೆಂದು ಮನವಿ ಮಾಡಿದರು.

ಪ್ರಸ್ತುತ ಫ್ಯಾಕ್ಟರಿ 12 ರಿಂದ 15 ಲಕ್ಷ ರೇಷ್ಮೆಗೂಡು ಖರೀದಿ ಮಾಡುತ್ತಿದೆ. ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲ ಹಾಗೂ ಮೈಸೂರು ಭಾಗಗಳಿಂದ ಖರೀದಿ ಮಾಡುತ್ತಿರುವುದರಿಂದ ಈ ಭಾಗದ ರೈತನಿಗೆ ಅನುಕೂಲವಾಗಲಿದೆ. ಈ ಭಾಗದಲ್ಲಿ ಗಾರ್ಮೆಂಟ್ಸ್ ಬಿಟ್ಟರೆ ಮತ್ಯಾವುದೇ ಉದ್ಯೋಗ ನೀಡುವ ಕಾರ್ಖಾನೆಗಳಿಲ್ಲದ್ದರಿಂದ ಮುಖ್ಯಮಂತ್ರಿಗಳು ಕ್ರೀಡಾಂಗಣಕ್ಕೆ ಬೇರೆ ಜಾಗ ಗುರುತಿಸಿ ಕಾರ್ಖಾನೆ ಉಳಿಸಿಕೊಡುವ ಮೂಲಕ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸುವ ಪ್ರಸ್ತಾವನೆಯನ್ನು ಕೈಬಿಟ್ಟು ಬಡ ಕಾರ್ಮಿಕರ ಹಿತ ಕಾಪಾಡುವಂತೆ ಮನವಿ ಮಾಡಿದರು.

ಈ ವೇಳೆ ಪರಶಿವಮೂರ್ತಿ, ಪುಟ್ಟಣ್ಣ, ಬಸವರಾಜ ಅರಸ್, ಪವನ್‌ಗೌಡ, ಸಾಗರ್‌ಗೌಡ, ಶಂಕರ, ಪ್ರಸಾದ್, ಸಂದೀಪ್, ಸಿದ್ದರಾಜು, ರಾಜೇಶ್, ಶಾಂತರಾಜು, ಪ್ರಸಾದ್ ಸೇರಿದಂತೆ ಮಹಿಳಾ ಕಾರ್ಮಿಕರು ಹಾಜರಿದ್ದರು.

ಹೆಚ್.ಡಿ.ಕೋಟೆ ರೋಟರಿ ಕ್ಲಬ್‌ಗೆ ಡೈಮಂಡ್ ಪ್ರಶಸ್ತಿ



ಮಂಗಳೂರಿನ ಪಿಲಿಕುಳದ ಭಾರತ್ ಸ್ಪೋರ್ಟ್ಸ್ ಆಂಡ್ ಸ್ಕೌಟ್ಸ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಹೆಚ್.ಡಿ.ಕೋಟೆ ತಾಲೂಕಿನಲ್ಲಿ ರೋಟರಿ ಕ್ಲಬ್ ಸಲ್ಲಿಸುತ್ತಿರುವ ಸೇವೆ ಗುರುತಿಸಿ, ರೋಟರಿಯ ಅತ್ಯುನ್ನತ ಪ್ರಶಸ್ತಿಯಲ್ಲಿ ಒಂದಾದ ಡೈಮಂಡ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ತಾಲೂಕು ಅಧ್ಯಕ್ಷ ನಿರಂಜನ್, ಜಿಲ್ಲಾ ಗವರ್ನರ್ ರೊಟೇರಿಯನ್ ವಿಕ್ರಂ ದಟ್ಟಿ, ವಲಯ ಸೇನಾನಿ ರೋ.ಗಣೇಶ್ ಲಾಡ್, ಜಿಲ್ಲಾ ಕಾರ್ಯದರ್ಶಿ ರೋ.ರಿತೇಶ್ ಬಾಳಿಗ, ಸಹಾಯಕ ಗೌರ್ನರ್ ರೋ.ರಾಜೀವ್, ಕಾರ್ಯದರ್ಶಿ ರೋ.ಬಿ.ಎನ್.ಶಿವಣ್ಣ, ರೋ.ನಟರಾಜ್ ಇತರರಿದ್ದರು.

ಬಿ.ಎನ್.ಬಸವರಾಜಪ್ಪ ನಿಧನ



ತಿ.ನರಸೀಪುರ, ಜೂ.24– ತಾಲೂಕಿನ ಬೆನಕನಹಳ್ಳಿ ಗ್ರಾಮದ ನಿವೃತ್ತ ಶಿಕ್ಷಕ ಬಿ.ಎನ್.ಬಸವರಾಜಪ್ಪ (82) ಮಂಗಳವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಪುತ್ರ ಬಸವಲಿಂಗ ಸ್ವಾಮಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಟ್ಟು ನಿಂತಿರುವ ಕೆಆರ್‌ಎಸ್‌ನ 75 ಸಿಸಿಟಿವಿ ಕ್ಯಾಮರಾಗಳು

ಅಣೆಕಟ್ಟೆ ಕಣ್ಗಾವಲಿಗೆ ಕೇವಲ ಬೆರಳೆಣಿಕೆಯಷ್ಟು ಸಿಬ್ಬಂದಿ

ಮಹತ್ವಾಕಾಂಕ್ಷಿ ಅಮ್ಯೂಸ್‌ಮೆಂಟ್ ಪಾರ್ಕ್, ಕಾವೇರಿ ಆರತಿಗೆ ಉತ್ಸುಕತೆ ತೋರುವ ಸರ್ಕಾರಕ್ಕೆ ಅಣೆಕಟ್ಟೆ ಭದ್ರತೆಯತ್ತ ಕನಿಷ್ಠ ಕಾಳಜಿ ಇಲ್ಲ



ಮೈಸೂರು, ಜೂ. 24(ಆರ್‌ಕೆ)– ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ವಿಶ್ವ ಪ್ರಸಿದ್ಧ ಕೆಆರ್‌ಎಸ್ (ಕೃಷ್ಣ ರಾಜಸಾಗರ) ಅಣೆಕಟ್ಟೆ ಮತ್ತು ಬೃಂದಾವನ ಗಾರ್ಡನ್ ಅನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ ಪ್ರವಾಸಿಗರನ್ನು ಸೆಳೆಯಲು ಸರ್ಕಾರ ಮುಂದಾಗಿದೆ.

ಡಿಸ್ನಿಲ್ಯಾಂಡ್ ಮಾದರಿಯಲ್ಲಿ 198 ಎಕರೆ ವಿಸ್ತಾರದ ಬೃಂದಾವನದಲ್ಲಿ 2,663 ಕೋಟಿ ರೂ. ಅಂದಾಜು ವೆಚ್ಚ ಮಾಡಿ ವಾಟರ್ ಪಾರ್ಕ್, ರೋಲರ್ ಕೋಸ್ಟರ್ಸ್ ಕಾವೇರಿ ಪ್ರತಿಮೆ, ಪೆಂಗ್ವಿನ್ ಪಾರ್ಕ್‌ನೊಂದಿಗೆ ಅಮ್ಯೂಸ್‌ಮೆಂಟ್ ಪಾರ್ಕ್ ಮಾಡಲು ಉದ್ದೇಶಿಸಿದ್ದು, 92 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ಆರತಿ ಪ್ರದರ್ಶನಕ್ಕೂ ಸರ್ಕಾರ ಯೋಜನೆ ರೂಪಿಸಿದೆ.

ಆದರೆ, ಕೆಆರ್‌ಎಸ್ ಜಲಾಶಯದ ಅಣೆಕಟ್ಟೆಗೆ ಭದ್ರತೆ ಮೂಲಸೌಲಭ್ಯಗಳಿಲ್ಲ. ಡ್ಯಾಂ, ಬೃಂದಾವನ, ಪ್ರವಾಸಿಗರ ವಾಹನ ನಿಲುಗಡೆ ಸ್ಥಳ, ಪ್ರವೇಶ ದ್ವಾರ, ಸಂಗೀತ ಕಾರಂಜಿಗಳ ಬಳಿ ಅಳವಡಿಸಿರುವ 75 ಸಿಸಿಟಿವಿ ಕ್ಯಾಮರಾಗಳು ಕೆಟ್ಟು ನಿಂತಿದ್ದು, 2021ರಿಂದಲೂ ಕಾರ್ಯನಿರ್ವಹಿಸುತ್ತಿಲ್ಲ.

ಅಣೆಕಟ್ಟೆಯ ದಕ್ಷಿಣ ಮತ್ತು ಉತ್ತರ ಪ್ರವೇಶ ಗೇಟ್ ಬಳಿ, ಡ್ಯಾಂನ ಮಧ್ಯ ಭಾಗದ ಹಲವೆಡೆ ಕಾವೇರಿ ಪ್ರತಿಮೆ, ಬೃಂದಾವನದ ಬೋಟಿಂಗ್ ಪಾಯಿಂಟ್, ಸಂಗೀತ ಕಾರಂಜಿ ಬಳಿ, ಕಾವೇರಿ ನೀರಾವರಿ ನಿಗಮದ ಎಗ್ಸಿಕ್ಯೂಟಿವ್ ಇಂಜಿನಿಯರ್ ಕಚೇರಿ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳು ಕೆಟ್ಟು ನಿಂತಿದ್ದರೂ, ಈವರೆವಿಗೂ ರಿಪೇರಿ ಮಾಡಿಸುವ ಅಥವಾ ಹೊಸ ಕ್ಯಾಮರಾ ಅಳವಡಿಸುವ ಪ್ರಯತ್ನವನ್ನೂ ಅಧಿಕಾರಿಗಳು ಮಾಡದಿರುವುದು ದಿಗ್ಭ್ರಮೆ ಮೂಡಿಸಿದೆ.

ಮಳೆ, ಗಾಳಿ, ಬಿಸಿಲಿಗೆ ಕ್ಯಾಮರಾಗಳ ಬ್ಯಾಟರಿಗಳು ಕೆಟ್ಟು ಹೋಗಿರುವುದರಿಂದ ಕೋಟ್ಯಾಂತರ ರೂ. ಹಣ ಖರ್ಚು ಮಾಡಿ ಅಳವಡಿಸಿರುವ ಸಿಸಿ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿಲ್ಲ. ಅದರಿಂದಾಗಿ ಕಾವೇರಿ ಮಾತೆಯ ಪ್ರತಿಮೆ ಬಳಿ ಇರುವ ಕಂಟ್ರೋಲ್ ಸಿಬ್ಬಂದಿಗೂ ಕೆಲಸವಿಲ್ಲದಂತಾಗಿದೆ.

ಕೆಆರ್‌ಎಸ್ ಜಲಾಶಯ, ಅಣೆಕಟ್ಟೆ, ಬೃಂದಾವನ ಗಾರ್ಡನ್ ಬೆಂಗಾವಲಿಗೆ ಸರ್ಕಾರ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್)ಯ 261 ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಹುದ್ದೆಯನ್ನು ಮಂಜೂರು ಮಾಡಿದೆಯಾದರೂ, ಮೂರೂ ಪಾಳಿಯಲ್ಲಿ ಕೇವಲ 57 ಮಂದಿ ಮಾತ್ರ ಭದ್ರತಾ ಕಾರ್ಯದಲ್ಲಿ ನಿರತರಾಗಿದ್ದಾರೆ.

ಆ ಪೈಕಿ ಶೇ. 10ರಷ್ಟು ಸಿಬ್ಬಂದಿಯು ಕೆಎಸ್‌ಐಎಸ್‌ಎಫ್ ಕಚೇರಿಯಲ್ಲೇ ಕೆಲಸ ಮಾಡುತ್ತಾರೆ, ಉಳಿದವರನ್ನು 3 ಪಾಳಿ ನಿಯೋಜಿಸಲಾಗುತ್ತಿದ್ದು, ಒಂದೊಂದು ಪಾಳಿಗೆ ಕೇವಲ 10 ಮಂದಿಯಷ್ಟೇ ಲಭ್ಯವಾಗುತ್ತಿದ್ದಾರೆ.

ಅಣೆಕಟ್ಟೆ ಭದ್ರತೆಗೆ ಮಂಜೂರಾಗಿದ್ದ 261 ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಪೈಕಿ ಕೆಲವರನ್ನು ಮೈಸೂರು ವಿಮಾನ ನಿಲ್ದಾಣ ಹಾಗೂ ಬೇರೆ ಬೇರೆ ಕಡೆಗೆ ನಿಯೋಜನೆ ಮಾಡಿರುವುದರಿಂದ ಕೆಆರ್‌ಎಸ್‌ಗೆ ಸಿಬ್ಬಂದಿ ಕೊರತೆ ಉಂಟಾಗಿದೆ. 2016ರವರೆಗೂ ರಾಜ್ಯ ಪೊಲೀಸ್ ಅಧೀನದಲ್ಲೇ ಡ್ಯಾಂ ಭದ್ರತೆ ಇತ್ತು. ನಂತರ ಪ್ರತ್ಯೇಕವಾದ ವ್ಯಾಪಕ ಭದ್ರತೆ ಒದಗಿಸುವ ಉದ್ದೇಶದಿಂದ ಕೆಎಸ್‌ಐಎಸ್‌ಎಫ್‌ಗೆ ವಹಿಸಲಾಯಿತು.

ಭದ್ರತಾ ಪಡೆ ಮತ್ತು ಕಾವೇರಿ ನೀರಾವರಿ ನಿಗಮದಿಂದ ಹಲವು ಬಾರಿ ಸರ್ಕಾರಕ್ಕೆ ಮನವಿ ಮಾಡಲಾಗಿದೆಯಾದರೂ, ಸಮರ್ಪಕ ಸಿಬ್ಬಂದಿ ನಿಯೋಜಿಸದ ಕಾರಣ ಕೆಲವೇ ಸಿಬ್ಬಂದಿ ಭದ್ರತಾ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಡ್ಯಾಂ ಮತ್ತು ಬೃಂದಾವನ ಗಾರ್ಡನ್‌ಗೆ ಪಿಟಿಝಡ್ (Pan, Tilt, Zoom) ಸಿಸಿಟಿವಿ ಕ್ಯಾಮರಾ, ಮೆಟಲ್ ಡೋರ್ ಡಿಟೆಕ್ಟರ್, ವಾಹನಗಳ ಕೆಳಭಾಗದ ಸ್ಕ್ಯಾನಿಂಗ್ ಉಪಕರಣ ಸೇರಿದಂತೆ ಭದ್ರತಾ ಸಲಕರಣೆಗಳನ್ನು ಒದಗಿಸಲು 10 ಕೋಟಿ ರೂ. ಅನುದಾನ ನೀಡುವಂತೆ ಕಾವೇರಿ ನೀರಾವರಿ ನಿಗಮ ನಿಯಮಿತವು ಸರ್ಕಾರಕ್ಕೆ ಬೇಡಿಕೆ ಪ್ರಸ್ತಾವನೆ ಸಲ್ಲಿಸಿದೆ.

ಅನುದಾನ ಬಂದಲ್ಲಿ ಟೆಂಡರ್ ಕರೆದು ಆಯಕಟ್ಟಿನ ಆಯ್ದ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಪೂರ್ಣ ಪ್ರಮಾಣದಲ್ಲಿ ಅಣೆಕಟ್ಟೆ ಮತ್ತು ಬೃಂದಾವನ ಗಾರ್ಡನ್ ಭದ್ರತೆ ಮತ್ತು ಕಟ್ಟೆಚ್ಚರ ವಹಿಸಲಾಗುವುದು ಎಂದು ಸಿಎನ್‌ಎನ್‌ಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಸಿಎಂ ಸಿದ್ದರಾಮಯ್ಯ–ಅಮೀರ್ ಖಾನ್ ಮುಖಾಮುಖಿ; ಶುಭಾಶಯ ವಿನಿಮಯ



ಬೆಂಗಳೂರು: ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿಗೆ ತೆರಳಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಬಾಲಿವುಡ್ ನಟ ಅಮೀರ್ ಖಾನ್ ಅವರನ್ನು ಭೇಟಿಯಾದರು.

ಮುಖ್ಯಮಂತ್ರಿ ಕಚೇರಿ ಪ್ರಕಾರ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿಗಳ ಭೇಟಿಗೆ ರಾಷ್ಟ್ರಪತಿ ಭವನಕ್ಕೆ ತೆರಳಿದ ಸಂದರ್ಭದಲ್ಲಿ ಬಾಲಿವುಡ್‌ನ ಸಂವೇದನಾಶೀಲ ನಟ–ನಿರ್ದೇಶಕ ಅಮೀರ್ ಖಾನ್ ಎದುರಾದರು. ಈ ವೇಳೆ ಉಭಯ ಕುಶಲೋಪರಿ ವಿಚಾರಿಸಿ, ಅವರ ಮುಂದಿನ ಚಿತ್ರಗಳಿಗೆ ಶುಭ ಕೋರಿದರು' ಎಂದು ಎಕ್ಸ್‌ನಲ್ಲಿ ತಿಳಿಸಲಾಗಿದೆ.

ರಾಷ್ಟ್ರಪತಿ ಭವನದಲ್ಲಿ ಅಮೀರ್ ಖಾನ್ ಅವರನ್ನು ನೋಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವತ್ತ ಕೈ ಬೀಸಿದರು. ಆಗ ಅಮೀರ್ ಖಾನ್ ಅವರು ಕೈಜೋಡಿಸಿ ಮುಖ್ಯಮಂತ್ರಿಗೆ ಶುಭಾಶಯ ಕೋರಿದರು. ನಂತರ ಇಬ್ಬರೂ ಕೈಕುಲುಕಿ ಉಭಯ ಕುಶಲೋಪರಿ ವಿಚಾರಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಆಮಿರ್ ಖಾನ್ ಪರಸ್ಪರ ಶುಭಾಶಯ ಕೋರುತ್ತಿರುವ ಫೋಟೊಗಳು ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿವೆ.

ನೇರಳೆಹಣ್ಣು ಲಂಡನ್‌ಗೆ ರಫ್ತು

ಸಾಂಪ್ರದಾಯಿಕ ಹಣ್ಣಿಗೆ ಜಾಗತಿಕ ಮಾರುಕಟ್ಟೆ



ಬೆಂಗಳೂರು, ಜೂ.24– ಬೇಸಿಗೆ ಕಾಲದಲ್ಲಿ ಫಲ ಬಿಡುವ ನೇರಳೆಹಣ್ಣು ತಿನ್ನಲು ಬಲು ರುಚಿ, ಜೊತೆಗೆ ಇದರಲ್ಲಿ ಹಲವಾರು ಔಷಧೀಯ ಗುಣಗಳು ಕೂಡ ಇವೆ.

ನೇರಳೆಹಣ್ಣು ಒಂದು ಸೀಸನಲ್ ಹಣ್ಣಾಗಿದ್ದು, ಇದನ್ನು ಜಾಮೂನ್ ಎಂದೂ ಕರೆಯುತ್ತಾರೆ. ಈ ಹಣ್ಣು ಅದರ ಗಾಢ ಬಣ್ಣ ಮತ್ತು ಹುಳಿ ಸಿಹಿ ರುಚಿಯಿಂದಾಗಿ ಜನರು ಇಷ್ಟಪಡುತ್ತಾರೆ. ಮಾರುಕಟ್ಟೆಯಲ್ಲಿ ಇದಕ್ಕೆ ಬೆಲೆ ಸ್ವಲ್ಪ ಹೆಚ್ಚು ಹಳ್ಳಿ ಭಾಗಗಳಲ್ಲಿ ಗುಡ್ಡಗಳಲ್ಲಿ ನೇರಳೆಹಣ್ಣಿನ ಮರಗಳಿರುವುದು ಸಾಮಾನ್ಯ.

ಇಂತಹ ನೇರಳೆಹಣ್ಣಿಗೆ ಈಗ ಜಾಗತಿಕ ಮಟ್ಟದಲ್ಲಿ ಮನ್ನಣೆ ಸಿಕ್ಕಿದೆ. ಇದೇ ಮೊದಲ ಬಾರಿಗೆ ನೇರಳೆಹಣ್ಣನ್ನು ಲಂಡನ್‌ಗೆ ಕರ್ನಾಟಕದಿಂದ ರಫ್ತು ಮಾಡಲಾಗುತ್ತದೆ.

ಕೇಂದ್ರ ವಾಣಿಜ್ಯ ಸಚಿವಾಲಯದ ಅಂಗಸಂಸ್ಥೆಯಾಗಿರುವ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರವು ಕರ್ನಾಟಕದಿಂದ ಲಂಡನ್‌ಗೆ ತಾಜಾ ನೇರಳೆಹಣ್ಣುಗಳ ರಫ್ತಿಗೆ ಚಾಲನೆ ನೀಡಿದೆ. ದೇಶದ ವಿವಿಧ ಭಾಗಗಳ ಸಾಂಪ್ರದಾಯಿಕ ಹಣ್ಣುಗಳನ್ನು ಜಾಗತಿಕ ಮಾರುಕಟ್ಟೆಗೆ ತಲುಪಿಸುವಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.

ಮದ್ಯದಂಗಡಿ ಮಾಲೀಕರಿಗೆ ಸಿಹಿ ಸುದ್ದಿ: ನವೀಕರಣ ಶುಲ್ಕ ಇಳಿಕೆ

ಬೆಂಗಳೂರು, ಜೂ.24– ಖಜಾನೆಗೆ ಅತೀ ಹೆಚ್ಚು ವರಮಾನ ತರುವ ಅಬಕಾರಿ ಇಲಾಖೆಯಿಂದ ಇನ್ನೂ ಹೆಚ್ಚಿನ ರಾಜಸ್ವ ಸಂಗ್ರಹಕ್ಕೆ ಸರ್ಕಾರ ಮುಂದಾಗಿದ್ದು, ಅಬಕಾರಿ ಸನ್ನದುಗಳ ನವೀಕರಣ ಶುಲ್ಕವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿತ್ತು. ಈ ತೀರ್ಮಾನದಿಂದ ಹೈರಾಣಾಗಿರುವ ಮದ್ಯದಂಗಡಿ ಮಾಲೀಕರು ನವೀಕರಣ ಶುಲ್ಕವನ್ನು ಕಡಿಮೆ ಮಾಡುವಂತೆ ಒತ್ತಡ ಹೇರುತ್ತಿದ್ದರು. ಅಲ್ಲದೆ, ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ಮುಂದಾಗಿದ್ದರು. ಇದೀಗ, ಮದ್ಯದಂಗಡಿ ಮಾಲೀಕರ ಒತ್ತಡಕ್ಕೆ ಮಣಿದ ಸರ್ಕಾರ ಲೈಸೆನ್ಸ್ ನವೀಕರಣ ಶುಲ್ಕವನ್ನು ಇಳಿಸಿದೆ.

ಅಬಕಾರಿ ಲೈಸೆನ್ಸ್ ನವೀಕರಣ ಶುಲ್ಕವನ್ನು ಶೇಕಡಾ 50ರಷ್ಟು ಇಳಿಸಿ ಸರ್ಕಾರ ಅಧಿಸೂಚನೆ ಹೊರಡಿಸಿದೆ. ರಾಜ್ಯದಲ್ಲಿ ಅಬಕಾರಿ ವರ್ಷ ಜುಲೈನಿಂದ ಆರಂಭವಾಗಲಿದ್ದು, ರಾಜ್ಯದಲ್ಲಿ ಎಲ್ಲ ಅಬಕಾರಿ ಸನ್ನದುದಾರರು ತಮ್ಮ ಲೈಸೆನ್ಸ್‌ಗಳನ್ನು ನವೀಕರಣ ಮಾಡಿಕೊಳ್ಳುತ್ತಾರೆ. ಇದನ್ನು ಗಮನಿಸಿಯೇ ಸರ್ಕಾರ ಲೈಸನ್ಸ್ ನವೀಕರಣ ಶುಲ್ಕವನ್ನು ಬರೋಬ್ಬರಿ ಶೇ.100 ರಷ್ಟು ಹೆಚ್ಚಳ ಮಾಡಿತ್ತು. ಈ ಪರಿಷ್ಕೃತ ದರ ಜುಲೈ 1ರಿಂದ ಜಾರಿಯಾಗಲಿತ್ತು. ಈ ಮೂಲಕ ಸರ್ಕಾರ ಸನ್ನದು ಶುಲ್ಕದಿಂದ 879 ಕೋಟಿ ರೂ. ಆದಾಯ ಸಂಗ್ರಹಿಸುವ ಗುರಿ ಹೊಂದಿತ್ತು.

ಆದರೆ, ಸರ್ಕಾರದ ಈ ಆದೇಶದಿಂದ ಮದ್ಯದಂಗಡಿ ಮಾಲೀಕರಿಗೆ ಸಾಕಷ್ಟು ಹೊರೆಯಾಗುತ್ತಿತ್ತು. ಹೀಗಾಗಿ, ಮದ್ಯದಂಗಡಿ ಮಾಲೀಕರು ಲೈಸನ್ಸ್ ನವೀಕರಣ ಶುಲ್ಕ ಏರಿಸಿದ್ದಕ್ಕೆ ಪ್ರತಿಭಟನೆ ನಡೆಸಿ, ಸರ್ಕಾರದ ಮೇಲೆ ಒತ್ತಡ ತರಲು ಮುಂದಾಗಿದ್ದರು. ಈ ಹಿನ್ನೆಲೆಯಲ್ಲಿ ಮದ್ಯದಂಗಡಿ ಮಾಲೀಕರ ಒತ್ತಡಕ್ಕೆ ಮಣಿದ ಸರ್ಕಾರ ಸನ್ನದುದಾರರ ಲೈಸೆನ್ಸ್ ನವೀಕರಣ ಶುಲ್ಕವನ್ನು ಅರ್ಧದಷ್ಟು ಕಡಿಮೆ ಮಾಡಿದೆ. ಈ ಪರಿಷ್ಕೃತ ದರ ಜುಲೈ 1ರಿಂದ ಜಾರಿಗೆ ಬರಲಿದೆ.

ಸರ್ಕಾರ ಎಷ್ಟು ಏರಿಕೆ ಮಾಡಿತ್ತು: ಸರ್ಕಾರ ಲೈಸೆನ್ಸ್ ನವೀಕರಣ ಶುಲ್ಕವನ್ನು ಬರೋಬ್ಬರಿ ಶೇ.100ರಷ್ಟು ಹೆಚ್ಚಳ ಮಾಡಿತ್ತು. ಅಂದರೆ, ಎರಡು ಲಕ್ಷ ರೂ. ಇದ್ದ ಶುಲ್ಕ ನಾಲ್ಕು ಲಕ್ಷ ರೂ. ಹೀಗೆ, ಎಲ್ಲ ಮದ್ಯದಂಗಡಿಗಳ ಲೈಸೆನ್ಸ್ ಶುಲ್ಕದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಮಾಡಿತ್ತು.

ಲೈಸೆನ್ಸ್ ದರ ಎಷ್ಟಿದೆ, ಹೆಚ್ಚಳದ ಬಳಿಕ ಎಷ್ಟಾಗಲಿತ್ತು: ಸಿಎಲ್ 9 ಬಾರ್ ಅಂಡ್ ರೆಸ್ಟೋರೆಂಟ್‌ಗೆ ಈ ಮೊದಲು ಲೈಸೆನ್ಸ್ ಶುಲ್ಕ 8,62,000 ರೂ. ಇತ್ತು. ಈಗ ಅದನ್ನು 15,00,000 ರೂ.ಗೆ ಹೆಚ್ಚಿಸಲು ಮುಂದಾಗಿತ್ತು ಸೆಸ್ 2,25,000 ರೂ. ಸೇರಿ ಒಟ್ಟು ಒಟ್ಟು 17,25,000 ರೂ. ಆಗಲಿತ್ತು.

ಸಿಎಲ್ 6 ಸ್ಟಾರ್ ಹೋಟೆಲ್ ಲೈಸೆನ್ಸ್ ಶುಲ್ಕ 9,75,000 ರೂ. ಇದ್ದಿದ್ದು 20 ಲಕ್ಷ ರೂ. ಮಾಡಲಾಗಿತ್ತು. ಇದಕ್ಕೆ ಸೆಸ್ 3 ಲಕ್ಷ ರೂ. ಸೇರಿ ಒಟ್ಟು 23 ಲಕ್ಷ ರೂ. ಆಗಲಿತ್ತು.

ಸಿಎಲ್ 7 ಬೋರ್ಡಿಂಗ್ ಅಂಡ್ ಲಾಡ್ಜಿಂಗ್ ಲೈಸೆನ್ಸ್ ಶುಲ್ಕ 9,75,000 ರೂ. ಇದ್ದದ್ದು 17,00,000 ರೂ.ಗೆ ಏರಿಕೆಯಾಗಲಿತ್ತು. ಸೆಸ್ 2,55,000 ರೂ. ಸೇರಿ ಒಟ್ಟು 19,550,00 ರೂ. ಆಗಲಿತ್ತು. ಇದೀಗ, ಶೇ.50ರಷ್ಟು ಕಡಿಮೆ ಮಾಡಿದ್ದರಿಂದ ಲೈಸೆನ್ಸ್ ನವೀಕರಣ ಶುಲ್ಕ ಅರ್ಧದಷ್ಟು ಕಡಿಮೆಯಾಗಲಿದೆ.

'ವಂಚನೆ' ಪ್ರಕರಣ: ಐಶ್ವರ್ಯಗೌಡ ಸೇರಿ 18 ಜನರ ವಿರುದ್ಧ ಚಾರ್ಜ್‌ಶೀಟ್



ನವದೆಹಲಿ, ಜೂ.24– ಬಹುಕೋಟಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐಶ್ವರ್ಯಗೌಡ ಸೇರಿದಂತೆ 18 ಜನರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ(ಇಡಿ) ಮಂಗಳವಾರ ತಿಳಿಸಿದೆ.

ಬೆಂಗಳೂರಿನ ವಿಶೇಷ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ(ಪಿಎಂಎಲ್‌ಎ) ನ್ಯಾಯಾಲಯಕ್ಕೆ ಜೂನ್ 21 ರಂದು ಪ್ರಾಸಿಕ್ಯೂಷನ್ ದೂರು ದಾಖಲಿಸಲಾಗಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ಇಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇದೇ ಪ್ರಕರಣದಲ್ಲಿ ಇತ್ತೀಚೆಗೆ ಇಡಿ 3.98 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ.

ಪ್ರಕರಣ ಸಂಬಂಧ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಿರಿಯ ಸಹೋದರ, ಕಾಂಗ್ರೆಸ್ ನಾಯಕ ಡಿ.ಕೆ. ಸುರೇಶ್ ಅವರು ನಿನ್ನೆ ಇಡಿ ಮುಂದೆ ವಿಚಾರಣೆಗೆ ಹಾಜರಾಗಿ ತಮ್ಮ ಹೇಳಿಕೆಯನ್ನು ದಾಖಲಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏಪ್ರಿಲ್ 24–25ರಂದು ಕರ್ನಾಟಕದ 14 ಸ್ಥಳಗಳಲ್ಲಿ ಇಡಿ ಶೋಧ ನಡೆಸಿತ್ತು. ಐಶ್ವರ್ಯಗೌಡ ಅವರ ಬೆಂಗಳೂರು ಹಾಗೂ ಮಂಡ್ಯ ನಿವಾಸ ಮತ್ತು ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರ ಮನೆಗಳ ಮೇಲೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದಾಳಿ ನಡೆಸಿದ್ದರು.

ಐಶ್ವರ್ಯಗೌಡ ಅವರು ಸುಮಾರು 9 ಕೋಟಿ ರೂ. ಮೌಲ್ಯದ ಚಿನ್ನ ಖರೀದಿಸಿ ವಂಚಿಸಿದ ಆರೋಪ ಎದುರಿಸುತ್ತಿದ್ದಾರೆ.

ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಜುವೆಲ್ಲರಿಯ ಮಾಲೀಕರಿಗೆ ಐಶ್ವರ್ಯಗೌಡ ವಂಚಿಸಿದ್ದಾರೆ ಎಂಬ ಆರೋಪವಿದೆ. ಇಷ್ಟೇ ಅಲ್ಲದೆ, ಮಾಜಿ ಸಂಸದ ಡಿಕೆ ಸುರೇಶ್ ಹೆಸರಿನಲ್ಲಿ ವಂಚನೆ ಎಸಗಿದ್ದರು ಎನ್ನಲಾಗಿದೆ. ಈ ವಿಚಾರವಾಗಿ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ 2024ರ ಡಿಸೆಂಬರ್‌ನಲ್ಲೇ ಡಿ.ಕೆ.ಸುರೇಶ್ ದೂರು ನೀಡಿದ್ದರು.

ಪ್ರೌಢಶಾಲಾ ಹಂತದಲ್ಲೇ ಓದುವ ಹವ್ಯಾಸ ರೂಢಿಸಿಕೊಂಡರೆ ಯಶಸ್ಸು ಸಾಧ್ಯ

ಉಚಿತ ಕಾರ್ಯಾಗಾರದಲ್ಲಿ ಹುಣಸೂರು ಉಪ ವಿಭಾಗಾಧಿಕಾರಿ ವಿಜಯ್ ಕುಮಾರ್ ಸಲಹೆ



ಮೈಸೂರಿನ ಮಾನಸಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ನಡೆದ ಸ್ವಾವಲಂಬನೆಯತ್ತ ಯುವ ಸಮುದಾಯ ಕಾರ್ಯಾಗಾರವನ್ನು ಹುಣಸೂರು ಉಪ ವಿಭಾಗಾಧಿಕಾರಿ ಹೆಚ್.ಬಿ.ವಿಜಯ್‌ಕುಮಾರ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

ಮೈಸೂರು, ಜೂ.24(ಎಂಟಿವೈ)– ಪ್ರೌಢಶಾಲಾ ಹಂತದಲ್ಲಿಯೇ ನಿಗದಿತ ಗುರಿಯೊಂದಿಗೆ ಓದುವ ಹವ್ಯಾಸ ರೂಢಿಸಿಕೊಂಡರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬಹುದು ಎಂದು ಹುಣಸೂರು ಉಪವಿಭಾಗಾಧಿಕಾರಿ ಹೆಚ್.ಬಿ. ವಿಜಯ್‌ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ದಲಿತ ವಿದ್ಯಾರ್ಥಿ ಒಕ್ಕೂಟ ಆಯೋಜಿಸಿದ್ದ 'ಸ್ವಾವಲಂಬನೆಯತ್ತ ಯುವ ಸಮುದಾಯ' ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯರ್ಥಿಗಳಿಗಾಗಿ ಒಂದು ದಿನದ ಉಚಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗಲೇ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೆ. ನಿರ್ದಿಷ್ಟ ಗುರಿಯಿದ್ದರೆ ದೊಡ್ಡ ಮಟ್ಟದ ಸಾಧನೆ ಮಾಡಬಹುದು ಎಂದರು.

ಪಿಯುಸಿ, ಪದವಿ ವಿದ್ಯಾರ್ಥಿಯಾಗಿದ್ದಾಗಲೂ ಸ್ಪರ್ಧಾತ್ಮಕ ಪರೀಕ್ಷೆಗೆ ಓದಿಕೊಳ್ಳುತ್ತಿದ್ದೆ. ಸ್ನಾತಕೋತ್ತರ ಪದವಿ ನಂತರ ಕೆ–ಸೆಟ್ ಪರೀಕ್ಷೆ ಪಾಸಾಗಿ ಇಂಗ್ಲೀಷ್ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿರುವಾಗಲೂ ತನ್ನದೇ ಆದ ಗುರಿಯೊಂದಿಗೆ ಓದುತ್ತಿದ್ದೆ. ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಾಗಿ ಬದ್ಧತೆಯಿಂದ ಅಭ್ಯಾಸ ಮಾಡಿದರೆ ಅಪಾರವಾದ ಜ್ಞಾನ ಸಂಪತ್ತು ಸಂಪಾದಿಸಬಹುದು. ಆ ಜ್ಞಾನ ಸಂಪತ್ತು ಒಂದಲ್ಲಾ ಒಂದು ರೀತಿಯಲ್ಲಿ ನೆರವಿಗೆ ಬರುತ್ತದೆ ಎಂದರು.

ಜನ ಸೇವೆಗಾಗಿ ಹಾಗೂ ಜನರ ಕಲ್ಯಾಣಕ್ಕಾಗಿ ಸಾರ್ವಜನಿಕ ಸೇವೆ ಆಯ್ಕೆ ಮಾಡಿಕೊಳ್ಳಬೇಕು. ಜೀವನೋಪಾಯಕ್ಕಾಗಿ ಕೆಲಸ ಮಾಡಬೇಕು. ಅದಕ್ಕಾಗಿ ನೂರಾರು ಆಯ್ಕೆಗಳಿವೆ. ಸಮಾಜ ಸೇವೆಗೂ ಹಲವು ದಾರಿಗಳಿವೆ. ಸಾರ್ವಜನಿಕ ಆಡಳಿತ ಕ್ಷೇತ್ರ ಆಯ್ಕೆ ಮಾಡಿಕೊಂಡವರು ಸಮಾಜಕ್ಕೆ ಕೊಡುಗೆ ನೀಡಬಹುದು ಎಂದು ಅವರು ಮತ್ತೊಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇದೆ. ಶಾಸಕಾಂಗ ಜಾರಿ ಮಾಡುವ ಯೋಜನೆಗಳು, ಶಾಸನಗಳನ್ನು ತಳಮಟ್ಟದಲ್ಲಿ ತಲುಪಿಸಲು ಸಾರ್ವಜನಿಕ ಸೇವೆ ಅಗತ್ಯವಾಗಿದೆ. ಅಧಿಕಾರಿಯಾಗಿ ಬಡತನ ನಿರ್ಮೂಲನೆ, ಸಾಕ್ಷರತೆ, ಪರಿಸರ ಅಭಿವೃದ್ಧಿ ಮಾಡಬಹುದಾಗಿದೆ. ಅಧಿಕಾರಿ ಸರ್ಕಾರ ಮತ್ತು ಜನರ ಸೇತುವೆಯಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ ಮಾತನಾಡಿ, ಪ್ರಾಮಾಣಿಕತೆ, ಶ್ರದ್ಧೆ, ನಿರಂತರವಾದ ಪರಿಶ್ರಮ ಇದ್ದರೆ ಬದುಕಿನಲ್ಲಿ ಯಶಸ್ಸು ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕ ಪ್ರೊ.ಜೆ.ಸೋಮಶೇಖರ್ ಹಾಗೂ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರಕುಮಾರ್ ಸ್ಪರ್ಧಾತ್ಮಕ ಪರೀಕ್ಷೆಗಳ ಆಕಾಂಕ್ಷಿಗಳಿಗೆ ಕೆಲ ಸಲಹೆಯೊಂದಿಗೆ ಉಪಯುಕ್ತ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಐಕ್ಯೂಎಸಿ ನಿರ್ದೇಶಕ ಡಾ.ಕೆ.ಎನ್.ಅಮೃತೇಶ್ ಮಾತನಾಡಿದರು. ಅಲ್ಲದೆ ವಿವಿಧ ಗೋಷ್ಠಿಯಲ್ಲಿ ಸಾಮಾನ್ಯ ವಿಜ್ಞಾನ ಕುರಿತು ನಾಗರಿಕ ಸೇವಾ ಪರೀಕ್ಷೆಗಳ ಲೇಖಕ ಡಾ.ಎಸ್.ವಿ.ವೆಂಕಟರಮಣಸ್ವಾಮಿ, ಮಾನಸಿಕ ಸಾಮರ್ಥ್ಯ ಕುರಿತು ಬೆಂಗಳೂರಿನ ಆ್ಯಕ್ಟಿವ್ ಕೋಚಿಂಗ್ ಸೆಂಟರ್ ನಿರ್ದೇಶಕ ಮಂಜುನಾಥ್ ಬಾಡಗಿ, ಸಾಮಾನ್ಯ ಜ್ಞಾನ ಕುರಿತು ಅನ್ ಅಕ್ಯಾಡೆಮಿ ಉಪನ್ಯಾಸಕ ಶರಣಯ್ಯ ಭಂಡಾರಿಪುರಮಠ ಮಾತನಾಡಿದರು. ಈ ವೇಳೆ ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪುನೀತ್, ಕಾರ್ಯದರ್ಶಿ ಶೇಖರ್ ಇದ್ದರು. ಕಾತ್ಯಾಯಿನಿ ನಿರೂಪಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡಿಎನ್‌ಎ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕುಬೇರಾ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಮಾದೇವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
ಕುಬೇರಾ (ತೆ)	4 ಪ್ರದರ್ಶನಗಳು
ಸಂಗಂ	
ಕುಬೇರನ್(ತ) + ಕುಬೇರಾ (ಕ)	2+2 ಪ್ರದರ್ಶನಗಳು
ಲಿಡೋ	
ಕುಲದಲ್ಲಿ ಕೀಳಾವುದೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬುಲೆಟ್ (ಕ) + ಭಗೀರಥ (ಕ)	3+1 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಬೇಸಿಗೆ ರೇಸ್

5ನೇ ದಿನ, ಬುಧವಾರ, 25–6–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಆಲ್‌ಬೆರೆಟೋ ಪ್ಲೇಟ್ ಡಿ2–1100 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1 ಕಂಟ್ರಿಸ್ ಫೈರ್ 2. ಅರಿಗಾಟೋ 3. ಫಿಯೋನಿಕ್ಸ್ ಗೋಲ್ಡ್

II. ಹೆಗ್ಗಡದೇವನಕೋಟೆ ಪ್ಲೇಟ್–1400 ಮೀ. 3 ವರ್ಷ (ಟರ್ಮ್ಸ್). ಮ.2.30ಕ್ಕೆ
1. ಕೋಸೆಟ್ಟಿ 2. ಮೈಸೂರ್ ಪರಾಹ 3. ಮಿಸ್ಟಿ ವಾರಿಯರ್

III. ಆಲ್‌ಬೆರೆಟೋ ಪ್ಲೇಟ್ ಡಿ1–1100 ಮೀ. ರೇಟೆಡ್ 00 ರಿಂದ 25. ಮ.3.00ಕ್ಕೆ
1 ಬ್ಯೂಟಿಫುಲ್ ಬ್ಲೂಮ್ 2 ಪೈರ್ ಬೋಲ್ಟ್ 3. ಎಪ್‌ಸಮ್ ಡೌನ್ಸ್

IV. ಕಪಿಲಾ ಪ್ಲೇಟ್ –1600 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1 ಸರ್ಧಾರ್ 2. ಡೇವಿಡ್ ಡಿಲೈಟ್ 3. ನ್ಯಾಚುರಲ್ ಓನ್

V. ವಿ.ಎಸ್.ಸುಬ್ರಮಣ್ಯಂ ಮೆಮೋರಿಯಲ್ ಟ್ರೋಫಿ –1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1 ಪ್ಯೂರ್ ಫಾರ್ ಶ್ಯೂರ್ 2. ಡ್ಯೂಸ್ ಎಕ್ಸ್‌ಮೆಚಿನಾ 3. ರಫಿ ನಾಟೊ

VI. ರಾಣಿ ಬೆನ್ನೂರ್ ಪ್ಲೇಟ್ –1600 ಮೀ. ರೇಟೆಡ್ 40 ರಿಂದ 65. ಸಂ.430ಕ್ಕೆ
1. ನ್ಯಾಚುರಲ್ ಟೊರನಾಡೋ 2. ಔರ್ಲಿ 3. ನ್ಯಾಚುರಲ್ ವಾರಿಯರ್

VII. ಗೋವಾ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಓಶನ್ 2. ಲಿಟಲ್ ಮಿನಿಸ್ಟರ್ 3. ಸ್ಯಾಂಡಲ್ ಕಿಂಗ್

ದಿನದ ಅತ್ಯುತ್ತಮ	: ನ್ಯಾಚುರಲ್ ಟೊರನಾಡೋ
ಡಬ್ಬಲ್	: ಸರ್ಧಾರ್, ಓಶನ್
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6, ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಶಾಲೆಯಲ್ಲಿ ಆಟವಾಡುತ್ತಿದ್ದ ವೇಳೆ ಹೃದಯಾಘಾತದಿಂದ ವಿದ್ಯಾರ್ಥಿನಿ ಸಾವು

ಚಿಕ್ಕೋಡಿ, ಜೂ.24– ಶಾಲೆಯಲ್ಲಿ ಆಟವಾಡುತ್ತಿದ್ದ ಸಂದರ್ಭ ಹೃದಯಾಘಾತಕ್ಕೊಳಗಾಗಿ ವಿದ್ಯಾರ್ಥಿನಿ ಸಾವನ್ನಪ್ಪಿದ ಘಟನೆ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಚಮಕೇರಿ ಗ್ರಾಮದಲ್ಲಿ ನಡೆದಿದೆ. ಅಥಣಿ ತಾಲೂಕಿನ ಬೇಡರಹಟ್ಟಿ ಗ್ರಾಮದ ರೇಣುಕಾ ಸಂಜಯ್ ಬಂಡಗಾರ (15) ಮೃತ ವಿದ್ಯಾರ್ಥಿನಿ. ಚಮಕೇರಿ ಗ್ರಾಮದ ಖಾಸಗಿ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ರೇಣುಕಾ ಆಟವಾಡುತ್ತಿದ್ದ ವೇಳೆ ಹೃದಯಾಘಾತಕ್ಕೆ ಒಳಗಾಗಿದ್ದಾಳೆ. ಹೃದಯಾಘಾತದ ವಿಷಯ ತಿಳಿಯುತ್ತಿದ್ದಂತೆಯೇ ಶಾಲೆಯ ಶಿಕ್ಷಕರು ಹಾಗೂ ಪೋಷಕರು ಹೆಚ್ಚಿನ ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಆದರೆ ಅಥಣಿ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿಯೇ ವಿದ್ಯಾರ್ಥಿನಿ ಕೊನೆಯುಸಿರೆಳೆದಿದ್ದಾಳೆ. ಮಗಳನ್ನು ಕಳೆದುಕೊಂಡ ಪೋಷಕರ ಹಾಗೂ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಅಥಣಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ರಾಜ್ಯದಲ್ಲಿ 82 ಸಂಚಾರಿ ಆರೋಗ್ಯ ಘಟಕಗಳ ಅನುಷ್ಠಾನ

● 15.97 ಕೋಟಿ ವೆಚ್ಚದಲ್ಲಿ ಸರ್ಕಾರದ ಅನುಮೋದನೆ ● ದುರ್ಗಮ, ಸಂಪರ್ಕರಹಿತ ಪ್ರದೇಶಗಳ ದುರ್ಬಲ ವರ್ಗಕ್ಕೆ ಆರೋಗ್ಯ ಸೇವೆಯ ಉದ್ದೇಶ

ಮೈಸೂರು, ಜೂ.24(ಎಸ್‌ಪಿಎನ್)– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ರಾಜ್ಯದ ದುರ್ಗಮ ಪ್ರದೇಶ ಇಲ್ಲವೇ ಸಾರಿಗೆ ಸಂಪರ್ಕರಹಿತ ಪ್ರದೇಶಗಳಿಗೆ ಸರ್ಕಾರಿ ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳನ್ನು ನೀಡಲು 82 ಸಂಚಾರಿ ಆರೋಗ್ಯ ಘಟಕಗಳನ್ನು ಅನುಷ್ಠಾನ ಮಾಡಲು ರಾಜ್ಯ ಸರ್ಕಾರ ಮಂಗಳವಾರ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಮೂರು ವರ್ಷಗಳ ಅವಧಿಗೆ 82 ಸಂಚಾರಿ ಆರೋಗ್ಯ ಘಟಕಗಳನ್ನು 2007.48 ಲಕ್ಷ ವೆಚ್ಚದಲ್ಲಿ ಸರ್ಕಾರಿ–ಖಾಸಗಿ ಸಹಭಾಗಿತ್ವದಲ್ಲಿ ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಕೆಲವೊಂದು ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಗೆ ಆರೋಗ್ಯ ಇಲಾಖೆ ಮನವಿ ಮಾಡಿತ್ತು. ಇದೀಗ 15.97 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮತಿ ನೀಡಿದೆ.

ಎನ್‌ಎಚ್‌ಎಂ ಅಡಿಯಲ್ಲಿ 50+ ಎಸ್‌ಸಿಪಿ–ಟಿಎಸ್‌ಪಿ ರಡಿ 32 ಪ್ರಕಾರ ಕೆಲ ಷರತ್ತಿಗೊಳಪಟ್ಟು ಪ್ರಥಮವಾಗಿ ಮೂರು ವರ್ಷದ ಅವಧಿಗೆ ಕೆಟಿಪಿಪಿ ಕಾಯ್ದೆ ಹಾಗೂ ನಿಯಮಗಳನ್ನು ಅನುಸರಿಸಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಅನುಮೋದನೆ ನೀಡಿದೆ.

ಐದು ಕಿ.ಮೀ ವ್ಯಾಪ್ತಿ: ವೈದ್ಯಕೀಯ ಘಟಕಗಳು (ಎಂಎಂಯು) ಸಂಚಾರಿ ಚಿಕಿತ್ಸಾಲಯಗಳಾಗಿದ್ದು, ದುರ್ಗಮ ಮತ್ತು ಸಂಪರ್ಕ ರಹಿತ ಪ್ರದೇಶಗಳು, ದುರ್ಬಲ ವರ್ಗದ ಸಮುದಾಯಕ್ಕೆ ಆರೋಗ್ಯ ಸೇವೆಗಳನ್ನು ನೀಡಲು ವಿನ್ಯಾಸಗೊಳಿಸಲಾಗಿದೆ. ಸಂಚಾರಿ ವೈದ್ಯಕೀಯ ಘಟಕಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಜನವಸತಿ ಪ್ರದೇಶಗಳನ್ನು ಸಮೀಪದ ಆರೋಗ್ಯ ಉಪಕೇಂದ್ರಗಳಿಗೆ ತಲುಪಲು 5ಕಿ.ಮೀ ದೂರ ಅಥವಾ 30 ನಿಮಿಷಗಳ ಪ್ರಯಾಣ ಅವಧಿಯನ್ನು ಪರಿಗಣಿಸಿ ವರ್ಗೀಕರಿಸಲಾಗುವುದು.

ಈ ಘಟಕವು ತಿಂಗಳಿಗೆ ಒಂದು ಬಾರಿಯಾದರೂ ದುರ್ಗಮ ರಹಿತ ಪ್ರದೇಶಗಳನ್ನು ಸೇವಾ ಕ್ರಮಗಳನ್ನು ತಲುಪಿಸುವಂತೆ ವರ್ಗೀಕರಿಸಲಾಗಿದೆ. ಸಂಚಾರಿ ಆರೋಗ್ಯ ಘಟಕ ತಂಡವು ಶುಶ್ರೂಷಕರು ಅಥವಾ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳ ನೇತೃತ್ವದಲ್ಲಿ 12 ವಿಸ್ತೃತ ಆರೋಗ್ಯ ಸೇವೆಗಳನ್ನು ನೀಡಲು ಆದೇಶಿಸಿದ್ದು, ಈ ಘಟಕವು ಕನಿಷ್ಟ 2–3 ಜನವಸತಿಗಳಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸಲಿವೆ.

> **6** ಪ್ರಧಾನಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾಭಿಯಾನ(ಪಿಎಂ–ಜನಮನ್)ದಡಿ ಕರ್ನಾಟಕ ಅನುಸೂಚಿತ ಆದಿವಾಸಿ ಜನವಸತಿ ಪ್ರದೇಶಗಳಲ್ಲಿ ಸಂಚಾರಿ ವೈದ್ಯಕೀಯ ಘಟಕಗಳ ಮೂಲಕ ಆರೋಗ್ಯ ಸೇವೆಗಳನ್ನು ನೀಡಬೇಕಾಗಿದ್ದು, ರಾಜ್ಯದ ಐದು ಜಿಲ್ಲೆಗಳಲ್ಲಿ 780 ದುರ್ಗಮ ಜನವಸತಿ ಪ್ರದೇಶಗಳಿವೆ. ದರ್ತಿ ಅಭಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನ(ಡಿಎ–ಜೆಜಿಯುಎ)ದಡಿ ಆರೋಗ್ಯ ಸೇವೆಯ ಎರಡು ಅಂಶಗಳನ್ನು ಖಾತ್ರಿ ಪಡಿಸಬೇಕಿದೆ.
> – ಎನ್.ಮಲ್ಲಿಕಾರ್ಜುನರೆಡ್ಡಿ, ಅಧೀನ ಕಾರ್ಯದರ್ಶಿ

116 ಹಳ್ಳಿಗಳ ಗುರುತು: ಪರಿಶಿಷ್ಟ ಪಂಗಡದ ಕುಟುಂಬಗಳು ವಾಸಿಸುವ ಜನವಸತಿ ಪ್ರದೇಶಗಳಿಂದ ಐದು ಕಿ.ಮೀ ವ್ಯಾಪ್ತಿಯ ಒಳಗೆ ಆರೋಗ್ಯ ಉಪಕೇಂದ್ರವಿರಬೇಕು. ಎರಡು ಹಳ್ಳಿಗಳು ಈ ಮಾನದಂಡದ ವ್ಯಾಪ್ತಿಯನ್ನು ಪೂರೈಸದಿದ್ದಲ್ಲಿ ಆರೋಗ್ಯ ಉಪಕೇಂದ್ರ ಇರಬೇಕು. ಎಸ್ಟಿ ಕುಟುಂಬಗಳು ವಾಸಿಸುವ ಜನವಸತಿ ಪ್ರದೇಶಗಳಿಂದ ಐದು ಕಿ.ಮೀ ವ್ಯಾಪ್ತಿಯ ಒಳಗೆ ಆರೋಗ್ಯ ಉಪಕೇಂದ್ರ ಇರಬೇಕು. ರಾಜ್ಯದ 116 ಹಳ್ಳಿಗಳು ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಕಿ.ಮೀಕ್ಕಿಂತ ಹೆಚ್ಚು ದೂರದಲ್ಲಿದ್ದು, ಈ ಹಳ್ಳಿಗಳಿಗೆ ಸಂಚಾರಿ ಆರೋಗ್ಯ ಘಟಕಗಳ ಮೂಲಕ ಸೇವೆಗಳನ್ನು ನೀಡಬೇಕಾಗಿದೆ.

ದುರ್ಗಮ ಇಲ್ಲವೇ ಸಾರಿಗೆ ಸಂಪರ್ಕ ಇಲ್ಲದ ಗ್ರಾಮಗಳಲ್ಲಿ ಸರ್ಕಾರಿ ಕಟ್ಟಡ ಬಳಸಿಕೊಳ್ಳಬೇಕು. ಬೊಲೇರೋ ವಾಹನದ ಈ ಸೇವೆಗೆ ಅಗತ್ಯವಿರುತ್ತದೆ. ಪ್ರತಿ ಸಂಚಾರಿ ಘಟಕ ಸ್ಥಾಪನೆಗೆ ರೂ.2.75–2.85 ಲಕ್ಷಗಳನ್ನು ಅಂದಾಜಿಸಲಾಗಿದೆ. ಈ ಘಟಕಗಳಲ್ಲಿ ಎರಡು ಮಾದರಿಗಳಾಗಿ ವಿಂಗಡಿಸಿದ್ದು, ಒಂದು ಘಟಕಕ್ಕೆ ವೈದ್ಯರು ಮತ್ತು ಶುಶ್ರೂಷಕರಿದ್ದು, ಇನ್ನೊಂದು ಘಟಕದಲ್ಲಿ ಶುಶ್ರೂಷಕರು ಮಾತ್ರವೇ ಇದ್ದು, ವೈದ್ಯರು ಇರುವುದಿಲ್ಲ. ಮೊದಲ ಮಾದರಿ ಸಂಚಾರಿ ಆರೋಗ್ಯ ಘಟಕಕ್ಕೆ 1.95 ಲಕ್ಷ, ಎರಡನೇ ಮಾದರಿ ಆರೋಗ್ಯ ಘಟಕಕ್ಕೆ 1.20 ಲಕ್ಷ ಎಂದು ಅಂದಾಜಿಸಲಾಗಿದೆ.

ಈ ಘಟಕಗಳಲ್ಲಿ ಕೆಲಸ ಮಾಡುವ ವೈದ್ಯರಿಗೆ 75 ಸಾವಿರ, ಶುಶ್ರೂಷಕರಿಗೆ 25 ಸಾವಿರ, ಪ್ರಯೋಗಾಲಯ ವೆಚ್ಚ 10 ಸಾವಿರ, ವಾಹನ ಬಾಡಿಗೆ ಹಾಗೂ ಇತರೆ ವೆಚ್ಚಗಳಿಗೆ 65 ಸಾವಿರ ಅಂದಾಜಿಸಲಾಗಿದೆ. 2025–26ನೇ ಸಾಲಿನ ಒಟ್ಟಾರೆಯಾಗಿ 2763.36 ಲಕ್ಷ ಅನುಮೋದನೆಯಾಗಿದ್ದು, ಇದರಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 1692 ಲಕ್ಷಗಳು ಹಾಗೂ ರಾಜ್ಯ ಸರ್ಕಾರದಿಂದ 1071.36 ಲಕ್ಷ ರೂ. ಬಿಡುಗಡೆ ಅನುಮೋದಿಸಿದೆ. ಹಂತಹಂತವಾಗಿ ಒಟ್ಟು 82 ಘಟಕಗಳ ಅನುಷ್ಠಾನಕ್ಕೆ ಅನುಮತಿಸಿದೆ.

ಸಿಬ್ಬಂದಿಗಳ ನೇಮಕಕ್ಕೆ ಒತ್ತು: ಹಾಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಮುಖಾಂತರ ಹೊರಗುತ್ತಿಗೆ ವಾಹನ ಚಾಲಕರು ಸೇರಿದಂತೆ ವೈದ್ಯರು, ಶುಶ್ರೂಷಕಿ, ಪ್ರಯೋಗಶಾಲಾ ತಂತ್ರಜ್ಞರು, ಸಹಾಯಕರು ನೇಮಕ ಮಾಡಿಕೊಳ್ಳತಕ್ಕದ್ದು, ಗುತ್ತಿಗೆ ಆಧಾರದ ಮೇಲೆ ವೈದ್ಯರು, ಹೊರಗುತ್ತಿಗೆ ಆಧಾರದ ಮೇಲೆ ಇತರೆ ಸಿಬ್ಬಂದಿಗಳನ್ನು ಕೆಟಿಪಿಪಿ ನಿಯಮಾನುಸಾರ ನೇಮಕ ಮಾಡಿಕೊಳ್ಳಲು ಅನುಮತಿ ನೀಡಿದೆ. ಈ ಸೇವೆಗಳ ವಿವರಗಳನ್ನು ಕೇಂದ್ರ ಸರ್ಕಾರದ ಗತಿಶಕ್ತಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯ ಸಚಿವ ಸಂಪುಟದ ನಿರ್ಣಯದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಆರೋಗ್ಯ 1&2) ಅಧೀನ ಕಾರ್ಯದರ್ಶಿ ಎನ್.ಮಲ್ಲಿಕಾರ್ಜುನರೆಡ್ಡಿ ಆದೇಶಿಸಿದ್ದಾರೆ.

ಜನಪ್ರತಿನಿಧಿಗಳಿಲ್ಲದೆ ಮೈಸೂರು ನಗರ ಅಭಿವೃದ್ಧಿ, ನಿರ್ವಹಣೆ ಕುಂಠಿತ

ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ವಿಷಾದ



ಮೈಸೂರು, ಜೂ.24– ಮೈಸೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಮಹಾನಗರ ಪಾಲಿಕೆಯಲ್ಲಿ ಜನಪ್ರತಿನಿಧಿಗಳು ಇಲ್ಲದಿರುವುದು ಅತ್ಯಂತ ವಿಷಾದಕರ ಸಂಗತಿ. ಇದರಿಂದ ನಗರದ ಬೆಳವಣಿಗೆಗೆ ಭಾರೀ ಹಿನ್ನಡೆಯಾಗಿದೆ ಎಂದು ಮಾಜಿ ಮೇಯರ್ ಎಂ.ಜೆ.ರವಿಕುಮಾರ್ ಆರೋಪಿಸಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನವ ಮೈಸೂರು ನಿರ್ಮಾಣ ಕುರಿತು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹೇಳಿಕೆ ನೀಡಿರುವುದು ಹಾಸ್ಯಾಸ್ಪದವಾಗಿದೆ. ಮೊದಲು ಗೋಮಾಳ ಜಾಗದಲ್ಲಿ ಅಕ್ರಮವಾಗಿ ಲೇಔಟ್‌ಗಳನ್ನು ನಿರ್ಮಿಸಿರುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ತೆಗೆದುಕೊಳ್ಳಲಿ. ನಂತರ ಮೈಸೂರು ಬಗ್ಗೆ ಮಾತನಾಡಲಿ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಅಧಿಕಾರಿಗಳು ಸಾರ್ವಜನಿಕರ ಕೆಲಸ–ಕಾರ್ಯಗಳಿಗೆ ಸರಿಯಾದ ರೀತಿಯಲ್ಲಿ ಸ್ಪಂದಿಸುತ್ತಿಲ್ಲ. ರೆವಿನ್ಯೂ ದಂಧೆ, ಅಕ್ರಮ ಕಟ್ಟಡಗಳಿಗೆ ತಡೆಯೇ ಇಲ್ಲದಂತಾಗಿದೆ. ನಗರದ ಅಭಿವೃದ್ಧಿ ಬಗ್ಗೆ ಯಾರಿಗೂ ಚಿಂತೆ ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತವಲಯದಲ್ಲಿರುವ ಭೈರತಿ ಸುರೇಶ್, ಮುಖ್ಯಮಂತ್ರಿಗಳ ತವರಿನ ಅಭಿವೃದ್ಧಿಗೆ ಏಕೆ ಅನುದಾನ ನೀಡುತ್ತಿಲ್ಲ?. ಏಳು ವರ್ಷದ ಹಿಂದೆ ಅಳವಡಿಸಲಾದ ಹೆರಿಟೇಜ್ ಕಂಬಗಳಿಗೆ ಬಣ್ಣ ಹೊಡೆಸಲು ಸಾಧ್ಯವಾಗಿಲ್ಲ. ಸಮರ್ಪಕ ರೀತಿಯಲ್ಲಿ ರಸ್ತೆಅಭಿವೃದ್ಧಿಗೊಳಿಸಿಲ್ಲ ಎಂದು ದೂರಿದ್ದಾರೆ.

ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ನೂರು ಕೋಟಿ ಅನುದಾನ ನೀಡುವ ಮೂಲಕ ಮೈಸೂರು ನಗರದ ಅಭಿವೃದ್ಧಿಗೆ ನೆರವಾಗಿದ್ದರು. ಆದರೆ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳೀಯರೇ ಆಗಿದ್ದರೂ ಪಾಲಿಕೆಗೆ ಹಣ ನೀಡಿಲ್ಲ. ಪರಿಣಾಮ ಒಂದೆಡೆ ಅಭಿವೃದ್ಧಿ ಕುಂಠಿತವಾದರೆ ಮತ್ತೊಂದೆಡೆ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುವ ಅಕ್ರಮಗಳು ನಡೆದಿವೆ. ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳಿಲ್ಲದೆ ಅಧಿಕಾರಿಗಳನ್ನು ಪ್ರಶ್ನಿಸುವವರೇ ಇಲ್ಲದಂತಾಗಿದೆ ಎಂದು ಆರೋಪಿಸಿದ್ದಾರೆ.